ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 1 ಬುಧವಾರ 2022

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 46 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4



ಅರಮನೆ ಆವರಣದಲ್ಲಿ ಯೋಗ ದಿನಾಚರಣೆ ಹಿನ್ನೆಲೆ

ಸಂಸದ, ಮುಡಾ ಅಧ್ಯಕ್ಷರಿಂದ ಪರಿಶೀಲನೆ

ನಗರ ಪಾಲಿಕೆ ಆಯುಕ್ತ, ಆಯುಷ್ ಇಲಾಖೆ ಅಧಿಕಾರಿಗಳ ಸಾಥ್



"ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿರುವುದು ಸಂತಸದ ವಿಷಯ. ಅದರಲ್ಲೂ ಅರಮನೆಯಲ್ಲೇ ಯೋಗ ಪ್ರದರ್ಶನ ಆಯೋಜಿಸಿರುವುದು ಒಳ್ಳೆಯ ಸುಸಂದರ್ಭ. ಯುವಕರು ಯೋಗಾಭ್ಯಾಸ ಮಾಡಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು.

–ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್

ಮೈಸೂರು, ಮೇ 31(ಆರ್‌ಕೆ)– ಜೂನ್ 21ರಂದು ಮೈಸೂರಲ್ಲಿ ನಡೆಯುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸುತ್ತಿರುವ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್‌ಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಅರಮನೆ ಆವರಣದಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಮೈಸೂರು ಮಹಾನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡೆಂಟ್ ಇಂಜಿನಿಯರ್ ಮಹೇಶ್, ಆಯುಷ್ ಇಲಾಖೆ ಅಧಿಕಾರಿಗಳೊಂದಿಗೆ ಮೈಸೂರು ಅರಮನೆ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಆಯೋಜಿಸುವ ಕುರಿತು ಸಂಸದ ಪ್ರತಾಪ್ ಸಿಂಹ ಸ್ಥಳ ಪರಿಶೀಲಿಸಿದರು.

ಈ ಸಂದರ್ಭ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಪ್ರತಾಪ್ ಸಿಂಹ, ಮೈಸೂರಿನ ಅರಮನೆ ಆವರಣದಲ್ಲಿ ನಡೆಯುವ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸುತ್ತಿರುವುದರಿಂದ ವೇದಿಕೆ ಸಿದ್ಧಪಡಿಸುವುದು, ಯೋಗ ಮ್ಯಾಟ್, ಧ್ವನಿ ವರ್ಧಕ ಸೇರಿದಂತೆ ಎಲ್ಲಾ ಸಿದ್ಧತಾ ಕಾರ್ಯಗಳನ್ನೂ ಕೇಂದ್ರ ಸರ್ಕಾರವೇ ನಿರ್ವಹಿಸುತ್ತದೆ. ರಾಜ್ಯ ಸರ್ಕಾರದ್ದು ಕೇವಲ ಪೋಷಕ ಪಾತ್ರವಷ್ಟೆ ಎಂದರು.

ಕಾರ್ಯಕ್ರಮಕ್ಕೆ ಜಿಲ್ಲಾಡಳಿತ, ಪಾಲಿಕೆ ಹಾಗೂ ರಾಜ್ಯ ಸರ್ಕಾರವು ಸಹಕಾರ ನೀಡಲಿದೆಯಷ್ಟೆ ಅದನ್ನು ಹೊರತುಪಡಿಸಿ ಅರಮನೆ ಹೊರಗೆ, ಫುಟ್‌ಪಾತ್, ರಸ್ತೆ, ಕಲ್ಲಿನ ಬ್ಯಾರಿಕೇಡ್, ರಾಜಮಾರ್ಗ ಹಾಗೂ ಪ್ರಧಾನ ಮಂತ್ರಿಗಳು ಸಾಗುವ ರಸ್ತೆಗಳ ರಿಪೇರಿ ಕಾಮಗಾರಿಗಳನ್ನು ರಾಜ್ಯ ಸರ್ಕಾರದ ಅನು ದಾನದಲ್ಲಿ ಕೈಗೊಳ್ಳಬೇಕಿರುವುದರಿಂದ ತಾವು ಶೀಘ್ರ ಸಿಎಂ ಭೇಟಿ ಮಾಡಿ ಅನುದಾನ ಬಿಡುಗಡೆ ಮಾಡುವಂತೆ ಕೋರುತ್ತೇನೆ ಎಂದರು.

ಈಗಾಗಲೇ ರಿಂಗ್ ರಸ್ತೆ ಸ್ವಚ್ಛತಾ ಕಾರ್ಯ ಆರಂಭಿಸಲಾಗಿದೆ. ಅದೇ ರೀತಿ ನಂಜನಗೂಡು ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ಗದ್ದಿಗೆ ರಸ್ತೆ ಹಾಗೂ ಹುಣಸೂರು ರಸ್ತೆಗಳ ರಿಪೇರಿ ಮಾಡಲು ಚುನಾವಣಾ ನೀತಿ ಸಂಹಿತೆಯಿಂದ ವಿನಾಯಿತಿ ನೀಡುವಂತೆ ಪಾಲಿಕೆಯಿಂದ ಸರ್ಕಾರಕ್ಕೆ ಪತ್ರ ಮುಖೇನ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಅರಮನೆ ಸುತ್ತಲಿನ ರಸ್ತೆ, ಫುಟ್‌ಪಾತ್ ರಿಪೇರಿ, ಪ್ರಮುಖ ರಸ್ತೆಗಳ ಕಾಮಗಾರಿಗೆ ಟೆಂಡರ್ ಕರೆಯಬೇಕಾಗಿರುವುದರಿಂದ ಸರ್ಕಾರದ ಅನುಮತಿಗಾಗಿ ಪತ್ರ ಬರೆಯಲಾಗಿದೆ. ಚುನಾವಣಾ ನೀತಿ ಸಂಹಿತೆಯಿಂದ ವಿನಾಯಿತಿ ಸಿಗುತ್ತಿದ್ದಂತೆಯೇ ಪ್ರಕ್ರಿಯೆ ಆರಂಭಿಸುವುದಾಗಿ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.

ಮೈಸೂರು ಸರ್ಕಾರಿ ಆಯುರ್ವೇದ ಕಾಲೇಜು ನವೀಕರಣ

ಪಾರಂಪರಿಕ ಕಟ್ಟಡಗಳ ಪುನರುಜ್ಜೀವನ ಅಗತ್ಯ

ನವೀಕೃತ ಕಟ್ಟಡ ವೀಕ್ಷಿಸಿದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮತ

ಮೈಸೂರು, ಮೇ 31(ಆರ್‌ಕೆ)– ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿ ಸಂರಕ್ಷಿಸುವುದು ಅಗತ್ಯ ಎಂದು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.



ಕೇಂದ್ರ ಸರ್ಕಾರದ ಅನುದಾನದಲ್ಲಿ ನವೀಕರಣಗೊಂಡಿರುವ ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಪಾರಂಪರಿಕ ಕಟ್ಟಡ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ಪಾರಂಪರಿಕ ನಗರಿ. ಇಲ್ಲಿನ ಪಾರಂಪರಿಕ ಕಟ್ಟಡಗಳ ವಿನ್ಯಾಸ ನೋಡಲೆಂದು ಪ್ರವಾಸಿಗರು ಬರುತ್ತಾರೆ. ಅವುಗಳನ್ನು ಯಥಾವತ್ತಾಗಿ ರಿಪೇರಿ ಮಾಡಿ ಸಂರಕ್ಷಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ನಮ್ಮಲ್ಲಿ ಹಳೆಯ ಕಟ್ಟಡಗಳನ್ನು ಒಡೆದು ಕಟ್ಟುವುದನ್ನು ಬಿಟ್ಟರೆ ಪುನರುಜ್ಜೀವನಗೊಳಿಸಲು ಮುಂದಾಗುವುದಿಲ್ಲ. ಸಾಂಸ್ಕೃತಿಕ ನಗರಿ ಮೈಸೂರು ಪರಂಪರೆಗೆ ಖ್ಯಾತಿಯಾಗಿದೆ. ಆದರೆ ಒಂದೊಂದಾಗಿ ಇಲ್ಲಿನ ಪಾರಂಪರಿಕ ಕಟ್ಟಡ, ಸ್ಮಾರಕಗಳು ನಾಶವಾಗುವ ಆತಂಕ ಎದುರಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಶಿಥಿಲಾವಸ್ಥೆಯಲ್ಲಿರುವ ಅತಿ ಹಳೆಯ ಪಾರಂಪರಿಕ ಕಟ್ಟಡಗಳನ್ನು ಅದೇ ಸ್ಥಳದಲ್ಲಿ ನವೀಕರಿಸಿ ಸಂರಕ್ಷಿಸಲು ಸ್ವಾಯತ್ತ ಸಂಸ್ಥೆಗಳು ಬದ್ಧವಾಗಬೇಕು. ನೂರು ವರ್ಷಗಳ ಇತಿಹಾಸವಿರುವ ಸರ್ಕಾರಿ ಆಯುರ್ವೇದ ಕಾಲೇಜು ಕಟ್ಟಡವನ್ನು ರಿಪೇರಿ ಮಾಡಿ ಸಂರಕ್ಷಿಸಿರುವ ನಿದರ್ಶನವಿರುವಾಗ ಉಳಿದ ಕಟ್ಟಡಗಳನ್ನು ಅದೇ ರೀತಿ ಪುನರುಜ್ಜೀವನಗೊಳಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಹೊರ ರೋಗಿ ಹಾಗೂ ಒಳರೋಗಿ ವಿಭಾಗಕ್ಕೆ ಭೇಟಿ ನೀಡಿ ಅಲ್ಲಿನ ಚಿಕಿತ್ಸಾ ವಿಧಾನದ ಬಗ್ಗೆ ಪ್ರಾಂಶುಪಾಲ ಗಜಾನನ ಹೆಗ್ಡೆ ಅವರಿಂದ ಮಾಹಿತಿ ಪಡೆದರು. ಕಾಲೇಜು ಕಟ್ಟಡದ ಇತಿಹಾಸದ, ಹಿನ್ನೆಲೆ, ಆಸ್ಪತ್ರೆಯಲ್ಲಿನ ವಿವಿಧ ವಿಭಾಗಗಳಲ್ಲಿ ನೀಡುತ್ತಿರುವ ಚಿಕಿತ್ಸೆ ಆಯುರ್ವೇದ ಔಷಧಗಳ ಕುರಿತಂತೆ ವಿವರಿಸಿದರು.

"'ಪಠ್ಯ ಪುಸ್ತಕ ಪರಿಷ್ಕರಣೆ ಸಂಬಂಧ ರಾಜ್ಯದಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿದೆ. ಆದರೆ ಮಕ್ಕಳಿಗೆ ನಿಖರವಾದ ಹಾಗೂ ಪ್ರಸಕ್ತ ಕಾಲಕ್ಕನುಗುಣವಾಗಿ ಪಠ್ಯ ಅಳವಡಿಸಬೇಕೇ ಹೊರತು, ಇತಿಹಾಸವನ್ನು ತಿದ್ದಬಾರದು. ಈ ವಿಚಾರದಲ್ಲಿ ಲೆಫ್ಟೂ ಬೇಡ, ರೈಟೂ ಬೇಡ ಇತಿಹಾಸವನ್ನು ಇತಿಹಾಸವಾಗಿಯೇ ಬೋಧಿಸುವುದು ಸೂಕ್ತ ಪಾರಂಪರಿಕ ಕಟ್ಟಡಗಳ ಉಳಿವಿಗೆ ಈಗಿರುವ ಟೆಂಡರ್ ಪ್ರಕ್ರಿಯೆ ವಿಧಾನ ಬದಲಾಗಬೇಕು. ಆಯುರ್ವೇದ ಕಾಲೇಜು ಕಟ್ಟಡವನ್ನು ಚೆನ್ನಾಗಿ ಪುನಶ್ಚೇತನಗೊಳಿಸಿರುವಂತೆ ಕ್ರಮ ವಹಿಸುವುದು ಒಳಿತು'.

–ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್

ನಿವೃತ್ತಿ ದಿನದಂದು ಪಿಂಚಣಿ ಬಿಡುಗಡೆ

ಬೆಂಗಳೂರು: 'ಪ್ರಯಾಸ್' (ಪಿಂಚಣಿ ಯೋಜನೆ) ಭಾಗವಾಗಿ, ಇಪಿಎಸ್ ಸದಸ್ಯರಿಗೆ ನಿವೃತ್ತಿ ದಿನದಂದು ಪಿಂಚಣಿ ಬಿಡುಗಡೆ ಮಾಡುವ ನೌಕರರ ಭವಿಷ್ಯ ನಿಧಿ ಸಂಘಟನೆ ಉಪಕ್ರಮವು ಬೆಂಗಳೂರಿನ ಪಿಎಫ್ ಕಚೇರಿಯಲ್ಲಿ ನಡೆಯಿತು. ಎ.ರವಿಕುಮಾರ್, ಪ್ರಾದೇಶಿಕ ಪಿಎಫ್ ಕಮಿಷನರ್–II, ಪ್ರಾದೇಶಿಕ ಕಚೇರಿಯಲ್ಲಿ 58 ವರ್ಷ ಪೂರೈಸಿ ನಿವೃತ್ತರಾದ 33 ಮಂದಿಗೆ ಆದೇಶಪ್ರತಿ ಹಸ್ತಾಂತರಿಸಲಾಯಿತು.

ಮೈಸೂರಿನ ಆತಿಥ್ಯ ಕ್ಷೇತ್ರ ಪೂರ್ಣ ಚೇತರಿಕೆ

- ಏಪ್ರಿಲ್-ಮೇ ತಿಂಗಳಲ್ಲಿ ಮೈಸೂರಿನ ಹೋಟೆಲ್‌ಗಳ ರೂಂಗಳು ಭರ್ತಿ
- ಕೊರೊನಾದಿಂದಾಗಿ ತತ್ತರಿಸಿದ್ದ ಉದ್ಯಮಕ್ಕೆ ಟಾನಿಕ್ ಸಿಕ್ಕಂತಹ ರಜೆ



ಮೈಸೂರು, ಮೇ 31(ಆರ್‌ಕೆ)–ಕೊರೊನಾದಿಂದಾಗಿ ಕಳೆದ 2 ವರ್ಷದಿಂದ ಪ್ರವಾಸಿಗರಿಲ್ಲದೇ ಕಂಗೆಟ್ಟಿದ್ದ ಹೋಟೆಲ್ ಮಾಲೀಕರು, ಈಗ ವಹಿವಾಟು ಸುಧಾರಣೆಯಿಂದ ಖುಷ್ ಆಗಿದ್ದಾರೆ.

ಏಪ್ರಿಲ್ ಮತ್ತು ಮೇ ತಿಂಗಳು ಹೋಟೆಲ್ ಉದ್ಯಮಕ್ಕೆ ಅತೀ ಹೆಚ್ಚು ಆದಾಯ ತರುವ ಅವಧಿ. ಆದರೆ, ಕೋವಿಡ್–19 ನಿರ್ಬಂಧದಿಂದಾಗಿ ಎರಡು ವರ್ಷ ಭಾರೀ ನಷ್ಟ ಅನುಭವಿಸಿದ ಹೋಟೆಲ್ ಮಾಲೀಕರು ಕಂಗಲಾಗಿದ್ದರು.

ಇದೀಗ ಕೊರೊನಾ ಸೋಂಕಿನ ಪ್ರಕರಣಗಳು ಸಂಪೂರ್ಣ ಕಡಿಮೆಯಾಗಿದ್ದು, ಜನರೂ ಭಯದಿಂದ ಮುಕ್ತರಾಗಿರುವುದರಿಂದ ದೇಶ–ವಿದೇಶದ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಿರುವ ಕಾರಣ ಇಲ್ಲಿನ ಎಲ್ಲಾ ಹೋಟೆಲ್‌ಗಳ ರೂಂಗಳು ಭರ್ತಿಯಾಗುತ್ತಿವೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದಾರೆ.

ಜೊತೆಗೆ ಶಾಲಾ–ಕಾಲೇಜುಗಳಿಗೆ ಸಾಲು ಸಾಲು ರಜೆ ಇದ್ದುದರಿಂದ ಏಪ್ರಿಲ್ ಮತ್ತು ಮೇ ಮಾಹೆಯಲ್ಲಿ ಪ್ರವಾಸಿಗರ ದಂಡೇ ಮೈಸೂರಿಗೆ ಬಂದಿತ್ತಲ್ಲದೆ, ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಪ್ರವಾಸಿಗರು ಭೇಟಿ ನೀಡಿದ ಕಾರಣ, ಇಲ್ಲಿನ ಹೋಟೆಲ್ ಕೊಠಡಿಗಳು ಭರ್ತಿಯಾಗಿದ್ದವಲ್ಲದೆ, ತಿಂಡಿ–ಊಟದ ಹೋಟೆಲ್‌ಗಳಿಗೂ ಉತ್ತಮ ವ್ಯಾಪಾರವಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯು ಸೂಪರ್ ಕಮರ್ಷಿಯಲ್ ತೆರಿಗೆಯನ್ನು ಕಡಿಮೆ ಮಾಡಿರುವುದು, ವಿದ್ಯುತ್ ಬಿಲ್‌ನಲ್ಲೂ ರಿಯಾಯಿತಿ ದೊರೆತಿರುವುದರಿಂದ ಹೋಟೆಲ್ ಉದ್ಯಮಕ್ಕೆ ವರದಾನವಾಗಿದೆ. ಅದಕ್ಕೆ ಪೂರಕವಾಗಿ ಸಹಕರಿಸಿದ ಜಿಲ್ಲಾ ಉಸ್ತುವಾರಿ ಸಚಿವರು, ಮೇಯರ್, ಸಂಸದ, ಶಾಸಕರು, ಕಾರ್ಪೊರೇಟರ್ ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಧನ್ಯವಾದ ಹೇಳಿರುವ ನಾರಾಯಣಗೌಡರು, ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಹೋಟೆಲ್‌ನಂತಹ ಆತಿಥ್ಯ ವಲಯವು ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ತಿಳಿಸಿದ್ದಾರೆ.

ಸವಿತಾ ಸಮಾಜದ ಮಕ್ಕಳಿಗೆ ಸರಿಯಾದ ಶಿಕ್ಷಣ ಅಗತ್ಯ: ಎಂಕೆಎಸ್



ಮೈಸೂರು, ಮೇ 31(ಆರ್‌ಕೆಬಿ)– ಎಲ್ಲಾ ಜನಾಂಗಕ್ಕೂ ಅವಲಂಬಿತವಾದ ಸವಿತಾ ಸಮಾಜಕ್ಕೆ ಸರಿಯಾದ ಸೌಲಭ್ಯ, ಮೀಸಲಾತಿ, ಸರ್ಕಾರಿ ಯೋಜನೆಗಳು ದೊರಕದಿರುವುದು ವಿಪರ್ಯಾಸ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸವಿತಾ ಸಮಾಜ ಮೀಸಲಾತಿ ಹೋರಾಟ ಸಮಿತಿ ಆಯೋಜಿಸಿದ್ದ ಚಲನ ಚಿತ್ರ ನಟ, ಸವಿತಾ ಸಮಾಜ ಮುಖಂಡ ಡಾ.ಎಂ.ಎಸ್. ಮುತ್ತುರಾಜ್ ಅವರಿಗೆ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮುತ್ತುರಾಜ್ ಅವರು ಕುಲ ಕಸುಬಿನಿಂದಲೇ ಎತ್ತರಕ್ಕೆ ಬೆಳದಿದ್ದಾರೆ. ಅಂತಹ ಸಮಾಜ ಮುಖಿ ವ್ಯಕ್ತಿತ್ವ ಮೀಸಲಾತಿ ಹೋರಾಟದ ನೇತೃತ್ವ ವಹಿಸಿರುವುದು ಶ್ಲಾಘನೀಯ. ಅಂತಹ ವ್ಯಕ್ತಿಗೆ ಡಾಕ್ಟರೇಟ್ ಗೌರವ ಸಿಕ್ಕಿರುವುದು ಸಮುದಾಯದವರು ಸಂತೋಷಪಡಬೇಕಾದ ವಿಚಾರ ಎಂದರು. ಸವಿತಾ ಸಮಾಜದ ಮುಖಂಡರು ವೈಯಕ್ತಿಕ ಹಿತಾಸಕ್ತಿ, ಗುಂಪುಗಾರಿಕೆಗೆ ಅವಕಾಶ ನೀಡದೆ ಒಗ್ಗಟ್ಟು ಪ್ರದರ್ಶಿಸಿದರೆ ಸರ್ಕಾರ ನಿಮ್ಮ ನೋವಿಗೆ ದನಿಯಾಗ ಬಲ್ಲದು. ಆಗಲೇ ಸಮಾಜ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುವುದು ಎಂದು ಹೇಳಿದರು.

ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಮಾತನಾಡಿ, ಎಲ್ಲರನ್ನೂ ಅಪ್ಪಿಕೊಳ್ಳುವ, ಒಪ್ಪಿಕೊಳ್ಳುವ ಸಮಾಜ ತನ್ನ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿರುವುದು ನೋವಿನ ಸಂಗತಿ. ಈ ಸಂಧರ್ಭದಲ್ಲಿ ದಿ.ದೇವರಾಜ ಅರಸು ಅವರನ್ನು ನೆನೆಯದೇ ಹೋದರೆ ಇಂತಹ ಮೀಸಲಾತಿ ಹೋರಾಟಗಳಿಗೆ ಮೌಲ್ಯ ಬರುವುದಿಲ್ಲ. ಅರಸು ಅವರು ಹಾವನೂರು ಆಯೋಗದ ವರದಿಯನ್ನು ಶಿಫಾರಸ್ಸು ಮಾಡದೇ ಹೋಗಿದ್ದರೆ ಇಂದು ಈಗ ದೊರೆತಿರುವ ಮೀಸಲಾತಿಯೂ ಕೈಗೆಟಕುತ್ತಿರಲಿಲ್ಲ. ಹಾಗಾಗಿ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಅಭ್ಯುದ್ಯಯಕ್ಕಾಗಿ ದುಡಿದ ಡಿ.ದೇವರಾಜ ಅರಸು ಅವರದೇ ಹಾದಿಯಲ್ಲಿ ಸಿದ್ದರಾಮಯ್ಯ ಮುನ್ನಡೆಯುತ್ತಿದ್ದಾರೆ. ಸಮುದಾಯದ ಸ್ವಾಭಿಮಾನದ ಹಕ್ಕು ರಕ್ಷಣೆಯಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯರಾದ ಎಂ.ಸಿ. ಚಿಕ್ಕಣ್ಣ, ಮುಖಂಡರಾದ ಮಂಜುನಾಥ್, ನಾಗರತ್ನ, ರಾಜ್‌ಕುಮಾರ್, ರಾಜೇಸ್ ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರನ್ನು ಗೆಲ್ಲಿಸಿ



ಮೈಸೂರು, ಮೆ. 31(ಎಂಟಿವೈ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ. ಮಾದೇಗೌಡರ ಗೆಲುವಿಗೆ ಕಾರ್ಯಕರ್ತರು ಶ್ರಮಿಸಬೇಕೆಂದು ಜಿ. ಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡ ನೀಡಿದ್ದಾರೆ.

ಮೈಸೂರಿನ ರಾಮಕೃಷ್ಣನಗರದಲ್ಲಿ ಖಾಸಗಿ ಸಭಾಂಗಣದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಮತಯಾಚಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷಕ್ಕೆ 135 ವರ್ಷಗಳ ಇತಿಹಾಸವಿದ್ದು, ಈ ದೇಶವನ್ನು ಕಾಂಗ್ರೆಸ್ ಪಕ್ಷ ಕಟ್ಟಿದೆ. ಆದರೆ ಈಗ ಸಮಾಜದಲ್ಲಿ ಶಾಂತಿ ಮತ್ತು ನೆಮ್ಮದಿಯಿಂದ ಬದುಕಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಇದೇ ವೇಳೆ ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ನಾಗರಾಜ್, ಉದ್ಬೂರು ಗ್ರಾ.ಪಂ. ಅಧ್ಯಕ್ಷ ಕೃಷ್ಣ, ನಾಗವಾಲ ಗ್ರಾ.ಪಂ. ಅಧ್ಯಕ್ಷ ನರೇಂದ್ರ ಮಾತನಾಡಿದರು.

ಸಭೆಯಲ್ಲಿ ಮಾಜಿ ಮೇಯರ್ ಟಿ.ಬಿ. ಚಿಕ್ಕಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ರಘು, ಸಿಂಡಿಕೇಟ್ ಮಾಜಿ ಸದಸ್ಯ ಎಂ ಎಸ್‌ಎಸ್.ಕುಮಾರ್, ಜಿ.ಪಂ. ಮಾಜಿ ಸದಸ್ಯರಾದ ಜವರಪ್ಪ, ಕೂರ್ಗಳ್ಳಿ ಮಹಾದೇವ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಸತೀಶ್‌ಕುಮಾರ್, ಜೇಸುದಾಸ್, ಉಮಾಶಂಕರ್, ತಾಪಂ. ಮಾಜಿ ಸದಸ್ಯರಾದ ಕೆಂಚಪ್ಪ, ಜಿ.ಕೆ. ಬಸವಣ್ಣ, ಸಿ.ಎಂ.ಸಿದ್ದರಾಮೇಗೌಡ, ಧನಗಳ್ಳಿ ಬಸವರಾಜು, ಮುಖಂಡರಾದ ಜೆ.ಜೆ.ಆನಂದ್, ಹಿನಕಲ್ ಪ್ರಕಾಶ್, ಹರೀಶ್ ಮೊಗಣ್ಣ, ನಜರ್‌ಬಾದ್ ನಟರಾಜ್, ಕೃಷ್ಣಕುಮಾರ್ ಸಾಗರ್, ಹಂಚ್ಯಾ ಸಣ್ಣಸ್ವಾಮಿ, ಸೋಮಣ್ಣ, ರಾಣಿಪ್ರಭಾ, ದಿಡ್ಡಹಳ್ಳಿ ಮಹೇಂದ್ರ, ಹೂಟಗಳ್ಳಿ ಮಹೇಶ್, ಕೇರ್ಗಳ್ಳಿ ಬಸವೇಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮರಕ್ಕೆ ಬೈಕ್ ಡಿಕ್ಕಿ: ವಿದ್ಯಾರ್ಥಿ ಸಾವು

ಮೈಸೂರು, ಮೇ 31–ಬೈಕ್ ರಸ್ತೆ ವಿಭಜಕಕ್ಕೆ ಗುದ್ದಿ ನಂತರ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿ ಸಾವಿಗೀಡಾದ ಘಟನೆ ಮೈಸೂರಿನ ಎರಡನೇ ಈದ್ಗಾ ಮೈದಾನದ ಬಳಿ ಮೇ 29ರಂದು ಸಂಜೆ ಸಂಭವಿಸಿದೆ.

ಕೊಳ್ಳೇಗಾಲ ತಾಲೂಕು ಉತ್ತುಬಳ್ಳಿ ಗ್ರಾಮದ ಸಂತೋಷ್ ಕುಮಾರ್ ಎಂಬುವರ ಪುತ್ರ ಚಂದ್ರಶೇಖರ್ (22) ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಈತ ತನ್ನ ಸ್ನೇಹಿತನ ಟಿವಿಎಸ್ ಆರ್‌ಆರ್ 310 ಮೋಟಾರ್ ಬೈಕ್ (ಟಿಎನ್ 11 ಎಕೆ 8689)ನಲ್ಲಿ ಶಾಲಿಮಾರ್ ಟಾಕೀಸ್ ರಸ್ತೆಯಲ್ಲಿ ಹೈವೇ ವೃತ್ತದ ಕಡೆಗೆ ಬರುತ್ತಿದ್ದಾಗ ನಿಯಂತ್ರಣ ಕಳೆದುಕೊಂಡ ಬೈಕ್ ರಸ್ತೆ ವಿಭಜಕದ ಮೇಲಿರುವ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡ. ಆತನನ್ನು ಮಿಷನ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಆತ ಮೃತಪಟ್ಟಿದ್ದಾನೆ. ಈ ಸಂಬಂಧ ಎನ್.ಆರ್.ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಾಳೆಯಿಂದ ನಾಲ್ಕು ದಿನ ಎನ್‌ಐಇ ಕಾಲೇಜಲ್ಲಿ

ಟೆಕ್ನಿಕ್ಸ್-2022 ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ

ಮೈಸೂರು, ಮೇ 31(ಆರ್‌ಕೆಬಿ)– ಎನ್‌ಐಇ ಎಂಜಿನಿಯರಿಂಗ್ ಕಾಲೇಜು ವತಿಯಿಂದ ಜೂ.2ರಿಂದ 4ರವರೆಗೆ ಟೆಕ್ನಿಕ್ಸ್–2022 ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ ಆಯೋಜಿಸಲಾಗಿದೆ ಎಂದು ವಿದ್ಯಾರ್ಥಿ ಕ್ಷೇಮಪಾಲನಾ ಸಮಿತಿ ಅಧ್ಯಕ್ಷೆ ಡಾ.ಎಂ.ವಿ.ದೀಪಾ ಅರಸ್ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.2ರಂದು ಬೆಳಗ್ಗೆ 11ಕ್ಕೆ ಕಾಲೇಜಿನ ಡೈಮಂಡ್ ಜುಬಿಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಖ್ಯಾತ ನಟ ಅಜಯ್ ಎಚ್.ರಾವ್ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಬಳಿಕ ಬ್ಯಾಟಲ್ ಆಫ್ ಬ್ಯಾಂಡ್ ಎಂಬ ರಾಷ್ಟ್ರೀಯ ಮಟ್ಟದ ಬ್ಯಾಂಡ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ಮಟ್ಟದ ಅನೇಕ ಬ್ಯಾಂಡ್‌ಗಳು ವಿಭಿನ್ನ ಶೈಲಿಗಳ ಶ್ರೇಣಿಯೊಂದಿಗೆ ತಮ್ಮ ಸಂಗೀತ ಪ್ರದರ್ಶಿಸಲಿದ್ದಾರೆ. ನಂತರ 'ಘಟ್ ಲೂಸ್' ನೃತ್ಯ ಕಾರ್ಯಕ್ರಮ ನಡೆಯಲಿದೆ.

ಜೂ.3ರಂದು ಬೆಳಗ್ಗೆ 11ಕ್ಕೆ ಕನ್ನಡ ದಿನ ಕಾರ್ಯಕ್ರಮವಿದ್ದು, ಶ್ರೇಷ್ಠ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ, ಡಾ.ಸುದರ್ಶನ ಪಾಟೀಲ್ ಕುಲಕರ್ಣಿ, ಪದ್ಮಶ್ರೀ ಪುರಸ್ಕೃತ ಮತ್ತು ಸುಧರ್ಮ ಪ್ರಕಾಶನ ಸಂಪಾದಕರಾದ ಜಯಲಕ್ಷ್ಮೀ ಸಂಪತ್‌ಕುಮಾರ್ ಭಾಗವಹಿಸುವರು. ನಂತರ 'ಭಾವನೆಗಳು' ವಿಷಯ ಕುರಿತು ರಾಷ್ಟ್ರೀಯ ಛಾಯಾಗ್ರಹಣ ಸ್ಪರ್ಧೆ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಜೂ.4ರಂದು ಬೆಳಗ್ಗೆ 11ಕ್ಕೆ ಎನ್‌ಐಇ ಹಳೆ ವಿದ್ಯಾರ್ಥಿಗಳ ಸಮಾವೇಶ, ಸಂಜೆ ಸಾಂಸ್ಕೃತಿಕ ಕಾರ್ಯಕ್ರಮ, ಫ್ಯಾಷನ್ ಶೋ ಕಾರ್ಯಕ್ರಮಗಳು ಇರಲಿವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿ ಎಸ್.ಆರ್.ಗಾಯಕ್‌ವಾಡ್, ಧ್ರುವಕುಮಾರ್, ಧರಿತ್ರಿ, ಆರ್ಯ, ಚಂದನ್ ಉಪಸ್ಥಿತರಿದ್ದರು.

ಹಿರಿಯ ಪತ್ರಕರ್ತ ಪದ್ಮನಾಭ್ ನಿಧನ



ಮೈಸೂರು, ಮೇ 31– ಹಿರಿಯ ಪತ್ರಕರ್ತ ಎಸ್.ಪದ್ಮನಾಭ್ (83) ಸೋಮವಾರ ನಿಧನರಾದರು. ತಿ.ನರಸೀಪುರ ರಸ್ತೆಯಲ್ಲಿರುವ ವಾಸವಿ ಶಾಂತಿಧಾಮದಲ್ಲಿ ಅವರು ವಾಸವಾಗಿದ್ದ ಮೃತರು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಹಲವಾರು ವರ್ಷ ಕಾರ್ಯನಿರ್ವಹಿಸಿದ್ದರಲ್ಲದೆ, ಸಿನಿಮಾ ಪತ್ರಕರ್ತರಾಗಿಯೂ ದುಡಿದಿದ್ದರು. ಇವರು ಸಿನಿಮಾ ನಟರಾಗಿದ್ದ ಚೇತನ್ ರಾಮರಾವ್ ಅವರ ಸೋದರ. ಮೃತರ ಪತ್ನಿ, ನಿವೃತ್ತ ಶಿಕ್ಷಕಿಯಾಗಿದ್ದ ನಾಗರತ್ನ ಅವರು ಕಳೆದ ವರ್ಷ ಕೋವಿಡ್‌ನಿಂದ ನಿಧನರಾಗಿದ್ದರು. ಅವರ ಪುತ್ರಿ ಲತಾ ಅವರು ಅಮೆರಿಕದಿಂದ ಬರಲಿದ್ದು, ಬುಧವಾರ (ಜೂನ್ 1) ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಯುವತಿ ನಾಪತ್ತೆ

ಮೈಸೂರು, ಮೇ 31–ಯುವತಿಯೊಬ್ಬರು ಕಾಣೆಯಾಗಿರುವ ಬಗ್ಗೆ ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಚಾಂದಿನಿ ಕೆ.ಎಸ್.(23) ಕಾಣೆಯಾದ ಯುವತಿ. ಈಕೆ ಮೇ 28ರಂದು ಕೆ.ಆರ್.ನಗರದಲ್ಲಿರುವ ಅಪ್ಪ-ಅಮ್ಮನ ಮನೆಗೆ ಹೋಗುವುದಾಗಿ ಹೇಳಿ ಹೋದವರು ತಾನು ಮದುವೆಯಾಗಿರುವುದಾಗಿ ತನಗೆ ಮೊಬೈಲ್ ಮೂಲಕ ಮೆಸೇಜ್ ಮಾಡಿದ್ದಾರೆ ಎಂದು ಚಾಂದಿನಿ ಅಕ್ಕ ಚಿತ್ರಾ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈಕೆ ಬಗ್ಗೆ ಸುಳಿವು ಸಿಕ್ಕವರು ದೂ: 0821–2418339 ಮೂಲಕ ಸಂಪರ್ಕಿಸಿ ತಿಳಿಸಲು ಪೊಲೀಸರ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 01 ಬುಧವಾರ 2022

ಸಂಪುಟ: 43 | ಸಂಚಿಕೆ: 46 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ರಾಜ್ಯಸಭಾ ಚುನಾವಣೆಯಲ್ಲಿ ಕುದುರೆ ವ್ಯಾಪಾರ?

ನಾಲ್ಕನೇ ಸ್ಥಾನಕ್ಕಾಗಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಕಸರತ್ತು

- ಜೆಡಿಎಸ್‌ಗೆ ಕೋಮುವಾದಿ ಪಟ್ಟ ಕಟ್ಟಲು ಕಾಂಗ್ರೆಸ್ ತಂತ್ರ
- ಕಾಂಗ್ರೆಸ್‌ನಿಂದ ಮತ ಸೆಳೆಯಲು ಜೆಡಿಎಸ್ ಸರ್ವ ಪ್ರಯತ್ನ
- ಬಿಜೆಪಿ ನಡೆ ನಿಗೂಢ
- 4 ಸ್ಥಾನಗಳಿಗೆ 6 ನಾಮಪತ್ರ ಸಲ್ಲಿಕೆ

ಬೆಂಗಳೂರು,ಮೇ 31 (ಕೆಎಂಶಿ)–ರಾಜ್ಯಸಭೆಯ ನಾಲ್ಕನೇ ಸ್ಥಾನಕ್ಕಾಗಿ ಕಸರತ್ತು ನಡೆಸುತ್ತಿರುವ ಮೂರು ರಾಜಕೀಯ ಪಕ್ಷಗಳು ಉದ್ದಿಮೆದಾರರನ್ನು ಕಣಕ್ಕಿಳಿಸಿ, ಕುದುರೆ ವ್ಯಾಪಾರಕ್ಕೆ ರಹದಾರಿ ಮಾಡಿಕೊಟ್ಟಿವೆ.

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಜೂನ್ 10ರಂದು ಚುನಾವಣೆ ನಡೆಯಲಿದ್ದು, ಹಾಲಿ ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಬಿಜೆಪಿ ಎರಡು, ಕಾಂಗ್ರೆಸ್ ಒಂದು ಸ್ಥಾನಗಳನ್ನು ಮೊದಲ ಪ್ರಾಶಸ್ತ್ಯದ ಮತಗಳ ಆಧಾರದ ಮೇಲೆ ಜಯಗಳಿಸಲಿವೆ. ಉಳಿದ ಒಂದು ಸ್ಥಾನಕ್ಕೆ ಯಾರ ಬಳಿಯೂ ಮೊದಲ ಪ್ರಾಶಸ್ತ್ಯ 46 ಮತಗಳಿಲ್ಲ. ಮೊದಲ ಪ್ರಾಶಸ್ತ್ಯದ ಮೇಲೆ ಗೆಲ್ಲಬಹುದಾದ ಸ್ಥಾನಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಚಿತ್ರನಟ ಜಗ್ಗೇಶ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ರಾಷ್ಟ್ರೀಯ ಕಾಂಗ್ರೆಸ್‌ನ ಚಿಂತಕರ ಚಾವಡಿಯಲ್ಲಿರುವ ಜಯರಾಂ ರಮೇಶ್ ಅವರನ್ನು ಮತ್ತೆ ಕಣಕ್ಕಿಳಿಸಿದ್ದು, ಅವರು ಮೊದಲ ಪ್ರಾಶಸ್ತ್ಯ ಮತಗಳಿಂದ ಎರಡನೇ ಬಾರಿಗೆ ರಾಜ್ಯಸಭೆ ಪ್ರವೇಶಿಸಲಿದ್ದಾರೆ.

ಇನ್ನು ಉಳಿದ 1 ಸ್ಥಾನಕ್ಕೆ ಬಿಜೆಪಿಯಿಂದ ಲೇಹರ್‌ಸಿಂಗ್, ಜೆಡಿಎಸ್‌ನಿಂದ ಕುಪೇಂದ್ರ ರೆಡ್ಡಿ ಹಾಗೂ ಕಾಂಗ್ರೆಸ್‌ನಿಂದ ಮನ್ಸೂರ್ ಅಲಿಖಾನ್ ಕಣಕ್ಕಿಳಿದಿದ್ದು, ಇವರೆಲ್ಲರೂ ಉದ್ದಿಮೆದಾರರು. 4ನೇ ಸ್ಥಾನ ಪಡೆಯಲು ಮೂರೂ ಪಕ್ಷಗಳಿಗೂ 4ನೇ ಅಭ್ಯರ್ಥಿ ಆಯ್ಕೆಗೆ ಪೂರ್ಣ ಮತಗಳಿಲ್ಲ. ಆದರೆ ಆ ಸ್ಥಾನ ಪಡೆಯಲು ಜೆಡಿಎಸ್ ಮತ್ತು ಬಿಜೆಪಿ ಪೈಪೋಟಿಗೆ ಇಳಿದಿವೆ. ಕಾಂಗ್ರೆಸ್ ನೆಪಮಾತ್ರಕ್ಕೆ ಕಣದಲ್ಲಿದ್ದು, ಅದರ ಉದ್ದೇಶ ಜೆಡಿಎಸ್ ಅಭ್ಯರ್ಥಿಯನ್ನು ಸೋಲಿಸುವುದಾಗಿದೆ ಎನ್ನಲಾಗಿದೆ. ಮೊದಲ ಪ್ರಾಶಸ್ತ್ಯ ಮೂಲಕ ಒಬ್ಬ ಅಭ್ಯರ್ಥಿ 46 ಮತ ಪಡೆಯಬೇಕು. ವಿಧಾನಸಭೆಯಲ್ಲಿ ಒಬ್ಬ ಪಕ್ಷೇತರ ಬೆಂಬಲದಿಂದ 122 ಸದಸ್ಯರನ್ನು ಹೊಂದಿರುವ ಬಿಜೆಪಿ, ತನ್ನ ಮೊದಲ ಇಬ್ಬರು ಅಭ್ಯರ್ಥಿಗಳಿಗೆ ಮುನ್ನೆಚ್ಚರಿಕೆಯಾಗಿ 94 ಮತಗಳನ್ನು ನಿಗದಿಪಡಿಸಿದರೆ, ಆ ಪಕ್ಷಕ್ಕೆ ಇನ್ನೂ 28 ಮತಗಳು ಉಳಿಯಲಿವೆ. ಕಾಂಗ್ರೆಸ್ ತನ್ನ ▶ 9ನೇ ಪುಟಕ್ಕೆ


ಕೇಂದ್ರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಗಳವಾರ ನಾಮಪತ್ರ ಸಲ್ಲಿಸಿದರು. ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಶಾಸಕ ಮುನಿರತ್ನ ಇನ್ನಿತರರು ಉಪಸ್ಥಿತರಿದ್ದರು.

ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ವಂದಿತಾ ಶರ್ಮಾ ಅಧಿಕಾರ ಸ್ವೀಕಾರ

ಬೆಂಗಳೂರು, ಮೇ 31– ಭಾರತೀಯ ಆಡಳಿತ ಸೇವೆಯ ಹಿರಿಯ ಅಧಿಕಾರಿ ವಂದಿತಾ ಶರ್ಮಾ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಮಂಗಳವಾರ ಸಂಜೆ ಅಧಿಕಾರ ಸ್ವೀಕರಿಸಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಪಿ.ರವಿಕುಮಾರ್ ಅವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆಗೆ ಕರ್ನಾಟಕ ವೃಂದದ ಭಾರತೀಯ ಆಡಳಿತ ಸೇವೆಯ 1986ನೇ ಸಾಲಿನ ತಂಡದ ವಂದಿತಾ ಶರ್ಮಾ



ಉತ್ತರಾಧಿಕಾರಿಯಾಗಿದ್ದಾರೆ. ವಂದಿತಾ ಶರ್ಮಾ ಅವರು ರಾಜ್ಯದಲ್ಲಿ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನು ಅಲಂಕರಿಸುತ್ತಿರುವ 4ನೇ ಮಹಿಳೆಯಾಗಿದ್ದಾರೆ. ಅಂತೆಯೇ, ರಾಜ್ಯ ಸರ್ಕಾರದ 39ನೇ ಮುಖ್ಯ ಕಾರ್ಯದರ್ಶಿಯಾಗಿದ್ದಾರೆ. ▶ 9ನೇ ಪುಟಕ್ಕೆ

ಡಿ.ಕೆ.ಶಿವಕುಮಾರ್‌ಗೆ ದೆಹಲಿ ನ್ಯಾಯಾಲಯದ ಸಮನ್ಸ್



ನವದೆಹಲಿ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ಇಡಿಯಿಂದ ಆರೋಪ ಪಟ್ಟಿ ದಾಖಲಾದ ಬೆನ್ನಲ್ಲೇ, 2018ರಲ್ಲಿ ಡಿಕೆಶಿ ವಿರುದ್ಧ ದಾಖಲಾಗಿರುವ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ನ್ಯಾಯಾಲಯವೊಂದು ಮಂಗಳವಾರ ಡಿ.ಕೆ.ಶಿವಕುಮಾರ್ ಮತ್ತಿತರರಿಗೆ ಸಮನ್ಸ್ ನೀಡಿದೆ. ಜುಲೈ 1ರಂದು ವಿಚಾರಣೆಗೆ ಹಾಜರಾಗುವಂತೆ ವಿಶೇಷ ನ್ಯಾಯಾಧೀಶ ವಿಕಾಸ್ ಧುಲೆ ಡಿ.ಕೆ.ಶಿವಕುಮಾರ್‌ಗೆ ನಿರ್ದೇಶಿಸಿದ್ದಾರೆ. ಡಿಕೆ.ಶಿವಕುಮಾರ್ ಮತ್ತಿತರರ ವಿರುದ್ಧ ವಿಶೇಷ ಪ್ರಾಸಿಕ್ಯೂಟರ್ ನಿತೇಶ್ ರಾಣಾ ಅವರ ಮೂಲಕ ಇಡಿ ಸಲ್ಲಿಸಿದ ಚಾರ್ಜ್‌ಶೀಟ್‌ನ್ನು ಪರಿಗಣಿಸಿದ ನಂತರ ಕೋರ್ಟ್ ಈ ಆದೇಶ ನೀಡಿದೆ. ▶ 9ನೇ ಪುಟಕ್ಕೆ

ಶೀಘ್ರವೇ ಕೇಂದ್ರ ಸಚಿವ ಸಂಪುಟ ಪುನಾರಚನೆ?

ನವದೆಹಲಿ, ಮೇ 31– ಈಗಾಗಲೇ ರಾಜ್ಯಸಭಾ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳನ್ನು ಘೋಷಿಸಿದ್ದು, ಇದರಲ್ಲಿ ರಾಜ್ಯಸಭೆಯಿಂದ ಆಯ್ಕೆಯಾಗಿರುವ ಅನೇಕ ಕೇಂದ್ರ ಸಚಿವರ ಹೆಸರು ಪಟ್ಟಿಯಲ್ಲಿಲ್ಲ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಸದ್ಯದಲ್ಲೇ ಸಚಿವ ಸಂಪುಟ ಪುನಾರಚನೆ ಮಾಡುವ ಸಾಧ್ಯತೆ ಇದೆ.

ಜೂ.10ರಂದು ನಡೆಯಲಿರುವ ರಾಜ್ಯಸಭಾ ಚುನಾವಣೆಗೆ ಎಲ್ಲಾ ಪಕ್ಷಗಳೂ ಈಗಾಗಲೇ ತಮ್ಮ ಅಭ್ಯರ್ಥಿಗಳನ್ನು ಘೋಷಿಸಿವೆ. ಬಿಜೆಪಿಯೂ ಘೋಷಿಸಿದೆ. ಆದರೆ ಈಗಾಗಲೇ ರಾಜ್ಯಸಭೆಯಿಂದ ಆಯ್ಕೆ ಆಗಿ ಸಚಿವರಾಗಿರುವ ಅನೇಕರಿಗೆ ಈ ಬಾರಿಯ ▶ 9ನೇ ಪುಟಕ್ಕೆ

2022 ವಿತ್ತೀಯ ವರ್ಷದಲ್ಲಿ 500 ರೂ. ಮುಖಬೆಲೆಯ 79,669 ನಕಲಿ ನೋಟುಗಳ ಪತ್ತೆ

ಬೆಂಗಳೂರು, ಮೇ 31– ನಕಲಿ ನೋಟುಗಳ ಚಲಾವಣೆಗೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ನೋಟು ರದ್ದತಿ ಮಾಡಿ ಹೊಸ ನೋಟುಗಳನ್ನು ಚಲಾವಣೆಗೆ ತಂದಿತ್ತು. ಇದರಿಂದ ನಕಲಿ ನೋಟು ತಯಾರಿಕೆಗೆ ಬ್ರೇಕ್ ಬಿದ್ದಿದೆ ಎಂದೇ ಹೇಳಲಾಗಿತ್ತು. ಆದರೆ ಈ ವಾದಕ್ಕೆ ತದ್ವಿರುದ್ಧ ಎಂಬಂತೆ ಭಾರತೀಯ ರಿಸರ್ವ್ ಬ್ಯಾಂಕ್ ಮಾಹಿತಿಯೊಂದನ್ನು ಹಂಚಿಕೊಂಡಿದ್ದು, 2022 ವಿತ್ತೀಯ ವರ್ಷದಲ್ಲಿ 500 ರೂ ಮುಖಬೆಲೆಯ 79,669 ನಕಲಿ ನೋಟುಗಳು ಪತ್ತೆಯಾಗಿವೆ ಎಂದು ಹೇಳಿದೆ.

ಆರ್‌ಬಿಐ ಆಘಾತಕಾರಿ ಮಾಹಿತಿ

2022 ವಿತ್ತೀಯ ವರ್ಷದಲ್ಲಿ 500 ರೂ ಮುಖಬೆಲೆಯ 79,669 ನಕಲಿ ನೋಟುಗಳ ಪತ್ತೆಯಾಗಿದ್ದು, ಹಿಂದಿನ ಹಣಕಾಸು ವರ್ಷದಲ್ಲಿ (2020–21) ಒಟ್ಟು 2.08 ಲಕ್ಷ ನಕಲಿ ನೋಟುಗಳು ಪತ್ತೆಯಾಗಿದ್ದವು. ಅದರಂತೆ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ದೇಶದಲ್ಲಿ ಒಟ್ಟು 2.30 ಲಕ್ಷ ನಕಲಿ ನೋಟುಗಳು ಪತ್ತೆಯಾಗಿವೆ.

ದ್ವಿಗುಣಗೊಂಡ ನಕಲಿ ನೋಟುಗಳ ಪ್ರಮಾಣ: 2019–20ನೆಯ ಹಣಕಾಸು ವರ್ಷದಲ್ಲಿ ಪತ್ತೆಯಾದ ನಕಲಿ ನೋಟುಗಳ ಒಟ್ಟು ಸಂಖ್ಯೆಗೆ ಹೋಲಿಸಿದರೆ ಇದು ಕಡಿಮೆ. ಆ ವರ್ಷದಲ್ಲಿ ಒಟ್ಟು 2.96 ಲಕ್ಷ ನಕಲಿ ನೋಟುಗಳು ಪತ್ತೆಯಾಗಿದ್ದವು. 100 ರೂ ಮುಖ ಬೆಲೆಯ 92,237 ನಕಲಿ ನೋಟುಗಳು 2021–22ನೇ ಹಣಕಾಸು ವರ್ಷದಲ್ಲಿ ಪತ್ತೆಯಾಗಿವೆ ಎಂದು ಆರ್‌ಬಿಐ ವಾರ್ಷಿಕ ವರದಿ ತಿಳಿಸಿದೆ.

2023ನೇ ಸಾಲಿನ ಪದ್ಮ ಪ್ರಶಸ್ತಿಗೆ ನಾಮ ನಿರ್ದೇಶನ ಮಾಡಲು ಸೆ.15ರವರೆಗೆ ಅವಕಾಶ

ನವದೆಹಲಿ, ಮೇ 31– 2023ನೇ ಸಾಲಿನ ಪದ್ಮ ಪ್ರಶಸ್ತಿಗೆ ನಾಮ ನಿರ್ದೇಶನ ಮತ್ತು ಶಿಫಾರಸು ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶವಿದ್ದು ಪ್ರಶಸ್ತಿ ಪುರಸ್ಕೃತರ ಹೆಸರುಗಳನ್ನು ಮುಂದಿನ ವರ್ಷ ಗಣರಾಜ್ಯೋತ್ಸವ ದಿನ ಘೋಷಿಸಲಾಗುವುದು ಎಂದು ಗೃಹ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಪದ್ಮ ಪ್ರಶಸ್ತಿಗೆ ಹೆಸರುಗಳನ್ನು ಸೂಚಿಸಲು ಸೆಪ್ಟೆಂಬರ್ 15 ಕೊನೆಯ ದಿನವಾಗಿದೆ. ಪದ್ಮ ಪ್ರಶಸ್ತಿಗೆ ಹೆಸರು, ಶಿಫಾರಸುಗಳನ್ನು ಆನ್‌ಲೈನ್ ಮೂಲಕ ಮಾತ್ರ ಅದರ ರಾಷ್ಟ್ರೀಯ ಪ್ರಶಸ್ತಿ ಪೋರ್ಟಲ್‌ನಲ್ಲಿ ಅಧಿಕೃತ ವೆಬ್‌ಸೈಟ್‌ನಲ್ಲಿ ಮಾತ್ರ ಸ್ವೀಕರಿಸಲಾಗುತ್ತದೆ. ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಪದ್ಮ ವಿಭೂಷಣ, ಪದ್ಮ ಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳು ಒಳಗೊಂಡಿರುತ್ತದೆ. 1954ರಲ್ಲಿ ಸ್ಥಾಪಿಸಲಾದ ಪದ್ಮ ಪ್ರಶಸ್ತಿಗಳನ್ನು ಪ್ರತಿ ವರ್ಷ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಘೋಷಿಸಲಾಗುತ್ತದೆ. ಪ್ರಶಸ್ತಿಯು ದೇಶದಲ್ಲಿ ಯಾವುದೇ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮೆರೆದ ನಾಗರಿಕರನ್ನು ಗುರುತಿಸುವುದಾಗಿರುತ್ತದೆ. ಕಲೆ, ಸಾಹಿತ್ಯ ಮತ್ತು ಶಿಕ್ಷಣ, ಕ್ರೀಡೆ, ವೈದ್ಯಕೀಯ, ಸಮಾಜ ಕಾರ್ಯ, ವಿಜ್ಞಾನ ಮತ್ತು ಎಂಜಿನಿಯರಿಂಗ್, ಸಾರ್ವಜನಿಕ ವ್ಯವಹಾರಗಳು, ನಾಗರಿಕ ಸೇವೆಗಳಂತಹ ಹೀಗೆ ಹಲವು ಕ್ಷೇತ್ರಗಳಲ್ಲಿ ವಿಶಿಷ್ಟ ಮತ್ತು ಅಸಾಧಾರಣ ಸಾಧನೆ ಮಾಡಿದವರಿಗೆ ನೀಡಲಾಗುತ್ತದೆ.

ನಕ್ಕರೆ ಅದೇ ಸ್ವರ್ಗ

ನ್ಯಾಯಾಧೀಶರು (ಕಟಕಟೆಯಲ್ಲಿ ನಿಂತಿದ್ದ ಆರೋಪಿಗೆ) : "ತೀರ್ಪಿಗೆ ಮುಂಚೆ ನಿಮಗೆ ನೆನಪಿಸುವುದೇನೆಂದರೆ ಇಲ್ಲಿಗೆ ನಿಮ್ಮನ್ನು ಕರೆ ತಂದಿರುವುದು ಕುಡಿತದ ಕಾರಣಕ್ಕಾಗಿ"

ಆರೋಪಿ : "ಇಲ್ಲ ಸಾರ್, ಈಗಾಗಲೇ ಹೆಚ್ಚಾಗಿದೆ. ಇನ್ನೊಂದು ತೊಟ್ಟೂ ಕುಡಿಯಲಾರೆ!"

ಮೈಸೂರು ಮಿತ್ರ
ಬುಧವಾರ, 1 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಮೃದುವಾದ ಮಾತು ಮಹಾಕೋಪವನ್ನು ಹೋಗಲಾಡಿಸುತ್ತದೆ.
– ಸಮಯೋಚಿತ ಪದ್ಯ ಮಾಲಿಕೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಲಗಾರ ಬಡವನನ್ನು ಕೆಡಿಸಿದ್ರೆ ಭಗವಂತ ಬಲಗಾರನ್ನು ಕೆಡಿಸ್ತಾನೆ

ನಿಮ್ಮ ಪತ್ರಗಳು

ತಾತಯ್ಯ ಪಾರ್ಕ್‌ನ ಅವ್ಯವಸ್ಥೆ

ಮಾನ್ಯರೆ,



ಮೈಸೂರಿನ ಹೃದಯ ಭಾಗದಲ್ಲಿರುವ ಲಾನ್ಸ್‌ಡೌನ್ ಕಟ್ಟಡದ ಎದುರು ಪತ್ರಿಕೋದ್ಯಮ ಪಿತಾಮಹ, ಧರ್ಮ ಧುರೀಣ, ಮಹಾನುಭಾವ ತಾತಯ್ಯನವರ ಪಾರ್ಕ್ ಇದ್ದು, ಅದು ಅವ್ಯವಸ್ಥೆಯಿಂದ ಕೂಡಿದೆ. ತಾತಯ್ಯನವರ ಪ್ರತಿಮೆ ಸ್ಥಳ ನಿರಾಶ್ರಿತರು, ಭಿಕ್ಷುಕರು ರಾತ್ರಿ ಹೊತ್ತು ಮಲಗುವ ತಾಣವಾಗಿದೆ. ಜೊತೆಗೆ ಪ್ರತಿಮೆಯ ಆಸುಪಾಸಿನಲ್ಲೇ ಪಾರ್ಕ್ ಒಳಗೆ ದಾರಿಹೋಕರು ಮೂತ್ರ ವಿಸರ್ಜನೆ ಮಾಡುತ್ತಿದ್ದು, ಗಬ್ಬು ನಾರುತ್ತಿದೆ. ಪ್ರತಿಮೆಗೆ ಬೆಳಕು ಚೆಲ್ಲುವ ಒಂದೇ ಒಂದು ಲೈಟ್ ಬಿಟ್ಟರೆ, ಪಾರ್ಕಿನ ಒಳಗಿರುವ ಉಳಿದ ಎಲ್ಲಾ ಲೈಟುಗಳೂ ಕೆಟ್ಟು ವರ್ಷಗಳಾಗಿವೆ. ಇದರಿಂದ ರಾತ್ರಿ ಹೊತ್ತು ಅನೈತಿಕ ಚಟುವಟಿಕೆಗಳನ್ನು ನಡೆಸಲು ಅವಕಾಶ ಮಾಡಿಕೊಟ್ಟಂತಾಗಿದೆ. ಮೈಸೂರು ನಗರ ಪಾಲಿಕೆ ಹಾಗೂ ಪಾರ್ಕನ್ನು ನಿರ್ವಹಿಸಬೇಕಾದ ಗುತ್ತಿಗೆದಾರರ ನಿರ್ಲಕ್ಷ್ಯವೇ ಇದಕ್ಕೆ ಕಾರಣವಾಗಿದೆ. ಪಾರ್ಕಿನ ಒಳಗೆ ಕಾಫಿ ಕಪ್ಪುಗಳು ಸೇರಿದಂತೆ ವಿವಿಧ ತ್ಯಾಜ್ಯಗಳ ರಾಶಿಯಿದೆ. ಈ ಪಾರ್ಕ್ ಅನ್ನು ನಿರ್ವಹಿಸಲು ನಗರ ಪಾಲಿಕೆ ಸಾರ್ವಜನಿಕರ ತೆರಿಗೆ ದುಡ್ಡನ್ನು ಗುತ್ತಿಗೆದಾರರಿಗೆ ಕೊಡುತ್ತಿಲ್ಲವೇ? ಆ ದುಡ್ಡು ಎಲ್ಲಿಗೆ ಹೋಗುತ್ತಿದೆ!? ಎಂಬ ಪ್ರಶ್ನೆ ಎದುರಾಗಿದೆ.

ಈ ಪಾರ್ಕಿನ ಹತ್ತಿರದಲ್ಲೇ ಇರುವ ನಗರ ಪಾಲಿಕೆ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಈ ಪಾರ್ಕಿನ ಕೊಳಕು ದುರವಸ್ಥೆ ಕಣ್ಣಿಗೆ ಕಾಣುತ್ತಿಲ್ಲವೇ ಅಥವಾ ಅವರೂ ಕೂಡ ಗುತ್ತಿಗೆದಾರರ ಜೊತೆ ಶಾಮೀಲಾಗಿದ್ದಾರಾ? ಈ ಪಾರ್ಕಿಗೆ ಭದ್ರತಾ ಸಿಬ್ಬಂದಿ ಯಾಕೆ ನೇಮಿಸಿಲ್ಲ? ತಾತಯ್ಯನವರ ಪ್ರತಿಮೆಗೆ ಕಿಡಿಗೇಡಿಗಳಿಂದ ಹಾನಿಯಾದರೆ ಯಾರು ಹೊಣೆ? ಈ ಪ್ರದೇಶದ ಜನಪ್ರತಿನಿಧಿಗಳು, ಪಾರ್ಕಿನ ನಿರ್ವಹಣೆ ಮಾಡಬೇಕಾದ ಗುತ್ತಿಗೆದಾರರು ಹಾಗೂ ನಗರ ಪಾಲಿಕೆ ಅಧಿಕಾರಿಗಳ ಜುಟ್ಟು ಹಿಡಿದು ಪಾರ್ಕ್ ಹಾಗೂ ಪ್ರತಿಮೆಯ ಭದ್ರತೆ, ಸ್ವಚ್ಛತೆ, ಬೆಳಕಿನ ವ್ಯವಸ್ಥೆ ಮಾಡಲು ಯಾಕೆ ನಿರ್ಲಕ್ಷ್ಯ ವಹಿಸಿದ್ದಾರೆ? ಮೈಸೂರಿಗೆ ಬರುವ ಲಕ್ಷಾಂತರ ಪ್ರವಾಸಿಗರಿಗೆ ಈ ತಾತಯ್ಯ ಪಾರ್ಕ್ ಅವ್ಯವಸ್ಥೆ ಮತ್ತು ತಾತಯ್ಯನವರ ಪ್ರತಿಮೆ ಸ್ಥಿತಿ ಸ್ವಾಗತ ನೀಡುವಂತಿದೆ. **–ಎಂ.ಎಸ್.ಎಸ್.ಶರ್ಮ, ಸಾಮಾಜಿಕ ಕಾರ್ಯಕರ್ತ, ಮೈಸೂರು**

ಆಸ್ಪತ್ರೆ ಪಕ್ಕದ ಕಸದ ತೊಟ್ಟಿ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ಜಿಲ್ಲಾ ಕ್ಷಯರೋಗ ಕೇಂದ್ರದ ಕಾಂಪೌಂಡಿಗೆ ಹೊಂದಿಕೊಂಡಂತೆ ಕೃತಕವಾಗಿ ಕಸದ ತೊಟ್ಟಿ ಯನ್ನು ಇಡಲಾಗಿದೆ. ಇದರಿಂದ ಅಲ್ಲಿ ಇರುವಂತಹ ರೋಗಿಗಳಿಗೆ ಬಹಳ ತೊಂದರೆಯುಂಟಾಗಿದೆ. ಮೊದಲೇ ಅನಾರೋಗ್ಯದಿಂದ ಬಳಲುತ್ತಿರುವ ರೋಗಿಗಳು ಮತ್ತಷ್ಟು ರೋಗಕ್ಕೆ ತುತ್ತಾಗುವಂತೆ ಮಾಡಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕಸದ ತೊಟ್ಟಿ ತೆರವು ಮಾಡಿಸಬೇಕೆಂದು ಮನವಿ. **–ಪವಿತ್ರ ವಿ, ಮಾನಸಗಂಗೋತ್ರಿ, ಮೈಸೂರು.**


ಪ್ರಾಥಮಿಕ, ಪ್ರೌಢಶಾಲಾ ಅತಿಥಿ ಶಿಕ್ಷಕರ ವೇತನ ಹೆಚ್ಚಳ ಮಾಡಲಿ

ಮಾನ್ಯರೆ,

ರಾಜ್ಯ ಸರ್ಕಾರವು ಅತಿಥಿ ಶಿಕ್ಷಕರಿಗೆ ಪ್ರಸ್ತುತ ದಿನಗಳಲ್ಲಿ ನೀಡುತ್ತಿರುವ ಗೌರವ ಸಂಭಾವನೆ ತೀರಾ ಕಡಿಮೆ. ಪ್ರಸ್ತುತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 7,500 ರೂ. ಮತ್ತು ಪ್ರೌಢಶಾಲಾ ಶಾಲಾ ಶಿಕ್ಷಕರಿಗೆ 8,000 ರೂ. ನೀಡಲಾಗುತ್ತಿದೆ. ಆದರೆ, ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಮಿಕರಿಗೆ ಪ್ರತಿ ದಿನಕ್ಕೆ 309 ರೂ. ಕೊಡಲಾಗುತ್ತಿದೆ. ಶಿಕ್ಷಕರಿಗೆ ಮಾತ್ರ 250 ರೂ.ನಂತೆ ನೀಡಲಾಗುತ್ತಿದೆ. ಅಂದರೆ ವಿದ್ಯಾರ್ಥಿಗಳ ಉಜ್ವಲ ಭವಿಷ್ಯವನ್ನು ರೂಪಿಸುವ ಶಿಕ್ಷಕರಿಗೆ ದಿನಗೂಲಿ ನೌಕರಿಗಳಿಗಿಂತಲೂ ಕಡಿಮೆ ಗೌರವ ಧನ ನೀಡುತ್ತಿರುವುದು ಅಗೌರವವನ್ನುಂಟು ಮಾಡಿದಂತಿದೆ. ಇದಲ್ಲದೇ ಶಿಕ್ಷಕರಿಗೆ ವೇತನವನ್ನು ಮೂರು, ನಾಲ್ಕು ತಿಂಗಳಿಗೊಮ್ಮೆ ಕೊಡಲಾಗುತ್ತಿದೆ. ಅಲ್ಲಿಯವರೆಗೆ ಸಂಬಳವಿಲ್ಲದೆ ಅವರು ದುಡಿಯಬೇಕು. ಹೆಚ್ಚು ಕೆಲಸ ಕಡಿಮೆ ಸಂಬಳ, ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ ಗೌರವಧನವನ್ನು 13,000 ದಿಂದ 32,000 ರೂ.ಗೆ ಹೆಚ್ಚಿಸಲಾಗಿದೆ. ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ನಡೆಯುವ ವಸತಿ ಶಾಲೆಗಳ ಅತಿಥಿ ಶಿಕ್ಷಕರ ವೇತನ ಪ್ರೌಢಶಾಲೆಗಳಲ್ಲಿ 10,000 ದಿಂದ 15,000 ರೂ. ಹಾಗೂ ಪಿಯು ಕಾಲೇಜುಗಳ ಅತಿಥಿ ಉಪನ್ಯಾಸಕರಿಗೆ 15,000 ದಿಂದ 18,000 ರೂ.ಗೆ ಹೆಚ್ಚಿಸಲಾಗಿದೆ.

ಪ್ರಸ್ತುತ ದಿನಗಳಲ್ಲಿ ದಿನನಿತ್ಯ ಬಳಸುವ ಎಲ್ಲಾ ವಸ್ತುಗಳ ಬೆಲೆಗಳು ನಿರಂತರವಾಗಿ ಗಗನಕ್ಕೇರಿದ್ದು, ಜೀವನದ ಬಂಡಿಯನ್ನು ಸಾಗಿಸುವುದೇ ದುಸ್ತರವಾಗಿದೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ಕಡಿಮೆ ಸಂಬಳಕ್ಕೆ ಹೆಚ್ಚು ದುಡಿಸಿಕೊಳ್ಳುತ್ತಿರುವುದು ಅನ್ಯಾಯವಲ್ಲವೇ? ಆದ್ದರಿಂದ ಪ್ರಾಥಮಿಕ ಮತ್ತು ಪ್ರೌಢಶಾಲೆ ಅತಿಥಿ ಶಿಕ್ಷಕರ ವೇತನವನ್ನು ಹೆಚ್ಚಳ ಮಾಡಿ ಸಮಾಜದಲ್ಲಿ ನ್ಯಾಯಯುತವಾಗಿ ಬದುಕಲು ಅವಕಾಶ ಮಾಡಿಕೊಡಿ. ದಯವಿಟ್ಟು ಈ ವೇತನದ ತಾರತಮ್ಯವನ್ನು ಸರಿಪಡಿಸಲು ಮನವಿ.

–ಪರಶಿವಮೂರ್ತಿ ಎನ್.ಪಿ, ಸರಗೂರು ತಾ.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಶ್ರೀ ಲಲಿತಾಸಹಸ್ರನಾಮ

ಭಾರತ ದೇಶದ ಸಂಸ್ಕೃತಿಯು ಭಕ್ತಿಪ್ರಧಾನವಾದುದು. ಇಲ್ಲಿರುವ ಬಹುಸಂಖ್ಯೆಯ ದೇವಾಲಯಗಳು, ತೀರ್ಥಕ್ಷೇತ್ರಗಳು ಇದಕ್ಕೆ ಸಾಕ್ಷಿಗಳಾಗಿವೆ. ನಮ್ಮಲ್ಲಿರುವ ಶೈವಾಗಮಗಳು, ಪಾಂಚರಾತ್ರ, ವೈಖಾನಸ ಮುಂತಾದ ವೈಷ್ಣವಾಗಮಗಳು ಪೂಜಾ ವಿಧಾನಗಳನ್ನು ತಿಳಿಸುತ್ತವೆ. ಅವುಗಳಲ್ಲಿ ಅಷ್ಟೋತ್ತರಶತನಾಮಪೂಜೆ, ಸಹಸ್ರನಾಮಪೂಜೆ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಗಣೇಶ, ಗೌರಿ, ಶಿವ, ವಿಷ್ಣು ಅನಂತ ಮುಂತಾದ ಎಲ್ಲಾ ದೇವರಿಗೂ ಸಹಸ್ರನಾಮ ಸ್ತೋತ್ರಗಳಿವೆ. ಇವುಗಳ ಜಪವು ಸಾಧಕನ ಮನಸ್ಸನ್ನು ಆ ನಿರ್ದಿಷ್ಟ ದೇವತೆಯ ಸ್ವರೂಪದಲ್ಲಿ ಸ್ಥಿರವಾಗಿ ನಿಲ್ಲಿಸಲು ಅನುಕೂಲವಾಗುತ್ತದೆ. ವಿಷ್ಣು ಸಹಸ್ರನಾಮವು ಮಹಾಭಾರತದ ಅನುಶಾಸನ ಪರ್ವದಲ್ಲಿ ಭೀಷ್ಮ–ಯುಧಿಷ್ಠಿರ ಸಂವಾದದಲ್ಲಿ ಕಂಡು ಬರುತ್ತದೆ. ಇದಕ್ಕೆ ಶಂಕರಾಚಾರ್ಯರೇ ಆದಿಯಾಗಿ ಅನೇಕರು ಭಾಷ್ಯಗಳನ್ನು ಬರೆದಿದ್ದಾರೆ. ಬೇರೆ ಸಹಸ್ರನಾಮ ಸ್ತೋತ್ರಗಳು ಪುರಾಣಗಳಲ್ಲಿವೆ.

ಲಲಿತಸಹಸ್ರನಾಮ

ಬ್ರಹ್ಮಾಂಡ ಪುರಾಣದಲ್ಲಿ ಹಯಗ್ರೀವಾಗಸ್ತ್ಯ ಸಂವಾದದಲ್ಲಿ ಲಲಿತಾ ಸಹಸ್ರನಾಮ ಸ್ತೋತ್ರವಿದೆ. ಹಯಗ್ರೀವನು ಜ್ಞಾನಾಧಿದೇವತೆ.

ಜ್ಞಾನಾನಂದಮಯಂ ದೇವಂ
ನಿರ್ಮಲಸ್ಫಟಿಕಾಕೃತಿಮ್।
ಆಧಾರಂ ಸರ್ವವಿದ್ಯಾನಾಂ
ಹಯಗ್ರೀವಮುಪಾಸ್ಮಹೇ॥

ಎಂಬ ಸ್ತುತಿಯು ಪ್ರಸಿದ್ಧವಾಗಿದೆ. ಹಯ ಗ್ರೀವನೇ ಬೋಧಿಸಿದ ಸ್ತೋತ್ರವಾದುದರಿಂದ ಇದು ಪ್ರೌಢವೂ ಜ್ಞಾನಪ್ರದವೂ ಆಗಿದೆ. ಅದನ್ನು ಕೇಳುವ ಶ್ರೋತೃ ಸಮುದ್ರವನ್ನೇ ಕುಡಿದ ಮಹಾಮುನಿ ಅಗಸ್ತ್ಯ. ಇವೆಲ್ಲವೂ ಲಲಿತಾಸಹಸ್ರನಾಮ ಪ್ರಾಶಸ್ತ್ಯದ ದ್ಯೋತಕಗಳು. ಇದನ್ನು ಸರಿಯಾಗಿ ಜಪಿಸಿದವರಿಗೆ ನಾನಾ ಫಲಗಳು ಲಭಿಸುತ್ತವೆ ಎಂದು ಜ್ಞಾನಿಗಳ ಮಾತು. ಎಲ್ಲಾ ಸಹಸ್ರನಾಮಗಳಲ್ಲಿ ಲಲಿತಾಸಹಸ್ರನಾಮ ಅತ್ಯುತ್ಕೃಷ್ಟ ಕಾವ್ಯಗುಣಗಳಿಂದ ಮತ್ತು ಮಂತ್ರ ಶಾಸ್ತ್ರಾರ್ಥ ಪೂರ್ಣತೆಯಿಂದ ವಿಶಿಷ್ಟವಾಗಿದೆ. ಸಂಸ್ಕೃತ ಭಾಷಾ ವೈದುಷ್ಯದಲ್ಲಿ ಅಪ್ರತಿಮರೂ ತಂತ್ರಶಾಸ್ತ್ರದ ಅನುಷ್ಠಾನದಲ್ಲಿ ನಿಷ್ಣಾತರೂ ಆಗಿದ್ದ ಭಾಸ್ಕರಮಖಿಗಳು ಲಲಿತಾ ಸಹಸ್ರನಾಮ ಸ್ತೋತ್ರಕ್ಕೆ ಸೌಭಾಗ್ಯ ಭಾಸ್ಕರ ಎಂಬ ಭಾಷ್ಯವನ್ನು ರಚಿಸಿದ್ದಾರೆ. ಅದರಲ್ಲಿ ಒಂದೊಂದು ನಾಮದ ವಿಶೇಷಾರ್ಥಗಳು ವರ್ಣಿತವಾಗಿವೆ. ಅರ್ಥಾನುಸಂಧಾನವನ್ನು ಮಾಡಿಕೊಂಡು ಈ ಸಹಸ್ರನಾಮವನ್ನು ಪಠಿಸುವವರು ನಿಜವಾಗಿ ಭಾಗ್ಯಶಾಲಿಗಳು. ಇದರಲ್ಲಿ ಮಂತ್ರ ತಂತ್ರ ಶಾಸ್ತ್ರಗಳ ಅನೇಕ ರಹಸ್ಯಾರ್ಥಗಳು ಅಡಗಿವೆ. ಶ್ರೀ ವಿದ್ಯೆಯನ್ನು ಅಭ್ಯಾಸ ಮಾಡಿದವರಿಗೆ ಇಲ್ಲಿ ಜ್ಞಾನದ ಸಾಗರವೇ ಗೋಚರವಾಗುತ್ತದೆ ಎಂದು ಹೇಳಲಾಗಿದೆ. ಸಾಮಾನ್ಯರು ಕೇವಲ ಪಠನವನ್ನು ಮಾಡಿದರೂ ಅವರಿಗೂ ಲಲಿತಾದೇವಿಯ ಅನುಗ್ರಹ ಉಂಟಾಗಿ ಶುಭ ಫಲಗಳು ಉಂಟಾಗುವುದರಲ್ಲಿ ಸಂಶಯವಿಲ್ಲ.

ಮಾತೃ ಸ್ವರೂಪಿಣಿ

ಜಗತ್ತಿನ ಮೂಲವಾದ ಪರಬ್ರಹ್ಮವು ನಿರ್ಗುಣ, ನಿರಾಕಾರ. ಅದು ಗಂಡು, ಹೆಣ್ಣು, ನಪುಂಸಕ ಎಂಬ ವರ್ಣನೆಗಳಿಗೆ ಎಟುಕದ ಅನಿರ್ವಚನೀಯ. ಆದರೂ ಭಕ್ತಾನುಗ್ರಹಕ್ಕಾಗಿ ಆ ಪರಬ್ರಹ್ಮವು ಯಾವ ರೂಪದಿಂದ ಬೇಕಾದರೂ ಕಾಣಿಸಿಕೊಳ್ಳಬಹುದು. ಒಬ್ಬನೇ ನಟನು ರಾಜನಾಗಿ, ಅಧಿಕಾರಿಯಾಗಿ, ಸೇವಕನಾಗಿ, ಭಿಕ್ಷುಕನಾಗಿ, ಸಮಯ ಬಂದರೆ ಹೆಣ್ಣಾಗಿಯೂ ನಟಿಸಬಹುದು. ಎಲ್ಲ ರೂಪಗಳಲ್ಲಿ ಭಗವಂತನನ್ನು ಆರಾಧಿಸುವ ಸಂಪ್ರದಾಯಗಳು ನಮ್ಮ ದೇಶದಲ್ಲಿದ್ದುವು, ಇಂದೂ ಇವೆ. ಶಾಕ್ತ ಸಂಪ್ರದಾಯವು ಶಕ್ತಿಯನ್ನೇ ಪರಮಸತ್ಯವಾಗಿ ಅಂಗೀಕರಿಸಿತು. ಶ್ರೀ ಶಂಕರಾಚಾರ್ಯರು ಸೌಂದರ್ಯಲಹರಿಯಲ್ಲಿ –

ಶಿವಃಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ
ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ
ಅತಸ್ತ್ವಾಮಾರಾಧ್ಯಂ ಹರಿಹರವಿರಿಂಚ್ಯಾದಿಭಿರಪಿ
ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ ॥

ಎಂದು ಹೇಳಿದ್ದಾರೆ. ಶಕ್ತಿಯೊಡನೆ ಕೂಡಿದ್ದಾಗ ಮಾತ್ರ ಶಿವನು ಸರ್ವಶಕ್ತ. ಇಲ್ಲದಿದ್ದರೆ ಅವನು ಕಿಂಚಿತ್ ಚಲಿಸುವುದೂ ಅಸಾಧ್ಯ. ಆದ್ದರಿಂದಲೇ ಹರಿಹರಬ್ರಹ್ಮಾದಿದೇವತೆಗಳೆಲ್ಲ ಶಕ್ತಿಯನ್ನೇ ಆರಾಧಿಸಿ ಕೃತಾರ್ಥರಾಗುತ್ತಿದ್ದಾರೆ. ಆಕೆಗೆ ಕೈ ಮುಗಿಯಲು, ಆಕೆಯನ್ನು ಸ್ತುತಿಸಲು ಪುಣ್ಯ ಮಾಡಿಲ್ಲದವರು ಹೇಗೆ ಅರ್ಹರು ಎಂಬುದಿದರ ತಾತ್ಪರ್ಯ.

ಆರಾಧ್ಯ ದೇವತೆ ತಾಯಿಯ ರೂಪದಲ್ಲಿದ್ದರೆ ಭಕ್ತರಿಗೆ ಅಲ್ಲಿ ಸಂಪೂರ್ಣ ಆತ್ಮೀಯತೆ ಅಂಕುರಿಸುತ್ತದೆ. ಯಾವ ಜೀವಿಗಾಗಲಿ, ತಾಯಿಯೇ ಪರಮಾಪ್ತಳು. ಆದ್ದರಿಂದ ಜಗತ್ಕಾರಣವನ್ನು ತಾಯಿ, ಜಗನ್ಮಾತೆ ಎಂದು ಆರಾಧಿಸುವುದರಲ್ಲಿ ಭಕ್ತಿ ಪರಿಪೂರ್ಣವಾಗುತ್ತದೆ. ಎಷ್ಟೇ ತಪ್ಪುಗಳನ್ನು ಮಾಡಿದ ಮಗುವನ್ನೂ ತಾಯಿ ಕೈಬಿಡುವುದಿಲ್ಲ. ಲಲಿತಾಸಹಸ್ರನಾಮವನ್ನು ಓದುವಾಗ ಈ ಭಾವನೆ ಹೃದಯದಲ್ಲಿ ಮೂಡುತ್ತದೆ. **ಕುಪುತ್ರೋ ಜಾಯೇತ ಕ್ವಚಿದಪಿ–ಕುಮಾತಾ ನ ಭವತಿ** ಎಂದರು ಶಂಕರಾಚಾರ್ಯರು. ಕೆಟ್ಟ ಮಗ ಇರಬಹುದು. ಆದರೆ ಕೆಟ್ಟ ತಾಯಿ ಈ ಜಗತ್ತಿನಲ್ಲಿಲ್ಲ ಎಂಬ ಅವರ ಅಭಿಪ್ರಾಯ ತಾಯಿಯ ಬಗೆಗೆ ಅವರಿಗಿದ್ದ ಗೌರವವನ್ನು ಅಭಿವ್ಯಂಜಿಸುತ್ತದೆ. ಲಲಿತಾಸಹಸ್ರನಾಮದ ಒಂದೊಂದು ಪದವೂ ಅಧ್ಯಾತ್ಮಜಿಜ್ಞಾಸುಗಳಿಗೆ ಅಮೃತೋಪಮವಾಗಿದೆ. ಒಳಗಣ್ಣನ್ನು ತೆರೆಸಿ ಜಗತ್ತಿನ ಮೂಲದ ಹೊಸನೋಟವನ್ನು ನೀಡುತ್ತದೆ. ಭಕ್ತಿಯಿಂದ ಒಳಗಿನ ಗಂಭೀರಾರ್ಥವನ್ನು ನೋಡುವ ಮನಸ್ಸು ಸಾಧಕನಲ್ಲಿರಬೇಕು ಅಷ್ಟೆ.

ಲಲಿತಾಸಹಸ್ರನಾಮಸ್ತೋತ್ರದ ಮೊದಲನೆಯ ಶ್ಲೋಕವನ್ನು ನೋಡೋಣ–

ಶ್ರೀ ಮಾತಾ ಶ್ರೀ ಮಹಾರಾಜ್ಞೀ
ಶ್ರೀಮತ್ಸಿಂಹಾಸನೇಶ್ವರೀ।
ಚಿದಗ್ನಿಕುಂಡಸಂಭೂತಾ
ದೇವಕಾರ್ಯಸಮುದ್ಯತಾ॥

ಆಹಾ ! ಮೊದಲನೆಯ ಹೆಸರೇ ಭಕ್ತನಿಗೆ ಭರವಸೆಯನ್ನು ಕೊಡುತ್ತದೆ. ನಾನು ಆರಾಧಿಸುತ್ತಿರುವುದು, ಪೂಜಿಸುತ್ತಿರುವುದು ನನಗೆ ತಿಳಿಯದ, ನಾನು ಕಾಣದ ಯಾವುದೋ ದೇವತೆಯನ್ನಲ್ಲ. ನನ್ನ ಪ್ರೀತಿಯ ತಾಯಿಯನ್ನು ಪೂಜಿಸಿದ್ದೇನೆ. ನನಗೆ ಜನ್ಮವನ್ನು ಕೊಟ್ಟು ಸಾಕಿ ಸಲಹಿ ಮುದ್ದುಗರೆದ ಅಮ್ಮನನ್ನು ಪೂಜಿಸುತ್ತಿದ್ದೇನೆ. ಅಂಥ ಪಾಪವನ್ನು ಮಾಡಿದವನು, ಇಂಥ ತಪ್ಪನ್ನು ಮಾಡಿದವನು ಎಂದು ನಾನು ಹೆದರಬೇಕಾಗಿಲ್ಲ. ಎಲ್ಲವನ್ನೂ ಕ್ಷಮಿಸಿ ಮಮತೆಯಿಂದ ಉದ್ಧರಿಸುವ ತಾಯಿ ಇವಳು. ಅಷ್ಟೇ ಅಲ್ಲ. ಇವಳು ಶ್ರೀ ಮಾತೆ. ಎಲ್ಲ ಶುಭಗಳನ್ನು ತರುವವಳು. ಎಲ್ಲ ಸಂಪತ್ತಿನ ಅಧಿದೇವತೆಯಾದ ಶ್ರೀಗೆ, ಎಂದರೆ ಲಕ್ಷ್ಮೀಗೂ ಇವಳು ಮಾತೆ. ಜಗತ್ತಿನ ಎಲ್ಲ ಅಂದಕ್ಕೆ ಸೌಂದರ್ಯಕ್ಕೆ ಈಕೆ ತಾಯಿ. ಸೃಷ್ಟಿಯನ್ನು ಮಾಡುವವಳು.

ಎರಡನೆಯ ಹೆಸರು **ಶ್ರೀ ಮಹಾರಾಜ್ಞೀ**. ಇದು ತಾಯಿ ಲಲಿತಾಂಬಿಕೆಯ ಸರ್ವಶಕ್ತತ್ವವನ್ನು ತೋರಿಸುತ್ತದೆ. ಭಕ್ತರ ಕಷ್ಟಗಳನ್ನು ನಿವಾರಿಸಲು, ಅವರಿಗೆ ಸರ್ವ ಸಂಪತ್ತುಗಳನ್ನು ನೀಡಲು ಈ ತಾಯಿ ಇನ್ನಾರನ್ನೋ ಕೇಳಬೇಕಾಗಿಲ್ಲ. ಈಕೆಯೇ ಮಹಾರಾಜ್ಞಿ. ಇತರ ಎಲ್ಲ ದೇವತೆಗಳು ಈ ಕೃಪಾಜಲಧಿಯ ಆಜ್ಞಾಧಾರಕರು. ಈ ಜಗನ್ಮಾತೆಯ ಒಲವಿನ ಶಿಶುವಾದ ನಾನು ಬೇರೆ ಯಾರನ್ನೂ ಏನನ್ನೂ ಕೇಳಬೇಕಾಗಿಲ್ಲ. ಈ ಎಲ್ಲ ಅರ್ಥಗಳು ಈ ನಾಮದಲ್ಲೇ ಅಡಗಿವೆ.

ಮೂರನೆಯ ಹೆಸರು ಶ್ರೀಮತ್ ಸಿಂಹಾಸನೇಶ್ವರೀ. ಸಿಂಹಾಸನ ಎಂಬುದು ಸಮಸ್ತ ಭಯವನ್ನು ನಿವಾರಿಸುವ ಸ್ಥಳ. ಸಿಂಹ ಸಮಸ್ತ ಭಯಕಾರಣಗಳ ಸಂಕೇತ. ಅದನ್ನು ಮೆಟ್ಟಿ ಆಸನವನ್ನಾಗಿ, ಪೀಠವನ್ನಾಗಿ ಮಾಡಿಕೊಂಡಿರುವವಳು ರಕ್ಷಣೆಯನ್ನು ಕೊಟ್ಟರೆ ಬೇರೆ ಯಾರು ಏನು ಮಾಡುವರು. ಈಶ್ವರೀ ಎಂಬ ಪದ ತಾಯಿಯ ವೈಭವದ ದ್ಯೋತಕ. ತಾಯಿಯ ಅಪ್ಪಣೆಯಿಂದ ಸೂರ್ಯಾಚಂದ್ರಾದಿಗಳು ಹೊಳೆಯುತ್ತಾರೆ. ಅಗ್ನಿ ಉರಿಯುತ್ತದೆ. ಗಾಳಿ ಬೀಸುತ್ತದೆ. ಅಂತಹ ಐಶ್ವರ್ಯ ತಾಯಿಯದು. ಆಕೆಯನ್ನು ಧ್ಯಾನಿಸುವಾಗ ಆಕೆಯೇ ಸರ್ವಶಕ್ತೆ, ಸರ್ವವ್ಯಾಪಿನಿ, ಸರ್ವಜ್ಞೆ ಎಂದು ಧ್ಯಾನಿಸಬೇಕು.

ನಾಲ್ಕನೆಯ ನಾಮವಾದ **ಚಿದಗ್ನಿಕುಂಡ ಸಂಭೂತಾ** ಎಂಬುದನ್ನು ಎಷ್ಟು ವರ್ಣಿಸಿದರೂ ಸಾಲದು. ನಿತ್ಯಳೂ ಶಾಶ್ವತಳೂ ಆದ ಲಲಿತಾಂಬಿಕೆ ಭಕ್ತರ ಚಿದಗ್ನಿಕುಂಡದಲ್ಲಿ ಸಂಭವಿಸುತ್ತಾಳೆ. ಚಿತ್ ಎಂದರೆ ಚೇತನ, ಚೈತನ್ಯ. ಅದನ್ನೇ ಅಗ್ನಿಕುಂಡವೆಂದು ಭಾವಿಸಿದರೆ ಅದರಲ್ಲಿ ತಾಯಿಯು ಉದ್ಭವಿಸುತ್ತಾಳೆ. ಜಗದ್ವ್ಯಾಪಿನಿಯಾದ ಜಗನ್ಮಾತೆ ವಿಶೇಷವಾಗಿ ಭಕ್ತರ ಚೇತನದಲ್ಲಿ ಕಾಣಿಸಿಕೊಳ್ಳುತ್ತಾಳೆ. ಉರಿಯುವ ಹೋಮಕುಂಡದ ಅಗ್ನಿಯಲ್ಲಿ ದೇವತಾಮೂರ್ತಿಯ ದರ್ಶನವಾಗುವುದೆಂಬುದು ಭೌತಜಗತ್ತಿನ ಸಂಕೇತ. ನಿಜವಾಗಿ ಆಗುವುದು, ಆಗಬೇಕಾದುದು ಚಿದಗ್ನಿಯಲ್ಲಿ ದೇವತೆಯ ಸಾಕ್ಷಾತ್ಕಾರ. ಭಕ್ತನ ಹೃದಯದಲ್ಲಿ ಜ್ಞಾನಾಗ್ನಿ ಜ್ವಲಿಸಿದಾಗ ಲಲಿತಾಂಬಿಕೆಯ ದಿವ್ಯರೂಪ ಕಾಣಿಸಿಕೊಳ್ಳುತ್ತದೆ. ಭಗವದ್ಗೀತೆಯಲ್ಲಿ ಹೇಳಿರುವಂತೆ 'ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ'. ಚಿದಗ್ನಿಕುಂಡದಲ್ಲಿ ಸಮಸ್ತ ಕರ್ಮಗಳೂ ಸುಟ್ಟು ಬೂದಿಯಾದಾಗ ದೇವಿಯ ಪಾದಗಳ ದರ್ಶನ ಸುಲಭವಾಗುತ್ತದೆ.

ಐದನೆಯದು **'ದೇವಕಾರ್ಯಸಮುದ್ಯತಾ'** ಎಂಬ ಸುಂದರ ನಾಮ. ದೇವಶಬ್ದಕ್ಕೆ ನಾನಾರ್ಥಗಳಿವೆ. ಪ್ರಕೃತಿಯ ಶಕ್ತಿಗಳನ್ನು ಇಲ್ಲಿ ದೇವ ಎಂದು ಕರೆಯಲಾಗಿದೆ. ಪ್ರಕೃತಿಯ ಕಾರ್ಯಗಳು ಗಾಳಿ ಬೀಸುವುದು, ಮಳೆ ಸುರಿಯುವುದು, ಮರ ಬೆಳೆಯುವುದು, ಹೂವು ಅರಳುವುದು ಇತ್ಯಾದಿಗಳೆಲ್ಲ. ಈ ಎಲ್ಲವನ್ನೂ ನಡೆಸುವುದರಲ್ಲಿ ತೊಡಗಿರುವವಳು ತಾಯಿ ಲಲಿತಾಂಬಿಕೆ. ಈ ಜಗದ್ರೂಪದಲ್ಲಿ ಅಭಿವ್ಯಕ್ತಳಾದ ತಾಯಿಯ ದರ್ಶನ ಮನೋ ನೇತ್ರಗಳಿಗೆ ಆಗಬೇಕು. ಆಗ ಲಲಿತಾಸಹಸ್ರನಾಮ ಪಠನ ಸಾರ್ಥಕ.

ಈ ಪುಟ್ಟ ಲೇಖನದಲ್ಲಿ ಮಾಡಿರುವುದು ದಿಕ್ಪ್ರದರ್ಶನ ಮಾತ್ರ. ಸಾವಿರ ನಾಮಗಳಿಗೂ ಮಹಾತ್ಮರು ವಿಶೇಷಾರ್ಥ ವಿವರಣೆಯನ್ನು ಗ್ರಂಥಗಳಲ್ಲಿ ಮಾಡಿದ್ದಾರೆ. ಉಪನ್ಯಾಸಗಳಲ್ಲಿ ಮಾಡುತ್ತಿದ್ದಾರೆ. ಆಸಕ್ತ ಭಕ್ತರು ಗ್ರಂಥಗಳ ಅಧ್ಯಯನದಿಂದ, ಉಪನ್ಯಾಸ ಶ್ರವಣದಿಂದ ಅರ್ಥಗಳನ್ನು ಅರಿತುಕೊಂಡು ಅರ್ಥಾನುಸಂಧಾನಪೂರ್ವಕವಾಗಿ ಸಹಸ್ರನಾಮ ಪಠನವನ್ನು ಮಾಡಿ ಕೃತಾರ್ಥರಾಗಬಹುದು.

ಅಜ್ಞಾನಾಖ್ಯಗ್ರಹಗ್ರಸ್ತಾನ್
ಮೋಹಾಂಧಾನ್ ನಷ್ಟಚೇತನಾನ್ ।
ಕೃಪಾರಜ್ವಾ ಸಮುದ್ಧೃತ್ಯ ಪಾತ್ವಸ್ಮಾನ್
ಲಲಿತಾಂಬಿಕಾ॥

10 ವರ್ಷಗಳಲ್ಲಿ ಮೈಸೂರು, ಶಿವಮೊಗ್ಗ ಅರಣ್ಯ ಪ್ರದೇಶಗಳು ಅಭಿವೃದ್ಧಿ

ಮೃಗಾಲಯದಲ್ಲಿ ಸಂರಕ್ಷಣಾ ಭಾಷಣ ಕಾರ್ಯಕ್ರಮ



23ನೇ ಸಂರಕ್ಷಣಾ ಭಾಷಣ ಕಾರ್ಯಕ್ರಮದಲ್ಲಿ ಡಿಸಿಎಫ್, ದೀಪ್ ಕಂಟ್ರಾಕ್ಟರ್ ಭಾಗವಹಿಸಿ 'ನನ್ನ ಪ್ರಯಾಣ ಅಂಟಾರ್ಟಿಕದಲ್ಲಿ' ಎಂಬ ವಿಷಯದ ಕುರಿತು ಮಾತನಾಡಿದರು.

ಮೈಸೂರು,ಮೇ 31(ಜಿಎ)– ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳ ಅರಣ್ಯ ಪ್ರದೇಶಗಳು ಕಳೆದ 10 ವರ್ಷಗಳಲ್ಲಿ ಅಭಿವೃದ್ಧಿಯಾಗಿದೆ ಎಂದು ಬೆಂಗಳೂರಿನ ಫಾರೆಸ್ಟ್ ಸರ್ವೆ ಆಫ್ ಇಂಡಿಯಾದ ಪ್ರಾದೇಶಿಕ ನಿರ್ದೇಶಕ ವೇಣುಪ್ರಸಾದ್ ತಿಳಿಸಿದ್ದಾರೆ.

ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ವತಿಯಿಂದ ಮಂಗಳವಾರ ಮೃಗಾಲಯದ ಆವರಣದಲ್ಲಿ ಏರ್ಪಡಿಸಲಾಗಿದ್ದ 23ನೇ ಸಂರಕ್ಷಣಾ ಭಾಷಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

"ಕರ್ನಾಟಕದಲ್ಲಿ ಅರಣ್ಯ ವ್ಯಾಪ್ತಿ ಬದಲಾವಣೆ ಮತ್ತು ಅದರ ಪರಿಣಾಮಗಳು" ಕುರಿತು ಪವರ್ ಪಾಯಿಂಟ್ ಮೂಲಕ ವಿವರಿಸಿದ ಅವರು ಕರ್ನಾಟಕ ರಾಜ್ಯದಲ್ಲಿರುವ ಅರಣ್ಯ ಪ್ರದೇಶಗಳಲ್ಲಿ ಕಳೆದ ಒಂದು ದಶಕದಿಂದ ಆಗಿರುವ ಬದಲಾವಣೆ ಬಗ್ಗೆ ವಿವರಿಸಿದರಲ್ಲದೆ ಮೈಸೂರು ಹಾಗೂ ಶಿವಮೊಗ್ಗ ಜಿಲ್ಲೆಗಳ ಅರಣ್ಯ ಪ್ರದೇಶಗಳು ಮತ್ತಷ್ಟು ಅಭಿವೃದ್ಧಿಯಾಗಿವೆ ಎಂದರು.

ಅದರಲ್ಲೂ ಮೈಸೂರು ವಿಭಾಗದ ಚಾಮುಂಡಿ ಬೆಟ್ಟ, ಚಿಕ್ಕನಾಯಕನ ಹಳ್ಳಿ, ಸರಗೂರಿನಲ್ಲಿ ಕಳೆದ ಒಂದು ದಶಕದಿಂದ ಅರಣ್ಯ ವ್ಯಾಪ್ತಿ ಯಾವುದೇ ಬದಲಾವಣೆಯಾಗದೆ ಮತ್ತಷ್ಟು ಸುರಕ್ಷಿತವಾಗಿವೆ. ಏಕೆಂದರೆ ಇಲ್ಲಿನ ಜನತೆಯ ಮನೋಭಾವ ಮುಖ್ಯವಾಗಿದೆ ಎಂದು ತಿಳಿಸಿದರು.

ನಂತರ 'ನನ್ನ ಪ್ರಯಾಣ ಅಂಟಾರ್ಟಿಕದಲ್ಲಿ' ಎಂಬ ವಿಷಯದ ಕುರಿತು ಮೈಸೂರಿನ ಡಿಸಿಎಫ್, ದೀಪ್ ಕಂಟ್ರಾಕ್ಟರ್ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಮೃಗಾಲಯ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ. ರವಿ, ಮೃಗಾಲಯ ಶಿಕ್ಷಣಾಧಿಕಾರಿ ಎಂ.ಎಸ್. ಸುಜೋಶಾ ಮತ್ತಿತರರು ಉಪಸ್ಥಿರಿದ್ದರು. ಮೃಗಾಲಯದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಸಂರಕ್ಷಣಾ ಭಾಷಣ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತದೆ. ಕೊರೊನಾ ನಂತರ ಇದು ಮೊದಲ ಕಾರ್ಯಕ್ರಮವಾಗಿದೆ.

ವಿದ್ಯಾರ್ಥಿಗಳಿಂದ ತಂಬಾಕು ಬಗ್ಗೆ ಜಾಗೃತಿ

ಮೈಸೂರು, ಮೇ 31(ಎಂಕೆ)– ನಗರದ ಬೆಂಗಳೂರು ರಸ್ತೆಯಲ್ಲಿರುವ ಸಂತ ಫಿಲೋಮಿನಾ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ 'ವಿಶ್ವ ತಂಬಾಕು ರಹಿತ ದಿನ'ದ ಅಂಗವಾಗಿ ಜಾಗೃತಿ ಜಾಥಾ ನಡೆಸಲಾಯಿತು.



ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳ ಕುರಿತು ಮಾಹಿತಿಯುಳ್ಳ ನಾಮಫಲಕಗಳನ್ನು ಹಿಡಿದ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾಲೇಜಿನ ಮುಖ್ಯದ್ವಾರದಿಂದ ಎಲ್ಐಸಿ ವೃತ್ತದವರೆಗೆ ಜಾಗೃತಿ ಜಾಥಾ ನಡೆಸಿದರು. ಬಳಿಕ ಪ್ರಾಂಶುಪಾಲ ರವಿ ಜೆ.ಡಿ. ಸಲ್ಡಾನ ಮಾತನಾಡಿ, ತಂಬಾಕುವಿನಲ್ಲಿ ಕ್ಯಾನ್ಸರ್ ಉಂಟು ಮಾಡುವ 60 ಬಗೆಯ ರಸಾಯನಿಕಗಳಿದ್ದು, ದೇಹದ ಪ್ರತಿಯೊಂದು ಅಂಗವನ್ನೂ ತೊಂದರೆಗೀಡು ಮಾಡುತ್ತದೆ ಎಂದರಲ್ಲದೆ ವಿಶ್ವ ತಂಬಾಕು ರಹಿತ ದಿನದ ಮಹತ್ವದ ಕುರಿತು ತಿಳಿಸಿಕೊಟ್ಟರು. ಸಂತ ಫಿಲೋಮಿನಾ ಕಾಲೇಜು ಮುಖ್ಯಸ್ಥ ಡಾ.ಬರ್ನಾಡ್ ಪ್ರಕಾಶ್ ಬಾರ್ನಿಸ್, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಸುಜಾತಾ ದೇವಿ ಸೇರಿದಂತೆ ಕಾಲೇಜಿನ ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು.

ದೇಶದ 10 ಕೋಟಿ ರೈತರಿಗೆ ಮೋದಿ ಭರ್ಜರಿ ಗಿಫ್ಟ್

ನವದೆಹಲಿ, ಮೇ 31 ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ (PM-KISAN) ಯೋಜನೆ ಅಡಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ 10 ಕೋಟಿ ರೈತರಿಗೆ 21 ಸಾವಿರ ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ. 11ನೇ ಹಣಕಾಸು ಆಯೋಗದಲ್ಲಿ ಪಿಎಂ ಕಿಸಾನ್ ಯೋಜನೆ ಅಡಿಯಲ್ಲಿಂದು ಅನುದಾನ ಬಿಡುಗಡೆ ಮಾಡಿದ್ದಾರೆ. NDA ನೇತೃತ್ವದ BJP ಸರ್ಕಾರಕ್ಕೆ ಎಂಟು ವರ್ಷ ಪೂರ್ಣವಾಗಿರುವ ಹಿನ್ನೆಲೆ ಇಂದು ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಗರೀಬ್ ಕಲ್ಯಾಣ ಹೆಸರಿನಲ್ಲಿ ಬೃಹತ್ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ 9 ಇಲಾಖೆಗಳ ಯೋಜನೆಗಳ ಬಗ್ಗೆ ವಿವಿಧ ರಾಜ್ಯದ ಫಲಾನುಭವಿಗಳೊಂದಿಗೆ ಮೋದಿ ಸಂವಾದ ನಡೆಸಿದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ಪ್ರಚಾರ ಬಿರುಸು

ಮೈಸೂರು, ಮೇ 31(ಎಸ್‌ಬಿಡಿ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆ ಸನ್ನಿಹಿತವಾಗಿರುವ ಹಿನ್ನೆಲೆಯಲ್ಲಿ ಮತಯಾಚನೆ ಮತ್ತಷ್ಟು ಬಿರುಸುಗೊಂಡಿದೆ.



ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಹಾಗೂ ಮುಖಂಡರು ರೋಟರಿ ಪಶ್ಚಿಮ ಶಾಲೆಯಲ್ಲಿ ಮತಯಾಚಿಸಿದರು.



ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಮತಯಾಚಿಸಿದರು.

ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಮೈಸೂರಿನ ಸರಸ್ವತಿಪುರಂ ರೋಟರಿ ಪಶ್ಚಿಮ ಶಾಲೆ ಸೇರಿದಂತೆ ವಿವಿಧ ಶಾಲಾ–ಕಾಲೇಜು, ಇತರೆ ಸಂಸ್ಥೆಗಳಿಗೆ ಭೇಟಿ ನೀಡಿ ಮತಯಾಚನೆ ಮಾಡಿದರು. ಜೆಡಿಎಸ್ ಅಧಿಕಾರದಲ್ಲಿದ್ದಾಗ ಹಲವು ಕಾರ್ಯಕ್ರಮಗಳ ಮೂಲಕ ಪದವೀಧರ ಉದ್ಯೋಗಿಗಳು ಹಾಗೂ ನಿರುದ್ಯೋಗಿಗಳ ಹಿತಕ್ಕಾಗಿ ಪ್ರಯತ್ನಿಸಿದೆ. ವಿಧಾನಪರಿಷತ್‌ನಲ್ಲಿ ನಿಮ್ಮ ಧ್ವನಿಯಾಗಲು ಅವಕಾಶ ನೀಡುವಂತೆ ಕೋರಿಕೊಂಡರು. ಮಾಜಿ ಮೇಯರ್ ಆರ್.ಲಿಂಗಪ್ಪ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ವಕ್ತಾರ ರವಿಚಂದ್ರೇಗೌಡ ಸೇರಿದಂತೆ ಅನೇಕ ಮುಖಂಡರು ಪ್ರಚಾರದಲ್ಲಿ ಭಾಗಿಯಾಗಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಂಗಳವಾರವೂ ಬಿರುಸಿನ ಪ್ರಚಾರ ನಡೆಸಿದರು. ಸಭೆ, ಮನೆ ಮನೆ ಭೇಟಿ ಮೂಲಕ ನಿರಂತರ ಪ್ರಚಾರದಲ್ಲಿ ತೊಡಗಿರುವ ಅವರು ಇಂದು ಎನ್‌ಐಇ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಐಟಿಐ ಕಾಲೇಜು, ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಇನ್ನಿತರ ಸಂಸ್ಥೆಗಳ ಪದವೀಧರ ಮತದಾರರನ್ನು ಭೇಟಿ ಮಾಡಿ, ಮಧು ಜಿ.ಮಾದೇಗೌಡರಿಗೆ ಮತ ನೀಡಿ, ಬೆಂಬಲಿಸುವಂತೆ ಮನವಿ ಮಾಡಿದರು.

ಈ ವೇಳೆ ಕೃಷ್ಣರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ದೇವರಾಜ ಅರಸು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀಧರ್, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಸುನೀಲ್, ಮುಖಂಡರಾದ ಸುರೇಶ್, ಜೋಗಿ ಮಹೇಶ್, ರಾಘವೇಂದ್ರ, ರವಿ, ರಾಮು, ನಾಗಮಹದೇವ, ಹೇಮಂತ್ ಮತ್ತಿತರರಿದ್ದರು. ಬಿಜೆಪಿ ಅಭ್ಯರ್ಥಿ ಎಂ.ವಿ. ರವಿಶಂಕರ್ ಹಾಗೂ ಪಕ್ಷದ ಮುಖಂಡರೂ ಶಾಲಾ–ಕಾಲೇಜು ಇನ್ನಿತರ ಸಂಸ್ಥೆಗಳಿಗೆ ಭೇಟಿ ನೀಡಿ, ಮತಬೇಟೆ ನಡೆಸಿದರು. ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಆಡಳಿತ ಹಾಗೂ ಕಾರ್ಯಕ್ರಮಗಳು ತಿಳಿಸಿ, ಕಳೆದ ಬಾರಿ ಕಡಿಮೆ ಅಂತರದಲ್ಲಿ ಪರಾಭವಗೊಂಡಿದ್ದು ಈ ಬಾರಿ ಗೆಲುವಿಗೆ ಆಶೀರ್ವದಿಸುವಂತೆ ಮನವಿ ಮಾಡಿಕೊಂಡರು.

ಪಕ್ಷೇತರ ಅಭ್ಯರ್ಥಿ ಎನ್.ಎಸ್.ವಿನಯ್ ಹಾಗೂ ಅವರ ಬೆಂಬಲಿಗರೂ ಮತಯಾಚನೆಯನ್ನು ಬಿರುಸುಗೊಳಿಸಿದ್ದಾರೆ. ಎಸ್‌ಡಿಪಿಐ ಅಭ್ಯರ್ಥಿ ರಫತ್ ಉಲ್ಲಾ ಖಾನ್ ಸೇರಿದಂತೆ ಚುನಾವಣಾ ಅಖಾಡದಲ್ಲಿರುವ ಎಲ್ಲಾ ಅಭ್ಯರ್ಥಿಗಳು ಮತಯಾಚನೆ ನಡೆಸುತ್ತಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪಡಿತರ ಅಕ್ಕಿ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ: ಒಬ್ಬನ ಬಂಧನ

ಮೈಸೂರು: ಮನೆಗಳಿಂದ ಪಡಿತರ ಅಕ್ಕಿ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ವ್ಯಕ್ತಿಯೋರ್ವನನ್ನು ಬಂಧಿಸಿರುವ ಮೈಸೂರಿನ ಮೇಟಗಳ್ಳಿ ಠಾಣೆ ಪೊಲೀಸರು 5.33 ಕ್ವಿಂಟಾಲ್ ಅಕ್ಕಿ ವಶಪಡಿಸಿಕೊಂಡಿದ್ದಾರೆ. ಆಹಾರ ನಿರೀಕ್ಷಕ ವೇಣುಗೋಪಾಲ್ ಅವರಿಗೆ ಬಂದ ಮಾಹಿತಿಯಂತೆ ಪೊಲೀಸರೊಡಗೂಡಿ ಆಹಾರ ಇಲಾಖೆ ಅಧಿಕಾರಿಗಳು ಕುಂಬಾರಕೊಪ್ಪಲಿನ ಕಿಡಿಗಣ್ಣಮ್ಮನ ಬಡಾವಣೆಯಲ್ಲಿ ನಿಂತಿದ್ದ ಪ್ಯಾಸೆಂಜರ್ ಆಟೋ (ಕೆಎ10 ಸಿ3670)ವನ್ನು ತಪಾಸಣೆ ನಡೆಸಿದಾಗ ಅದರಲ್ಲಿ 12 ಚೀಲಗಳಲ್ಲಿ ಒಟ್ಟು 5.33 ಕ್ವಿಂಟಾಲ್ ಪಡಿತರ ಅಕ್ಕಿ ಪತ್ತೆಯಾಗಿದೆ. ಆರೋಪಿ ಗೌಸಿಯಾ ನಗರದ ಅಫ್ಜಲ್‌ಪಾಷ (26) ಎಂಬಾತನನ್ನು ವಿಚಾರಣೆಗೊಳಪಡಿಸಿದ ವೇಳೆ ಆತ ಹಲವಾರು ಮನೆಗಳಿಂದ ಪಡಿತರ ಅಕ್ಕಿ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಆತನನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸಾಲ ನೀಡುವ ಭರವಸೆ: 55 ಸಾವಿರ ಸುಲಿಗೆ

ಹಾಸನ: ಲೋನ್ ನೀಡುವುದಾಗಿ ನಂಬಿಸಿ ಇಂಜಿನಿಯರ್‌ವೊಬ್ಬರಿಂದ 55 ಸಾವಿರ ರೂ. ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ಹಾಸನ ತಾಲೂಕು ದೊಡ್ಡಮಂಡಿ ಗನಹಳ್ಳಿಯಿಂದ ವರದಿಯಾಗಿದೆ. ಗ್ರಾಮದ ಇಂಜಿನಿಯರ್ ಎಂ.ಬಿ.ಮನೋಜ್ (25)ಗೆ ಮೇ 4ರಂದು ಮೊಬೈಲ್‌ಗೆ 6 ಲಕ್ಷ ರೂ. ಲೋನ್ ಕೊಡುವುದಾಗಿ ಮೆಸೇಜ್ ಬಂದಿದೆ ನಂತರ ಕರೆ ಮಾಡಿ 6 ಲಕ್ಷ ಸಾಲ ಮಂಜೂರಾಗಿದೆ. 55,887 ರೂ. ವರ್ಗಾವಣೆ ಮಾಡುವಂತೆ ತಿಳಿಸಿ, ಅಪರಿಚಿತ ವ್ಯಕ್ತಿ ನೀಡಿದ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿದ್ದಾರೆ. ಆದರೆ ಅವರಿಗೆ ಯಾವುದೇ ರೀತಿಯ ಸಾಲ ಮಂಜೂರು ಮಾಡದೆ, ವಂಚಿಸಲಾಗಿದೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹಾಸನ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಪದವೀಧರ ಚುನಾವಣೆ: ಬಿಜೆಪಿಗೆ ಯಾರೂ ಪ್ರತಿಸ್ಪರ್ಧಿಯಲ್ಲ

ಮೈ.ವಿ.ರವಿಶಂಕರ್ ಗೆಲುವು ಖಚಿತ: ಮಾಜಿ ಸಿಎಂ ಡಿವಿಎಸ್ ವಿಶ್ವಾಸ



ಮಂಡ್ಯ, ಮೇ 31(ಮೋಹನ್‌ರಾಜ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್, ಜೆಡಿಎಸ್ ಹಾಗೂ ರೈತ ಸಂಘ ಬೆಂಬಲಿತ ಅಭ್ಯರ್ಥಿಗಳು ಸೇರಿದಂತೆ ನಮಗೆ ಯಾರೂ ಪ್ರತಿಸ್ಪರ್ಧಿಗಳಲ್ಲ, ನಮ್ಮ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವು ಖಚಿತ ಎಂದು ಕೇಂದ್ರ ಮಾಜಿ ಸಚಿವರೂ ಆದ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಉತ್ತಮ ಕಾರ್ಯ ಚಟುವಟಿಕೆಯ ಅಧ್ಯಯನ ವ್ಯಕ್ತಿಯಾಗಿದ್ದು, ವಿಧಾನಸಭೆಯ ಪ್ರಚಾರಿಯಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರತಿಪಕ್ಷಗಳಾದ ಕಾಂಗ್ರೆಸ್, ಜೆಡಿಎಸ್ ಹಾಗೂ ರೈತ ಸಂಘ ಬೆಂಬಲಿತ ಅಭ್ಯರ್ಥಿಗಳ ಪೈಕಿ ನಮಗೆ ಯಾರೂ ಪ್ರತಿಸ್ಪರ್ಧಿಗಳಲ್ಲ. ಜೂ.13 ರಂದು ನಡೆಯಲಿರುವ ದಕ್ಷಿಣ ಪದವೀಧರ ಕ್ಷೇತ್ರದ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮೈ.ವಿ.ರವಿಶಂಕರ್ ಗೆಲುವಿಗೆ ಅಗತ್ಯ ಕಾರ್ಯತಂತ್ರ ರೂಪಿಸಲಾಗಿದೆ. ಈ ಬಾರಿ ಬಿಜೆಪಿ ಗೆಲ್ಲುವ ವಿಶ್ವಾಸವಿದೆ ಎಂದರು.

ಕ್ಷೇತ್ರ ವ್ಯಾಪ್ತಿಯ ಪ್ರತಿ 25 ಮತದಾರರಿಗೆ ಓರ್ವ ಪ್ರಮುಖರಂತೆ ಜಿಲ್ಲೆಯ 45 ಸಾವಿರ ಮತದಾರರಿಗೆ 2200 ಘಟಕ ನಾಯಕರನ್ನು ನಿಯೋಜಿಸಲಾಗಿದೆ. ಮಂಡ್ಯ ಜಿಲ್ಲೆ ಈ ಹಿಂದೆ ಬಿಜೆಪಿ ಪಾಲಿಗೆ ಬರಡು ಭೂಮಿಯಾಗಿತ್ತು. ಪ್ರಸ್ತುತ ಮೋದಿಯವರ ನಿಲುವುಗಳಿಗೆ ತಲೆ ಬಾಗಿರುವ ಜಿಲ್ಲೆಯ ಶೇ.60ರಷ್ಟು ಮತದಾರರು ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸುವ ವಿಶ್ವಾಸವಿದ್ದು, ಜಾತಿ ರಾಜಕಾರಣಕ್ಕೆ ಸೆಡ್ಡು ಹೊಡೆದು ಭಾರೀ ಅಂತರದಲ್ಲಿ ಪಕ್ಷದ ಅಭ್ಯರ್ಥಿ ಜಯಗಳಿಸುವ ವಿಶ್ವಾಸವಿದೆ ಎಂದರು.

ಚಿಂತಕರ ಚಾವಡಿ, ಬುದ್ಧಿವಂತರ ಮನೆ ಎಂಬ ಖ್ಯಾತಿಗೆ ಕಾರಣವಾಗಿದ್ದ ವಿಧಾನ ಪರಿಷತ್ತನ್ನು ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳು ಪರ್ಯಾಯ ರಾಜಕೀಯ ಪುನರ್ವಸತಿ ಕೇಂದ್ರಗಳಾಗಿ ಪರಿವರ್ತಿಸಿದ್ದವು. ಆದರೆ, ಬಿಜೆಪಿ ಅದ್ಭುತ ವಿಚಾರ ವಿಮರ್ಶೆ ಹಾಗೂ ಕ್ಷೇತ್ರಗಳ ಪ್ರತಿನಿಧಿಗಳಿಗೆ ಸ್ಪರ್ಧಿಸಲು ಅವಕಾಶ ನೀಡಿ ಮೇಲ್ಪಂಕ್ತಿಗೆ ನಾಂದಿ ಹಾಡಿದೆ ಎಂದರು.

ರೈತ ನಾಯಕ ರಾಕೇಶ್ ಟಿಕಾಯತ್ ಮಸಿ ಪ್ರಕರಣ ಕುರಿತು, ರಾಜ್ಯ ಸರ್ಕಾರ ನಿರ್ದಾಕ್ಷಿಣ್ಯವಾಗಿ ಆರೋಪಿಗಳ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಈ ರೀತಿಯ ಘಟನೆಗಳು ಮರುಕಳಿಸಬಾರದು. ಮೋದಿ, ಮೋದಿ ಎಂದು ಕೂಗಿದ ತಕ್ಷಣ ಅವರು ಬಿಜೆಪಿಗರಲ್ಲ. ಈಗಾಗಲೇ ಆರೋಪಿಗಳನ್ನು ಬಂಧಿಸಲಾಗಿದೆ. ಈ ಪ್ರಕರಣದಲ್ಲಿ ಅಲ್ಪ ಮಟ್ಟದ ಪೊಲೀಸ್ ವೈಫಲ್ಯವೂ ವ್ಯಕ್ತವಾಗಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಮುಖಂಡರಾದ ಡಾ.ಸಿದ್ದರಾಮಯ್ಯ, ಕೆ.ಜೆ.ವಿಜಯ ಕುಮಾರ್, ನಿಂಗರಾಜುಗೌಡ, ಕಾಡೇನಹಳ್ಳಿ ನಾಗಣ್ಣಗೌಡ, ಲಕ್ಷ್ಮಿ ಅಶ್ವಿನ್‌ಗೌಡ, ವಿಶಾಲ್ ರಘು, ಡಾ.ಸದಾನಂದ ಇದ್ದರು.

ಅಪಮಾನ ಮಾಡಿದವರ ರಕ್ಷಿಸುವ ಪ್ರಶ್ನೆಯೇ ಇಲ್ಲ

ಯುಗದ ಕವಿ ಕುವೆಂಪು ಅವರ ಸಾಹಿತ್ಯ ಸೇವೆಗೆ ಬಿಜೆಪಿ ಉತ್ತುಂಗ ಗೌರವ ನೀಡಿದೆ. ಕುವೆಂಪು ರಚಿತ ನಾಡಗೀತೆಗಳನ್ನು ಕಡ್ಡಾಯಗೊಳಿಸಿರುವುದು ನಮ್ಮದೇ ಪಕ್ಷ. ಇಂತಹ ಸಂದರ್ಭದಲ್ಲಿ ಪುಸ್ತಕ ಪರಿಷ್ಕರಣ ಸಮಿತಿ ತಪ್ಪೆಸಗಿದ್ದರೆ ಅವರ ವಿರುದ್ಧ ಕ್ರಮವಾಗಲಿ. ಅವರನ್ನು ರಕ್ಷಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

ಕುವೆಂಪು ಕುರಿತ ಟೀಕೆ ಬಗ್ಗೆ ಆದಿಚುಂಚನಗಿರಿ ಶ್ರೀಗಳಿಗೆ ಮನವರಿಕೆ ಮಾಡಲಾಗಿದೆ. ನಿನ್ನೆ ಸರ್ಕಾರದ ಪ್ರಮುಖರ ಹಾಗೂ ನಾಯಕರ ಸಭೆ ನಡೆಸಲಾಗಿದ್ದು, ಸಭೆಯಲ್ಲಿ ಇದರ ಬಗ್ಗೆ ಸಂಪೂರ್ಣ ತನಿಖೆ ನಡೆಸಿ ಅಪಮಾನ ಮಾಡಿದ್ದು ಸಾಬೀತಾದರೆ ಕೂಡಲೇ ಅಂತಹವರನ್ನು ಸಮಿತಿಯಿಂದ ಕೈಬಿಡಲು ತೀರ್ಮಾನಿಸಲಾಗಿದೆ ಎಂದರು.

ಮಗಳ ಕೊಳೆತ ಶವದ ಜೊತೆ 3 ದಿನ ಕಳೆದ ಮಾನಸಿಕ ಅಸ್ವಸ್ಥ ತಾಯಿ

ಮಂಡ್ಯ, ಮೇ 31(ಮೋಹನ್‌ರಾಜ್)– ಮಗಳ ಕೊಳೆತ ಶವದ ಜೊತೆ ಹೆತ್ತ ತಾಯಿ 3 ದಿನಗಳ ಕಾಲ ವಾಸ ಮಾಡಿರುವ ವಿಚಿತ್ರ ಘಟನೆ ನಗರದ ಹಾಲಹಳ್ಳಿ ಸ್ಲಂನಿಂದ ವರದಿಯಾಗಿದೆ.

ಹಾಲಹಳ್ಳಿ ಸ್ಲಂ ತಮಿಳು ಕಾಲೋನಿ ನಿವಾಸಿ ರೂಪಾ (31) ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಮಹಿಳೆಯಾಗಿದ್ದು, ಸುಮಾರು 3 ದಿನಗಳ ಹಿಂದೆಯೇ ಈಕೆ ಸಾವನ್ನಪ್ಪಿದ್ದು, ರೂಪಾ ಮನೆಯ ಬಳಿ ಪಕ್ಕದಲ್ಲಿದ್ದ ಹಿನ್ನೆಲೆಯಲ್ಲಿ ಅನುಮಾನಗೊಂಡಿದ್ದ ಅಕ್ಕಪಕ್ಕದ ಜನ, ರೂಪಾಳ ಮನೆಯಿಂದ ದುರ್ವಾಸನೆ ಬರುತ್ತಿದ್ದನ್ನು ಗಮನಿಸಿ, ಮನೆ ಒಳಗೆ ಹೋಗಿ ನೋಡಿದಾಗ ರೂಪಾ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ.

ವಿವರ: ನಗರದ ಹಾಲಹಳ್ಳಿಯ ತಮಿಳು ಕಾಲೋನಿ ಬಳಿ ರೂಪಾ ಮತ್ತು ಆಕೆಯ ಮಾನಸಿಕ ಅಸ್ವಸ್ಥ ತಾಯಿ ನಾಗಮ್ಮ ಇಬ್ಬರೂ ವಾಸವಾಗಿದ್ದರು. 10 ವರ್ಷದ ಹಿಂದೆ ಪಾಂಡವಪುರದ ವ್ಯಕ್ತಿಯೊಬ್ಬರ ಜೊತೆ ರೂಪಾಗೆ ವಿವಾಹವಾಗಿದ್ದು, ಇಬ್ಬರು ಮಕ್ಕಳು ಸಹ ಇದ್ದಾರೆ. ಕಳೆದ 5 ವರ್ಷಗಳ ಹಿಂದೆ ಈಕೆ ಗಂಡನನ್ನು ಬಿಟ್ಟು ತಾಯಿಯೊಂದಿಗೆ ಹಾಲಹಳ್ಳಿಯಲ್ಲಿ ವಾಸಿಸುತ್ತಿದ್ದರು.

ಹೋಂಗಾರ್ಡ್ ಕೆಲಸಕ್ಕೆ ಹೋಗುತ್ತಿದ್ದ ರೂಪಾ ವರ್ಷದ ಹಿಂದೆ ಕೆಲಸವನ್ನೂ ಬಿಟ್ಟಿದ್ದಳು. ಅಕ್ಕಪಕ್ಕದವರು ಹೇಳುವ ಪ್ರಕಾರ ಮಾನಸಿಕ ಅಸ್ವಸ್ಥ ತಾಯಿ ಹಾಗೂ ರೂಪಾಳ ನಡುವೆ ಪದೆ ಪದೇ ಜಗಳವಾಗುತ್ತಿತ್ತು. ಆದರೆ ಕಳೆದ ಮೂರ್ನಾಲ್ಕು ದಿನಗಳಿಂದ ರೂಪಾ ಮನೆ ನಿಶ್ಯಬ್ದವಾಗಿರುವುದನ್ನು ಅಕ್ಕಪಕ್ಕದವರು ಗಮನಿಸಿದ್ದಾರೆ. ಆಕೆ ಎಲ್ಲೋ ಹೊರಗೆ ಹೋಗಿರಬೇಕೆಂದು ಸುಮ್ಮನಾಗಿದ್ದಾರೆ. ಆದರೆ ಸೋಮವಾರ ಬೆಳಗ್ಗೆಯಿಂದ ರೂಪಾಳ ಮನೆಯಿಂದ ದುರ್ವಾಸನೆ ಬರಲು ಆರಂಭವಾಗಿದೆ. ಇಲಿ ಅಥವಾ ಇನ್ನಿತರೆ ಪ್ರಾಣಿ ಸತ್ತಿರಬೇಕೆಂದು ಸುಮ್ಮನಾಗಿದ್ದಾರೆ.

ಆದರೆ ಸಂಜೆ ವೇಳೆಗೆ ವಾಸನೆ ಹೆಚ್ಚಾದಾಗ ಮನೆ ಒಳಗೆ ಹೋಗಿ ನೋಡಿದಾಗ ರೂಪಾ ಸಾವನ್ನಪ್ಪಿರುವುದು ಪತ್ತೆಯಾಗಿದೆ. ಆದರೆ ಈ ಬಗ್ಗೆ ಆಕೆಯ ತಾಯಿ ನಾಗಮ್ಮನ್ನು ಕೇಳಿದರೆ ಮಾನಸಿಕ ಅಸ್ವಸ್ಥಳಾದ ಪರಿಣಾಮ ಆಕೆ ಏನನ್ನೂ ಹೇಳುವ ಸ್ಥಿತಿಯಲ್ಲಿಲ್ಲ. ಇನ್ನು ರೂಪಾಳ ಸಾವಿಗೆ ಬಿಪಿ ಅಥವಾ ಹೃದಯಾಘಾತದಿಂದ ಸಾವಾಗಿರಬಹುದೆಂದು ಮಂಡ್ಯ ಪೂರ್ವ ಠಾಣೆಯಲ್ಲಿ ಇಂದು ದೂರು ನೀಡಿದ್ದು, ದೂರಿನ ಅನ್ವಯ ಪೊಲೀಸರು ಸ್ಥಳ ಮಹಜರು ಮಾಡಿ, ತನಿಖೆ ಆರಂಭಿಸಿದ್ದಾರೆ. ಜೊತೆಗೆ ಆಕೆಯ ಅಸ್ವಾಭಾವಿಕ ಸಾವು ಪ್ರಕರಣ ದಾಖಲು ಮಾಡಿಕೊಂಡು ಶವದ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ವರದಿ ಬಂದ ಬಳಿಕ ಇದು ಕೊಲೆಯೋ ಅಥವಾ ಅಸಹಜ ಸಾವೋ ಎಂಬುದು ಗೊತ್ತಾಗಲಿದೆ.

ಇನ್ನು ರೂಪಾ ಸಾವನ್ನಪ್ಪಿ ಮೂರ್ನಾಲ್ಕು ದಿನ ಕಳೆದಿದ್ದರೂ ಆಕೆಯ ತಾಯಿ ನಾಗಮ್ಮ ಮಾತ್ರ ಮನೆಯಿಂದ ಹೊರ ಬಂದಿಲ್ಲ ಎಂಬುದು ಅಕ್ಕಪಕ್ಕದ ಮನೆಯವರ ವಿಚಾರಣೆಯಿಂದ ಬೆಳಕಿಗೆ ಬಂದಿದ್ದು, ಇನ್ನು ರೂಪಾಳ ತಾಯಿ ಮಾನಸಿಕ ಅಸ್ವಸ್ಥೆ ಬಗ್ಗೆ ನಮಗೆ ಮಾಹಿತಿ ಇಲ್ಲ ಎಂದಿರುವ ಎಸ್ಪಿ ಯತೀಶ್, ರೂಪಾ ಮತ್ತು ಆಕೆಯ ತಾಯಿ ಬಗ್ಗೆ ಮಹಜರು ಪಡೆದು ರೂಪಾಳ ತಾಯಿಯನ್ನು ವಿಚಾರಣೆಗೆ ಒಳಪಡಿಸುವುದಾಗಿ ಹೇಳಿದ್ದಾರೆ.

ಅಕ್ಕಪಕ್ಕದ ಮನೆಯವರು ರೂಪಾಳ ಮನೆಗೆ ಯಾರ್ಯಾರೋ ಬರುತ್ತಿದ್ದರು. ಆಗಾಗ ಜಗಳ ಸಹ ನಡೆಯುತ್ತಿತ್ತು ಎಂದು ಹೇಳಿಕೆ ಕೊಟ್ಟಿದ್ದು, ಆ ಆಯಾಮದಲ್ಲೂ ಪೊಲೀಸರು ತನಿಖೆ ಶುರು ಮಾಡಿದ್ದು, ಅನುಮಾನಾಸ್ಪದ ಸಾವು ಸಹಜ ಸಾವೋ ಅಥವಾ ಕೊಲೆಯೋ ಎಂಬುದು ಬಹಿರಂಗವಾದ ಬಳಿಕ ಪ್ರಕರಣದ ತನಿಖೆ ಚುರುಕುಗೊಳ್ಳಲಿದೆ.

ರಾಕೇಶ್ ಟಿಕಾಯತ್ ಮೇಲಿನ ಹಲ್ಲೆ ಖಂಡಿಸಿ ಪ್ರತಿಭಟನೆ



ಮದ್ದೂರು, ಮೇ 31– ಬೆಂಗಳೂರಿನ ಗಾಂಧಿ ಭವನದಲ್ಲಿ ರೈತ ಮುಖಂಡ ರಾಕೇಶ್ ಟಿಕಾಯತ್ ಮೇಲೆ ಹಲ್ಲೆ ನಡೆಸಿ, ಮುಖಕ್ಕೆ ಮಸಿ ಬಳಿದಿರುವ ಕ್ರಮ ಖಂಡಿಸಿ ರಾಜ್ಯ ರೈತ ಸಂಘದಿಂದ ಪಟ್ಟಣದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗಪ್ಪಾಜಿ ಮಾತನಾಡಿ, ರೈತ ಮುಖಂಡ ಟಿಕಾಯತ್ ಮೇಲೆ ಹಲ್ಲೆ ನಡೆಸಿ, ಮುಖಕ್ಕೆ ಮಸಿ ಬಳಿದಿರುವುದನ್ನು ರೈತ ಸಮುದಾಯ ಹಾಗೂ ಕರ್ನಾಟಕದ ಸಂಸ್ಕೃತಿಗೆ ಮಾಡಿದ ಅಪಮಾನ. ಈ ಕೃತ್ಯವನ್ನು ರೈತ ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದರು.

ಇದು ಏಕಾಏಕಿ ನಡೆದಿರುವ ಘಟನೆಯಲ್ಲ. ಪೂರ್ವ ನಿಯೋಜಿತ ಘಟನೆಯಾಗಿದ್ದು, ಘಟನೆ ಹಿಂದೆ ಸಂಘ ಪರಿವಾರ ಮತ್ತು ಬಿಜೆಪಿ ಕೈವಾಡವಿರುವುದು ಮೇಲ್ನೋಟಕ್ಕೆ ಎದ್ದು ಕಾಣುತ್ತಿದೆ. ಜತೆಗೆ ಭದ್ರತಾ ವೈಫಲ್ಯ ಆಗಿದೆ ಎಂದರು.

ಘಟನೆ ಸಂಬಂಧ ಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿಗಳು ರಾಜ್ಯದ ಜನರ ಬಳಿ ಕ್ಷಮೆ ಕೇಳಬೇಕು. ಕೃತ್ಯದ ಹಿಂದಿರುವ ವ್ಯಕ್ತಿ ಹಾಗೂ ಶಕ್ತಿಗಳು ಯಾರೆಂಬುವುದನ್ನು ಪತ್ತೆ ಮಾಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಗ್ರೇಡ್–2 ತಹಸೀಲ್ದಾರ್ ಸೋಮಶೇಖರ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ತಾಲೂಕು ಅಧ್ಯಕ್ಷ ಜಿ.ಕೆ. ರಾಮಕೃಷ್ಣ, ತಾಲೂಕು ಕಾರ್ಯದರ್ಶಿ ವಿನೋದ್‌ಬಾಬು, ಖಜಾಂಚಿ ಎಸ್.ಎಂ. ಸಿದ್ದೇಗೌಡ, ಮುಖಂಡರಾದ ವರದರಾಜು, ಜಿ.ಎ.ಶಂಕರ್, ಪುಟ್ಟಸ್ವಾಮಿ, ಶಿವಕುಮಾರ್, ರವಿ, ಅಶೋಕ್, ವೆಂಕಟಪ್ಪ, ಸ್ವಾಮಿ, ಕೃಷ್ಣ, ವೆಂಕಟೇಶ್, ರಾಮಣ್ಣ, ದಯಾನಂದ್, ಬೋರೇಗೌಡ, ನಾಗೇಶ್, ಶ್ರೀನಿವಾಸ್, ಉಮೇಶ್, ಲಿಂಗರಾಜು ಇದ್ದರು.

ಭರದಿಂದ ಸಾಗಿದ ಶಾಲಾ ಕಾಂಪೌಂಡ್ ನಿರ್ಮಾಣ ಕಾಮಗಾರಿ



ಶ್ರೀರಂಗಪಟ್ಟಣ, ಮೇ 31(ವಿನಯ್ ಕಾರೇಕುರ)– ತಾಲೂಕಿನ ಅರಕೆರೆ ಗ್ರಾಮದ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ತಡೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಪಟ್ಟಣದ ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ವಜಾಗೊಳಿಸಿದ ಹಿನ್ನೆಲೆಯಲ್ಲಿ ಶಾಲಾ ಕಾಂಪೌಂಡ್ ನಿರ್ಮಾಣ ಕಾಮಗಾರಿ ಯಾವುದೇ ಅಡೆತಡೆ ಇಲ್ಲದೆ ಭರದಿಂದ ಸಾಗಿದೆ.

ಶಾಲಾ ಕಾಂಪೌಂಡ್ ನಿರ್ಮಿಸದಂತೆ ತಡೆ ಕೋರಿ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹಾಗೂ ಅವರ ಬೆಂಬಲಿಗರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಧೀಶರಾದ ವೈ.ಎಚ್.ದೇವರಾಜು ವಜಾಗೊಳಿಸಿ ಶುಕ್ರವಾರ ಆದೇಶಿಸಿದ್ದರು.

ವಿವಾದಿತ ಸ್ಥಳದಲ್ಲಿ ರಸ್ತೆ ಇತ್ತು ಎಂಬ ಬಗ್ಗೆ ವಾದಿಗಳ ಪರ ವಕೀಲರು ನ್ಯಾಯಾಲಯಕ್ಕೆ ಸರಿಯಾದ ಸಾಕ್ಷ್ಯಾಧಾರ ಒದಗಿಸದ ಕಾರಣ ಅರ್ಜಿ ವಜಾಗೊಂಡಿತ್ತು. ಶಾಲಾ ಕಾಂಪೌಂಡ್ ನಿರ್ಮಾಣ ವಿಚಾರದಲ್ಲಿ ಯಾವುದೇ ದಾಖಲೆ ಇಲ್ಲದೆ ಮಧ್ಯ ಪ್ರವೇಶಿಸಿ ಕೋರ್ಟ್ ಮೆಟ್ಟಿಲೇರಿದ ವಿವಾದದಿಂದಾಗಿ ಅರ್ಜಿದಾರರಿಗೆ ದಂಡವನ್ನೂ ಸಹ ವಿಧಿಸಿದೆ. ಶಾಲಾ ಕಾಂಪೌಂಡ್‌ನ ಈ ವಿಷಯವನ್ನು ರವೀಂದ್ರ ಶ್ರೀಕಂಠಯ್ಯ ಸದನದಲ್ಲೂ ಪ್ರಸ್ತಾಪಿಸಿದ್ದರು. ರಸ್ತೆ ಬಿಟ್ಟು ಕಾಂಪೌಂಡ್ ನಿರ್ಮಿಸಿ ಎಂದು ರಮೇಶ ಬಂಡಿಸಿದ್ದೇಗೌಡ ಬೆಂಬಲಿಗರು ಹಠ ಹಿಡಿದು ಕಾಂಪೌಂಡ್ ನಿರ್ಮಾಣಕ್ಕೆ ತಡೆ ತಂದಿದ್ದರು.

ಕಾಂಪೌಂಡ್ ನಿರ್ಮಾಣಕ್ಕೆ ಸರ್ಕಾರದಿಂದ 20 ಲಕ್ಷ ಅನುದಾನ ಬಿಡುಗಡೆಯಾಗಿತ್ತು. ಆದರೆ ತಕರಾರಿದ್ದ ಕಾರಣ ಸಕಾಲದಲ್ಲಿ ಕಾಮಗಾರಿ ಮುಗಿಸದೆ 12.30 ಲಕ್ಷ ವಾಪಸ್ ಹೋಗಿತ್ತು. ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ಶಾಲೆಗೆ ಕಾಂಪೌಂಡ್ ನಿರ್ಮಾಣ ಮಾಡಲೇಬೇಕು ಎಂಬ ಉದ್ದೇಶದಿಂದ ಶಾಸಕರ ವಿಶೇಷ ಅನುದಾನದಿಂದ 5 ಲಕ್ಷ ರೂ. ಬಿಡುಗಡೆ ಮಾಡಿ ಕಾಮಗಾರಿ ನಡೆಸಲು ಗುತ್ತಿಗೆದಾರರಿಗೆ ತಿಳಿಸಿದ್ದರು. ಕೋರ್ಟ್ ಆದೇಶ ಬಂದ ಹಿನ್ನೆಲೆಯಲ್ಲಿ ಯಾವುದೇ ಅಡೆ ತಡೆ ಇಲ್ಲದೆ ಶಾಲಾ ಕಾಂಪೌಂಡ್ ನಿರ್ಮಾಣ ಕಾಮಗಾರಿ ನಡೆಸಲಾಗುತ್ತಿದೆ.


ಅರ್ಜಿ ಆಹ್ವಾನ

ಮಂಡ್ಯ, ಮೇ 31– ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು ಒಟ್ಟು 835 (SSC) ಹೆಡ್ ಕಾನ್‌ಸ್ಟೇಬಲ್ ದೆಹಲಿ ಪೊಲೀಸ್ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಪಿಯುಸಿ ವಿದ್ಯಾರ್ಹತೆ ಹೊಂದಿದ 18 ರಿಂದ 25 ವರ್ಷದ ಅಭ್ಯರ್ಥಿಗಳು ಆನ್‌ಲೈನ್ https://ssc.nic.in ಮತ್ತು WWW.sssckkr.kar.nic.in ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂ.16 ಕಡೆ ದಿನ. ಹೆಚ್ಚಿನ ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಉದ್ಯೋಗಾಧಿಕಾರಿ ಎನ್.ಆರ್.ವೇಣುಗೋಪಾಲ್ ದೂ:08232–295124 ಸಂಪರ್ಕಿಸಬಹುದು.

ಜೂ.6, ನೇರ ಸಂದರ್ಶನ

ಮಂಡ್ಯ ಮೇ 31– ನಗರದ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಜೂ.6 ರಂದು ಬೆಳಗ್ಗೆ 10 ಗಂಟೆಗೆ ನೇರ ಸಂದರ್ಶನ ಆಯೋಜಿಸಲಾಗಿದೆ. ಮಂಡ್ಯ ಸೂರ್ಯೋದಯ ಮೈಕ್ರೋ ಫೈನಾನ್ಸ್ ಬ್ಯಾಂಕ್ ನಿಯೋಜಕರು ಭಾಗವಹಿಸಲಿದ್ದು, ಪಿಯುಸಿ, ಐಟಿಐ ಯಾವುದೇ ಪದವಿ ಹೊಂದಿರುವ 21 ವರ್ಷದಿಂದ 27 ವರ್ಷದೊಳಗಿನ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದು. ಮಾಹಿತಿಗೆ ದೂ:08232–295124 ಸಂಪರ್ಕಿಸಿ.

ಎಂ.ಕೆ.ಪ್ರಕಾಶ್ ನಿಧನ



ಕೆ.ಆರ್.ಪೇಟೆ, ಮೇ 31– ತಾಲೂಕಿನ ಮಾದಿಹಳ್ಳಿ ಗ್ರಾಮದ ನಿವಾಸಿ ಕೆಂಪೇಗೌಡರ ಪುತ್ರ ಎಂ.ಕೆ.ಪ್ರಕಾಶ್ (65) ಮಂಗಳವಾರ ನಿಧನರಾದರು.

ಮೃತರು ಸಹೋದರ ಕಿಕ್ಕೇರಿ ಇಂಡೇನ್ ಗ್ಯಾಸ್ ಏಜೆನ್ಸಿ ಮಾಲೀಕ ಶ್ರೀನಾಥ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 3 ಗಂಟೆಗೆ ಡಾಣಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

ಇಂದು ಹುಯಿಲಾಳು ರಾಮಸ್ವಾಮಿ ಹುಟ್ಟುಹಬ್ಬ



ಮೈಸೂರು, ಮೇ 31–ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀಮತಿ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಡಿಸಿಸಿ ಕಾರ್ಯದರ್ಶಿ ಹುಯಿಲಾಳು ರಾಮಸ್ವಾಮಿ ಅವರ 44ನೇ ಹುಟ್ಟುಹಬ್ಬವನ್ನು ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಆವರಣದಲ್ಲಿ ಟ್ರಸ್ಟ್ ಹಾಗೂ ಹುಯಿಲಾಳು ರಾಮಸ್ವಾಮಿ ಅಭಿಮಾನಿ ಬಳಗದ ವತಿಯಿಂದ ನಾಳೆ (ಬುಧವಾರ)ಬೆಳಗ್ಗೆ 9.30 ಗಂಟೆಗೆ ಆಚರಣೆ ಮಾಡಲು ನಿರ್ಧರಿಸಲಾಗಿದೆ.

ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ನರೇಂದ್ರ, ತಾಲೂಕು ಪಂಚಾಯಿತಿ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರುಗಳು, ಮಾಜಿ ಸದಸ್ಯರುಗಳು, ಕಾಂಗ್ರೆಸ್ ಮುಖಂಡರುಗಳು, ಗ್ರಾಮಸ್ಥರು, ಎಲ್ಲಾ ಸಂಘ–ಸಂಸ್ಥೆಯವರು ಭಾಗವಹಿಸಲಿದ್ದಾರೆ. ನಂತರ ಬೆಳಗ್ಗೆ 11 ಗಂಟೆಗೆ ವಿಜಯನಗರ ನಾಲ್ಕನೇ ಹಂತದ ಆಲದ ಮರದ ಹತ್ತಿರ ಹುಯಿಲಾಳು ಜಯರಾಮ್ ಅವರು ಉಚಿತವಾಗಿ ಸಾರ್ವಜನಿಕರಿಗೆ ಎಳನೀರು ನೀಡುವುದರ ಮೂಲಕ ರಂಗ ಕಲಾವಿದರಾದ ಹುಯಿಲಾಳು ರಾಮಸ್ವಾಮಿ ಅವರ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದಾರೆ.

ತಾವು ದ್ರಾವಿಡ ಎಂದು ಹೇಳಿಕೊಂಡ ಸಿದ್ದರಾಮಯ್ಯರ ರೀತಿ ಇತರರು ಹೇಳಿಕೆ ನೀಡಲಿ

ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್



ಮೈಸೂರು, ಮೇ 31(ಆರ್‌ಕೆಬಿ)– ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ತಾವು ದ್ರಾವಿಡ ಎಂದು ತಮ್ಮ ವಿರೋಧಿಗಳಿಗೆ ಉತ್ತರ ನೀಡಿರುವುದನ್ನು ಬಹುಜನ ಸಮಾಜ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಮಾಜಿ ಮೇಯರ್ ಪುರುಷೋತ್ತಮ್ ಸ್ವಾಗತಿಸಿದ್ದು, ಇಂತಹ ಹೇಳಿಕೆಯನ್ನು ಇತರ ನಾಯಕರೂ ಹೇಳಿಕೊಳ್ಳಬೇಕಾದ ಅಗತ್ಯವಿದೆ ಎಂದರು. ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್ಯರನ್ನು ಕುರಿತಂತೆ ದೇಶದಲ್ಲಿ ಸಾಕಷ್ಟು ವರ್ಷಗಳಿಂದ ಪ್ರಸ್ತಾಪ ಆಗುತ್ತಿದೆ. ಅಲೆಮಾರಿಗಳಾಗಿದ್ದ ಅವರು ಭಾರತ ಪ್ರವೇಶಿಸಿ ಇಲ್ಲಿನ ಬುಡಕಟ್ಟು ಸಂಸ್ಕೃತಿಯವರ ಮೇಲೆ ದಾಳಿ ಮಾಡಿದ್ದಾರೆ. ಬುದ್ಧನ ಕಾಲದಿಂದಲೂ ಇದನ್ನು ಸರಿದೂಗಿಸುವ ಯತ್ನ ನಡೆದಿದೆ. ಹೀಗಾಗಿ ಈಗಲೂ ಏಕ ಸಂಸ್ಕೃತಿ ಬಿತ್ತುವ ಕೆಲಸ ನಡೆದಿದೆ. ಆರ್ಯ ಮೂಲದವರು ನಾವೇ ಆಡಳಿತ ನಡೆಸಬೇಕು, ತಮ್ಮನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ಎಂಬ ಮನೋಭಾವ ಹೊಂದಿದವರಾಗಿದ್ದಾರೆ. ಹೀಗಾಗಿ ದೇಶದ ಬಹುಸಂಖ್ಯಾತರು ತಾವೆಲ್ಲ ದ್ರಾವಿಡ ಮೂಲದವರೆಂದು ಹೇಳಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಮಕ್ಕಳಿಗೆ ಸಂಶೋಧಕರ ನೆರವಿನಿಂದ ಪಠ್ಯ ನೀಡಲು ಸಾಧ್ಯವಾಗದ ಪರಿಸ್ಥಿತಿ ಏರ್ಪಟ್ಟಿರುವ ಬಗ್ಗೆ ಅವರು ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಸಿದ್ದಸ್ವಾಮಿ ಮಾತನಾಡಿ, ಇಲ್ಲಿನ ನಾಗರಿಕ ಸಂಸ್ಕೃತಿಯನ್ನು ವಲಸೆಕೋರರು ಹಾಳು ಮಾಡಿದರು. ಸಿಂಧೂ ನದಿ ನಾಗರಿಕತೆಯನ್ನು ನಾಶ ಮಾಡಿದರು. ಈಗಲೂ ಇದೇ ರೀತಿಯ ದಾಳಿ ಮುಂದುವರಿದಿದ್ದು, ಸಿದ್ದರಾಮಯ್ಯ ಅವರ ಹಾದಿಯಲ್ಲಿ ಇತರರೂ ಸಾಗಿ ತಾವು ದ್ರಾವಿಡ ಮೂಲದವರೆಂದು ಹೇಳಿಕೊಳ್ಳಬೇಕಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು ಇನ್ನಿತರರು ಉಪಸ್ಥಿತರಿದ್ದರು.

ನಿರ್ಮಾಪಕ ಎಂ.ಡಿ.ಪಾರ್ಥಸಾರಥಿಗೆ ಸನ್ಮಾನ



ಮೈಸೂರು, ಮೇ 31– ಕರುಣಾಮಯಿ ವಿಷ್ಣು ಅಭಿಮಾನಿ ಬಳಗ ವತಿಯಿಂದ ಚಾಮುಂಡಿಪುರಂನಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನಡೆದ ಚುನಾವಣೆಯಲ್ಲಿ ನೂತನವಾಗಿ ಮೈಸೂರಿನಿಂದ ಚುನಾಯಿತರಾದ ನಿರ್ಮಾಪಕರ ವಲಯದ ಸದಸ್ಯರಾದ ಎಂ.ಡಿ. ಪಾರ್ಥಸಾರಥಿ ಅವರನ್ನು ಸನ್ಮಾನಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್‌ನ ನಿಕಟಪೂರ್ವ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ್ ಗೌಡ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಇಳೈ ಆಳ್ವಾರ್ ಸ್ವಾಮೀಜಿ, ನಗರ ಪಾಲಿಕಾ ಸದಸ್ಯರಾದ ಮಾ.ವಿ. ರಾಮ್ ಪ್ರಸಾದ್, ಜಗದೀಶ್, ಅಪೂರ್ವ ಸುರೇಶ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್.ರಾಜೇಶ್, ಹರೀಶ್ ನಾಯ್ಡು, ಅಜಯ್ ಶಾಸ್ತ್ರಿ, ರಂಗನಾಥ್, ವಿನಯ್ ಕಣಗಾಲ್, ರಾಕೇಶ್ ಕುಂಚಿಟಿಗ ಇನ್ನಿತರರು ಇದ್ದರು.

ಬೆಂಗಳೂರಿನಲ್ಲಿ ಸ್ನೇಹಿತನಿಗೆ ಆಸಿಡ್ ಹಾಕಿದವ ಮೈಸೂರು ಬಳಿ ಬಂಧನ

ಬೆಂಗಳೂರು, ಮೇ 31– ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಮತ್ತೊಂದು ಆಸಿಡ್ ದಾಳಿ ಪ್ರಕರಣ ಬೆಳಕಿಗೆ ಬಂದಿದ್ದು, ಸ್ನೇಹಿತನಿಂದ ಸ್ನೇಹಿತನ ಮೇಲೆಯೇ ಆಸಿಡ್ ದಾಳಿ ಮಾಡಿರುವ ಘಟನೆ ವರದಿಯಾಗಿದೆ.

ಬೆಂಗಳೂರಿನ ಕಬ್ಬನ್‌ಪೇಟೆ 10ನೇ ಕ್ರಾಸ್‌ನಲ್ಲಿ ಈ ಘಟನೆ ನಡೆದಿದ್ದು, ಪಶ್ಚಿಮ ಬಂಗಾಳ ಮೂಲದ ಜನತಾ ಅದಕ್ ತನ್ನ ಸ್ನೇಹಿತನಿಗೆ ಆಸಿಡ್ ಎರಚಿದ್ದಾನೆ. ಜನತಾ ಅದಕ್ ಹಾಗೂ ಸಂತ್ರಸ್ತ ಸಾಂತ್ರಾ ಬೆಳ್ಳಿ ಪಾಲಿಶ್ ಅಂಗಡಿಯಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿದ್ದರು. ಆದರೆ ಭಾನುವಾರ ರಾತ್ರಿ ಇಬ್ಬರ ನಡುವೆ ಜಗಳವಾಗಿತ್ತು. ಜನತಾ ಅದಕ್ ಹಾಗೂ ಸಂತ್ರಸ್ತ ಕುಡಿದು ಗಲಾಟೆ ಮಾಡಿಕೊಂಡಿದ್ದರು.

ಈ ವೇಳೆ ಸಂತ್ರಸ್ತ ಸಾಂತ್ರಾ ಮೊಬೈಲ್‌ನಲ್ಲಿ ವೀಡಿಯೋ ಮಾಡಲು ಮುಂದಾಗಿದ್ದ. ಇದರಿಂದ ಕೋಪಗೊಂಡ ಜನತಾ ಅದಕ್ ಬೆಳ್ಳಿ ಪಾಲಿಶ್ ಮಾಡಲು ತಂದಿದ್ದ ಡೈಲೂಟ್ ಆಸಿಡ್ ಎರಚಿದ್ದಾನೆ. ಘಟನೆಯಲ್ಲಿ ಸಂತ್ರಸ್ತ ಸಾಂತ್ರಾನ ಮುಖ, ಎದೆಗೆ ಗಾಯವಾಗಿದ್ದು, ಶೇ.30ರಷ್ಟು ಸುಟ್ಟಿದೆ. ಸಂತ್ರಸ್ತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಹೆಚ್ಚಿನ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಪ್ರಕರಣ ಸಂಬಂಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಜನತಾ ಅದಕ್‌ನನ್ನು ಮೈಸೂರು ಬಳಿ ಪೊಲೀಸರು ಬಂಧಿಸಿದ್ದಾರೆ.

ಗ್ರಂಥಾಲಯ ಸದಸ್ಯತ್ವ ಶುಲ್ಕ ಪರಿಷ್ಕರಣೆ

ಮೈಸೂರು, ಮೇ 31– ಕೇಂದ್ರ ಗ್ರಂಥಾಲಯ ಮುಖ್ಯ ಶಾಖೆ ಹಾಗೂ ಅಧೀನ ಶಾಖಾ ಸೇವಾ ಕೇಂದ್ರ ಗ್ರಂಥಾಲಯಗಳಿಂದ ಪುಸ್ತಕಗಳನ್ನು ಎರವಲು ಪಡೆಯಲು ಸದಸ್ಯತ್ವ ಠೇವಣಿ ಹಾಗೂ ಅರ್ಜಿ ಶುಲ್ಕದ ಮೊತ್ತವನ್ನು ಸರ್ಕಾರದ ಆದೇಶದ ಅನ್ವಯ ಪರಿಷ್ಕರಿಸಲಾಗಿದ್ದು, ಈ ಹಿಂದೆ ಸದಸ್ಯತ್ವ ನೋಂದಣಿ ಪಡೆದಿರುವ ಸದಸ್ಯರು ಪ್ರಸ್ತುತ ಪರಿಷ್ಕೃತ ದರ 1 ಕಾರ್ಡ್‌ಗೆ ರೂ.100, ಎರಡು ಕಾರ್ಡ್‌ಗೆ 150 ಮತ್ತು ಮೂರು ಕಾರ್ಡ್‌ಗೆ 200 ರಂತೆ ವ್ಯತ್ಯಾಸದ ಮೊತ್ತವನ್ನು ಆಯಾ ಶಾಖಾ ಸೇವಾ ಕೇಂದ್ರ ಗ್ರಂಥಾಲಯಗಳಲ್ಲಿ ಪಾವತಿಸಿ ಪುಸ್ತಕಗಳನ್ನು ಎರವಲು ಪಡೆಯಲು ಕೋರಲಾಗಿದೆ ಎಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೋದಿ ಭೇಟಿ ಹಿನ್ನೆಲೆಯಲ್ಲಿ

ಮೈಸೂರು ಸಿಟಿ ಬಸ್ ಸ್ಟ್ಯಾಂಡ್ ತಾತ್ಕಾಲಿಕ ಸ್ಥಳಾಂತರ

ಮೈಸೂರು, ಮೇ 31(ಆರ್‌ಕೆ)–ಜೂ.21ರಂದು ಮೈಸೂರಲ್ಲಿ ನಡೆಯುವ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸುತ್ತಿರುವುದರಿಂದ ನಗರದ ಸಿಟಿ ಬಸ್ ಸ್ಟ್ಯಾಂಡ್ ಅನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸುವ ಬಗ್ಗೆ ಪೊಲೀಸ್ ಆಯುಕ್ತರು ತೀರ್ಮಾನ ಕೈಗೊಳ್ಳುವರು ಎಂದು ನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ. ಪ್ರಧಾನಿಗಳು ಅರಮನೆ ಆವರಣದಲ್ಲಿ ನಡೆಯುವ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್ ಸಿಂಹ ಮತ್ತು ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸ್ಥಳ ಪರಿಶೀಲನೆ ನಡೆಸಿದ ವೇಳೆ ಉಪಸ್ಥಿತರಿದ್ದು ಮಾತನಾಡಿದ ಅವರು, ಭದ್ರತೆ ದೃಷ್ಟಿಯಿಂದ ಈ ಸ್ಥಳಾಂತರ ಅನಿವಾರ್ಯ ಎಂದರು.


ಶಿಥಿಲಗೊಂಡಿರುವ ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡವನ್ನು ನೆಲಸಮಗೊಳಿಸಿ ಪುನರ್ ನಿರ್ಮಾಣ ಮಾಡಲು ಪಾರಂಪರಿಕ ಸಮಿತಿ ವರದಿ ನೀಡಿದ್ದು, ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಕೋರ್ಟ್ ಆದೇಶ ಹೊರ ಬಂದ ನಂತರ ಸರ್ಕಾರದ ಅನುಮೋದನೆ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಇದೇ ವೇಳೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಗಂಗಮ್ಮ .ಎಸ್ ನಿಧನ



ಮೈಸೂರು, ಮೇ 31– ನಗರದ ಗೋಕುಲಂ ನಿವಾಸಿ ಲೇಟ್ ಸಂಜೀವಯ್ಯ (ರೈಲ್ವೆ) ಇವರ ಧರ್ಮಪತ್ನಿ ಶ್ರೀಮತಿ ಗಂಗಮ್ಮ.ಎಸ್ (88) ಮಂಗಳವಾರ ಸಂಜೆ ನಿಧನರಾದರು. ಮೃತರು ಐವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಜೂ.1 (ಬುಧವಾರ) ಮಧ್ಯಾಹ್ನ 1.30 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.06.2022 ಬುಧವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 7.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ದ್ವಿತೀಯ, ನಕ್ಷತ್ರ : ಮೃಗಶಿರಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್** : 80ನೇ ಜಯಂತ್ಯುತ್ಸವ, ಬೆಳಗ್ಗೆ 9ಕ್ಕೆ ನವಗ್ರಹ, ಮೃತ್ಯುಂಜಯ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.
- **ಮೈಸೂರು ವಿಶ್ವವಿದ್ಯಾನಿಲಯ ತಾಂತ್ರಿಕ ಶಾಲೆ** : ಭಾಷೆ ಮತ್ತು ಸಂಸ್ಕೃತಿ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಮುಖ್ಯ ಅತಿಥಿಗಳು : ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಧಾನ ಭಾಷಣ : ಕಸಾಪ ಮಾಜಿ ಅಧ್ಯಕ್ಷ ಚಂದ್ರಶೇಖರ್, ಸ್ಥಳ: ವಿಜ್ಞಾನ ಭವನ, ಮೈಸೂರು ವಿಶ್ವವಿದ್ಯಾನಿಲಯ, ಬೆಳಗ್ಗೆ 10ಕ್ಕೆ.
- **ನವಜ್ಯೋತಿ ಕ್ರಿಕೆಟ್ ಕ್ಲಬ್** : ಶ್ರೀ ಕೃಷ್ಣ ಡೈಮಂಡ್ಸ್ ಅಂಡ್ ಜ್ಯುವೆಲ್ಲರಿ ಮೊಫುಸಿಲ್ ಮಹಿಳಾ ಕ್ರಿಕೆಟ್ ಟೂರ್ನಮೆಂಟ್, ಮುಖ್ಯ ಅತಿಥಿಗಳು : ಚಲನಚಿತ್ರ ನಟ ಕಿರಣ್ ರಾಜ್, ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ, ಪಾಲಿಕೆ ಸದಸ್ಯೆ ಭಾಗ್ಯ ಸಿ. ಮಾದೇಶ್, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವಿ. ಕವೀಶ್‌ಗೌಡ, ಬಸವ ಮಾರ್ಗ ಫೌಂಡೇಷನ್ ಅಧ್ಯಕ್ಷ ಬಸವರಾಜು, ಸ್ಥಳ: ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನ, ಬೆಳಗ್ಗೆ 10.30ಕ್ಕೆ.
- **ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು** : ಮಹಾತರಂಗ ಸಾಂಸ್ಕೃತಿಕ ಕಾರ್ಯಕ್ರಮ, ಮುಖ್ಯ ಅತಿಥಿಗಳು : ರಂಗಕರ್ಮಿ ಪ್ರೀತಿ ನಾಗರಾಜ್, ಅಧ್ಯಕ್ಷತೆ : ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಡಾ. ಡಿ. ರವಿ, ಸ್ಥಳ: ಕಾಲೇಜು ಮುಂಭಾಗ, ಮಧ್ಯಾಹ್ನ 12ಕ್ಕೆ.
- **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ** : ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಪ್ರತಿಷ್ಠಾಪನಾ 'ವಜ್ರ ಮಹೋತ್ಸವ', ಶ್ರೀಮತಿ ಅನುಷಾ ಪವನ್, ಶ್ರೀಮತಿ ರೂಪಾ ಪ್ರಭಾಂಜನ್, ಶ್ರೀಮತಿ ರಮ್ಯಾ ಸುಧೀರ್ ಅವರಿಂದ ದಾಸಾಂಜಲಿ ದಾಸರ ಪದಗಳ ಗಾಯನ, ವಿದ್ವಾನ್ ಶ್ರೀಪಾದದಾಸ್ (ಹಾರ್ಮೋನಿಯಂ), ವಿದ್ವಾನ್ ಜಯತೀರ್ಥ ಆದ್ಯ (ತಬಲ), ಸ್ಥಳ: ಶತಮಾನೋತ್ಸವ ಭವನ, ಶಾರದಾ ವಿಲಾಸ ಕಾಲೇಜು ಆವರಣ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ
- **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ** : ಪ್ರಸ್ತುತದಲ್ಲಿ ಅಂಬೇಡ್ಕರ್ ಚಿಂತನೆಗಳು ಹಾಗೂ ಸಾಧಕರಿಗೆ ಡಾ. ಬಿ.ಆರ್. ಅಂಬೇಡ್ಕರ್ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ನಿವೃತ್ತ ಪ್ರಾಧ್ಯಾಪಕ ಪ್ರೊ. ಬಿ.ಪಿ. ಮಹೇಶ್‌ಚಂದ್ರ ಗುರು, ಅಧ್ಯಕ್ಷತೆ : ಪ್ರಗತಿಪರ ರೈತ ಪುಟ್ಟಯ್ಯ ಮಾಲಾರ್, ಅಭಿನಂದಿಸುವವರು : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು, ಸ್ಥಳ: ಗುರು ರೆಸಿಡೆನ್ಸಿ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ–ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ–ಬಾಲಚಂದ್ರ ನಾಕೋಡ್– ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ಶೇಷಗಿರಿ ದಾಸರು, ಮಾಲತಿ ಶರ್ಮಾ, 12.45 ಲಾಕ್‌ಡೌನ್ ಕಥಾ ನಾಟಕ, ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ 'ಓಣಿ ಬಾಗಿಲು', ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ ಮೈಸೂರಿನ ಯೋಗ ದಿನಕ್ಕಾಗಿ ಸಿದ್ಧತೆ ಕುರಿತು ಮಾತನಾಡುತ್ತಾರೆ ಶ್ರೀಹರಿ., 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ, ಪರಿಕಲ್ಪನೆ ಮತ್ತು ಪ್ರಸ್ತುತಿ ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ–ನೇರ ಫೋನ್ ಇನ್ ಕಾರ್ಯಕ್ರಮ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ. ಮಳಿಮಠ್ ಮತ್ತು ಕೆ.ಬಿ.ಮೀನಾ, 5.45 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.50 ಕೃಷಿರಂಗ– ಕಿಸಾನ್ ವಾಣಿ, 9.05 ಕ್ಷಿತಿಜ-Literacy ಗುರು–ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.30 ಹಳ್ಳಿ ಹಾಡು – ಮೈಸೂರು ಯರಗನಹಳ್ಳಿಯ ಸಣ್ಣಮ್ಮ ಮತ್ತು ಸಂಗಡಿಗರು, ಪ್ರಸ್ತುತಿ– ಅಬ್ದುಲ್ ರಶೀದ್

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರುಪೇರಿನಿಂದ ನಷ್ಟ

ಮೈಸೂರಲ್ಲಿ ಪೆಟ್ರೋಲ್ ಬಂಕ್ ಮಾಲೀಕರ ಪ್ರತಿಭಟನೆ

- ಕಂಪನಿಗಳಿಂದ ಪೆಟ್ರೋಲ್, ಡೀಸೆಲ್ ಖರೀದಿಸದೇ ಆಕ್ರೋಶ
- ಮೂರು ದಿನಗಳಿಗಾಗುವಷ್ಟು ದಾಸ್ತಾನಿದೆ ಎಂದ ಮಾಲೀಕರು



ಮೈಸೂರು, ಮೇ 31(ಆರ್‌ಕೆ)– ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರುಪೇರಾದಾಗ ಸಂಭವಿಸುವ ನಷ್ಟವನ್ನು ತಮಗೆ ವರ್ಗಾಯಿಸಲಾಗುತ್ತಿದೆ ಎಂದು ಆರೋಪಿಸಿ ತೈಲ ಕಂಪನಿಗಳ ವಿರುದ್ಧ ಪೆಟ್ರೋಲ್ ಬಂಕ್ ಮಾಲೀಕರು ಇಂದು ಪ್ರತಿಭಟನಾ ಧರಣಿ ನಡೆಸಿದರು.

ಫೆಡರೇಷನ್ ಆಫ್ ಮೈಸೂರು ಪೆಟ್ರೋಲಿಯಂ ಟ್ರೇಡರ್ಸ್(**FMPT**) ಹಾಗೂ ಅಖಿಲ ಕರ್ನಾಟಕ ಪೆಟ್ರೋಲಿಯಂ ಟ್ರೇಡರ್ಸ್ (**AKFPT**) ಆಶ್ರಯದಲ್ಲಿ ಮೈಸೂರಿನ ಬಿಎಂಶ್ರೀ ನಗರದಲ್ಲಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್ (**IOC**) ಎದುರು 150ಕ್ಕೂ ಹೆಚ್ಚು ಪೆಟ್ರೋಲ್ ಬಂಕ್ ಮಾಲೀಕರು ಧರಣಿ ನಡೆಸಿದರು.

ತೈಲ ಬೆಲೆ ಕಡಿಮೆಯಾದಾಗ ಬಲವಂತವಾಗಿ ಸಾಲ ಸೌಲಭ್ಯದೊಂದಿಗೆ ಪೆಟ್ರೋಲ್, ಡೀಸೆಲ್ ಸರಬರಾಜು ಮಾಡುವ ಇಂಡಿಯನ್ ಆಯಿಲ್ ಕಾರ್ಪೋರೇಷನ್, ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ ಹಾಗೂ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ ಕಂಪನಿಗಳು ಅದರಿಂದ ಉಂಟಾಗುವ ನಷ್ಟವನ್ನು ತಮಗೆ ವರ್ಗಾಯಿಸುತ್ತವೆ. ಆದರೆ ಬೆಲೆ ಏರಿಕೆ ಸಂದರ್ಭದಲ್ಲಿ ನಾವೇ ಒತ್ತಾಯಿಸಿದರೂ ಸ್ಟಾಕ್ ಕೊಡದೇ, ಅದರ ಲಾಭವನ್ನೂ ತಾವೇ ಪಡೆಯುತ್ತವೆ ಎಂದು ಪ್ರತಿಭಟನಾಕಾರರು ಆರೋಪಿಸುತ್ತಿದ್ದರು.

ಇದೀಗ ಲೀಟರ್‌ಗೆ 10 ರೂ. ಕಡಿಮೆಯಾಗಿರುವುದರಿಂದ ಬೇಡವೆಂದರೂ ಹೆಚ್ಚಿನ ಪ್ರಮಾಣದಲ್ಲಿ ತೈಲವನ್ನು ಕಳುಹಿಸಿದ್ದಾರೆ. ಕಂಪನಿಗಳ ಈ ವರ್ತನೆಯಿಂದ ಒಂದೊಂದು ಪೆಟ್ರೋಲ್ ಬಂಕ್ ಮಾಲೀಕರು 10ರಿಂದ 15 ಲಕ್ಷ ರೂ. ನಷ್ಟ ಅನುಭವಿಸುವಂತಾಗಿರುವುದರಿಂದ ತಾವು ಇಂದು ಪೆಟ್ರೋಲ್, ಡೀಸೆಲ್ ಖರೀದಿಸದೇ (**NO Purchase**) ಒಂದು ದಿನ ದೇಶಾದ್ಯಂತ ಪ್ರತಿಭಟನಾ ಧರಣಿ ನಡೆಸುತ್ತಿರುವುದಾಗಿ ತಿಳಿಸಿದರು.

ಆದರೆ ಎಲ್ಲಾ ಬಂಕ್‌ಗಳಲ್ಲೂ ಪೆಟ್ರೋಲ್, ಡೀಸೆಲ್ 3 ದಿನಕ್ಕಾಗುವಷ್ಟು ದಾಸ್ತಾನಿರುವುದರಿಂದ ಸಾರ್ವಜನಿಕರು ಆತಂಕ ಪಡಬೇಕಾಗಿಲ್ಲ ಎಂದು ಫೆಡರೇಷನ್ ಆಫ್ ಮೈಸೂರು ಪೆಟ್ರೋಲಿಯಂ ಟ್ರೇಡರ್ಸ್ ಅಸೋಸಿಯೇಷನ್ ಅಧ್ಯಕ್ಷೆ ಶಶಿಕಲಾ ತಿಳಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಫೆಡರೇಷನ್ ಆಫ್ ಪೆಟ್ರೋಲಿಯಂ ಟ್ರೇಡರ್ಸ್ ಪ್ರಧಾನ ಕಾರ್ಯದರ್ಶಿ ರಂಜಿತ್ ಹೆಗ್ಡೆ, ಇತ್ತೀಚೆಗೆ ಇಂಧನ ಬೆಲೆ ಇಳಿಕೆಯಾದಾಗ ಪೆಟ್ರೋಲ್ ಬಂಕ್ ಮಾಲೀಕರು ತೀವ್ರ ನಷ್ಟ ಅನುಭವಿಸಿದ್ದಾರೆ ಎಂದರು.

110 ರೂ.ಗೆ ಮಾರಾಟ ಮಾಡುತ್ತಿದ್ದ ಲೀಟರ್ ಪೆಟ್ರೋಲ್ ಬೆಲೆ ಇದ್ದಕ್ಕಿದ್ದಂತೆಯೇ 101 ರೂ.ಗಳಿಗಿಳಿದು 9 ರೂ. ನಷ್ಟವಾಯಿತು. 20,000 ಲೀಟರ್ ಖರೀದಿಸಿದ್ದ ಮಾಲೀಕರಿಗೆ 1,80,000 ರೂ. ನಷ್ಟವಾಯಿತು. ಅದೇ ರೀತಿ 94 ರೂ.ನಿಂದ ಡಿಸೆಲ್ ದರ 87 ರೂ.ಗೆ ಇಳಿದಾಗ 20,000 ಲೀಟರ್‌ಗೆ 1.40, 000 ರೂ. ನಷ್ಟ ಉಂಟಾಯಿತು ಎಂದು ನುಡಿದರು.

ಅಖಿಲ ಕರ್ನಾಟಕ ಫೆಡರೇಷನ್ ಆಫ್ ಪೆಟ್ರೋಲ್ ಡೀಲರ್ಸ್ ಅಧ್ಯಕ್ಷ ಬಸವೇಗೌಡ, ಎಸ್.ಆರ್.ಪಾಟೀಲ್, ಮಲ್ಲೇಶ, ಲೋಕೇಶ ಸೇರಿದಂತೆ ಹಲವರು ಪ್ರತಿಭಟನಾ ಧರಣಿಯಲ್ಲಿ ಪಾಲ್ಗೊಂಡಿದ್ದರು. ರಾಜ್ಯಾದ್ಯಂತ ಹಾಗೂ ದೇಶದ ವಿವಿಧ ರಾಜ್ಯಗಳಲ್ಲೂ ಆಯಿಲ್ ಕಾರ್ಪೋರೇಷನ್‌ಗಳೆದುರು ಇಂದು ಪೆಟ್ರೋಲ್ ಬಂಕ್ ಮಾಲೀಕರು ಇಂದು ತೈಲ ಖರೀದಿಸದೇ ಪ್ರತಿಭಟನಾ ಧರಣಿ ನಡೆಸಿದರು.

ಮೈಸೂರಲ್ಲಿ ಸರ ಅಪಹರಣ

ಮೈಸೂರು, ಮೇ 31(ಎಸ್‌ಬಿಡಿ)– ವಾಯುವಿಹಾರದಲ್ಲಿದ್ದ ವೃದ್ಧೆಯೊಬ್ಬರ ಚಿನ್ನದ ಸರ ಕಸಿಯಲು ದುಷ್ಕರ್ಮಿಗಳು ಯತ್ನಿಸಿ, ಸರದ ಒಂದು ತುಂಡಿನೊಂದಿಗೆ ಪರಾರಿಯಾಗಿರುವ ಘಟನೆ ಮೈಸೂರಿನ ವಿಜಯನಗರದಲ್ಲಿ ಮಂಗಳವಾರ ಸಂಜೆ ನಡೆದಿದೆ.



ಸಿಸಿಟಿವಿ ಕ್ಯಾಮರಾದಲ್ಲಿ ಖದೀಮರ ಚಲನವಲನ ಸೆರೆಯಾಗಿರುವುದು.

ವಿಜಯನಗರ 4ನೇ ಹಂತ, 2ನೇ ಫೇಸ್ ನಿವಾಸಿ ಶಶಿಕಲಾ(56) ಅವರು ಸಮಯ ಪ್ರಜ್ಞೆಯಿಂದ ಚಿನ್ನದ ಸರದ ಬಹುತೇಕ ಭಾಗವನ್ನು ಉಳಿಸಿಕೊಂಡಿದ್ದು, ಸುಮಾರು 10 ಗ್ರಾಂ. ತುಂಡು ಕಳ್ಳರ ಪಾಲಾಗಿದೆ.

ಶಶಿಕಲಾ ಅವರು ಇಂದು ಸಂಜೆ 5.15ರ ಸಮಯದಲ್ಲಿ ರಸ್ತೆ ಬದಿಯಲ್ಲಿ ವಾಯುವಿಹಾರದಲ್ಲಿದ್ದಾಗ ಹಿಂದಿನಿಂದ ಪಲ್ಸರ್ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು, ಏಕಾಏಕಿ ಸರ ಕಿತ್ತುಕೊಳ್ಳಲು ಯತ್ನಿಸಿದ್ದಾರೆ. ಆ ವೇಳೆ ಸಮಯಪ್ರಜ್ಞೆಯಿಂದ ಶಶಿಕಲಾ ಅವರು, ಸರವನ್ನು ಬಿಗಿಯಾಗಿ ಹಿಡಿದುಕೊಂಡು ಕೂಗಿಕೊಂಡಿದ್ದಾರೆ. ಇದರಿಂದ ಗಾಬರಿಯಾದ ಖದೀಮರು ಕೈಗೆ ಸಿಕ್ಕ ಸರದ ತುಂಡಿನೊಂದಿಗೆ ಅಲ್ಲಿಂದ ಪರಾರಿಯಾಗಿದ್ದಾರೆ.

ಮಾಸ್ಕ್ ಧರಿಸಿದ್ದರು: ದುಷ್ಕರ್ಮಿಗಳ ಚಲನವಲನದ ದೃಶ್ಯ ಆ ರಸ್ತೆಯ ಮನೆಯೊಂದರ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಬೈಕ್ ಓಡಿಸುತ್ತಿದ್ದವನು ಕಪ್ಪು ಬಣ್ಣದ ಶರ್ಟ್ ಹಾಗೂ ಹಿಂಭಾಗದಲ್ಲಿ ಕುಳಿತಿದ್ದ ಖದೀಮ ಕೆಂಪು ಬಣ್ಣದ ಟಿ–ಶರ್ಟ್ ಧರಿಸಿದ್ದಾರೆ. ಇಬ್ಬರೂ ಕಣ್ಣಿನವರೆಗೂ ಮುಚ್ಚುವಂತಹ ದೊಡ್ಡದಾದ ಮಾಸ್ಕ್ ಹಾಕಿದ್ದಾರೆ.

ತೀವ್ರ ಶೋಧ: ವಿಜಯನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ರವಿಶಂಕರ್, ಸಬ್‌ಇನ್‌ಸ್ಪೆಕ್ಟರ್‌ಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಖದೀಮರಿಗಾಗಿ ಹುಡುಕಾಟ ನಡೆಸಿದರೂ ಪತ್ತೆಯಾಗಲಿಲ್ಲ. ಸರ ಕಳ್ಳತನಕ್ಕೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರೂ ರೌಂಡ್ಸ್ ಮಾಡಿದರು. ಡಿಸಿಪಿ, ಎಸಿಪಿ ಸೇರಿದಂತೆ ಅನೇಕ ಅಧಿಕಾರಿಗಳು ಹಾಗೂ ಸಿಬ್ಬಂದಿ ಗಸ್ತು ನಡೆಸಿದರು. ಸಿಸಿಟಿವಿ ಕ್ಯಾಮರಾಗಳಲ್ಲಿ ಸೆರೆಯಾಗಿರುವ ದೃಶ್ಯ ಹಾಗೂ ಸ್ಥಳೀಯರ ಮಾಹಿತಿ ಆಧರಿಸಿ ಖದೀಮರ ಸೆರೆಗೆ ತೀವ್ರ ಶೋಧ ಮುಂದುವರೆಸಲಾಗಿದೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರಣ್ಯಪುರಂ ವ್ಯಾಪ್ತಿಯಲ್ಲಿ ಕರೆಂಟ್ ಸಮಸ್ಯೆ

ಕಾರ್ಪೋರೇಟರ್ ನೇತೃತ್ವದಲ್ಲಿ ಪ್ರತಿಭಟನೆ



ಮೈಸೂರು, ಮೇ 31(ಎಂಕೆ)– ಅಸಮರ್ಪಕ ವಿದ್ಯುತ್ ಸರಬರಾಜು ಖಂಡಿಸಿ ಮೈಸೂರು ನಗರಪಾಲಿಕೆ ಸದಸ್ಯೆ ಶೋಭಾ ಸುನೀಲ್ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಅಶೋಕಪುರಂನ ರೈಲ್ವೆ ನಿಲ್ದಾಣದ ಸಮೀಪದಲ್ಲಿರುವ ಚೆಸ್ಕಾಂ ಕಚೇರಿ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು ವಾರ್ಡ್ ನಂ.61ರ ವ್ಯಾಪ್ತಿಯ ವಿದ್ಯಾರಣ್ಯಪುಂನಲ್ಲಿ ವಿದ್ಯುತ್ ಸರಬರಾಜಿನಲ್ಲಿ ಭಾರೀ ವ್ಯತ್ಯಯ ಉಂಟಾಗುತ್ತಿದೆ. ವಿದ್ಯುತ್ ಪೂರೈಕೆಯಲ್ಲಿ ಸಾಕಷ್ಟು ಸಮಸ್ಯೆಗಳಿದ್ದು, ಕೂಡಲೇ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿದರು.

ಪಾಲಿಕೆ ಸದಸ್ಯೆ ಶೋಭಾ ಸುನೀಲ್ ಮಾತನಾಡಿ, ಚೆಸ್ಕಾಂ ಸಿಬ್ಬಂದಿ ಮನೆ ಮನೆಯಿಂದ ವಿದ್ಯುತ್ ಬಿಲ್ ಕಟ್ಟಿಸಿಕೊಳ್ಳಲು ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಲು ತೋರುವ ಆಸಕ್ತಿಯನ್ನು ವಿದ್ಯುತ್ ಸಮಸ್ಯೆಗಳನ್ನು ಬಗೆಹರಿಸಲು ತೋರುವುದಿಲ್ಲ. ವಿದ್ಯುತ್ ಕಾಮಗಾರಿ ನಡೆಯುವ ಮುನ್ನ ಸಾರ್ವಜನಿಕರಿಗೆ ಮಾಹಿತಿ ನೀಡುವುದಿಲ್ಲ. ಏಕಾಏಕಿ ವಿದ್ಯುತ್ ಕಡಿತಗೊಳಿಸಿ, ನಿವಾಸಿಗಳನ್ನು ಪರದಾಡುವಂತೆ ಮಾಡುತ್ತಿದ್ದಾರೆ ಎಂದು ದೂರಿದರು. ಪಾಲಿಕೆ ಮಾಜಿ ಸದಸ್ಯ ಸುನೀಲ್, ಅಜಯ್ ಶಾಸ್ತ್ರಿ, ಶಂಕರ್ ವಿದ್ಯಾರಣ್ಯಪುರಂ, ನವೀನ್, ನಾಗ, ಸಿದ್ದಪ್ಪ ಮತ್ತಿತರರಿದ್ದರು.

ರಾಕೇಶ್ ಟಿಕಾಯತ್‌ಗೆ ಮಸಿ: ಎಸ್‌ಡಿಪಿಐ ಪ್ರತಿಭಟನೆ



ಮೈಸೂರು, ಮೇ 31(ಎಂಕೆ)– ಭಾರತೀಯ ಕಿಸಾನ್ ಯೂನಿಯನ್ ಸಂಘಟನೆಯ ರಾಷ್ಟ್ರೀಯ ವಕ್ತಾರ ರಾಕೇಶ್ ಟಿಕಾಯತ್ ಮೇಲೆ ಹಲ್ಲೆ ನಡೆಸಿ, ಮಸಿ ಎರಚಿದ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಎಸ್‌ಡಿಪಿಐ(ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ) ಮೈಸೂರು ಘಟಕದ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು. ನಗರದ ಎಫ್‌ಟಿಎಸ್ ವೃತ್ತದಲ್ಲಿ ಜಮಾಯಿಸಿದ ಎಸ್‌ಡಿಪಿಐ ಕಾರ್ಯಕರ್ತರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ ರೈತ ನಾಯಕರ ಮೇಲೆ ಹಲ್ಲೆ ನಡೆಸಿದವರನ್ನು ಕೂಡಲೇ ಬಂಧಿಸಿ, ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಎಸ್‌ಡಿಪಿಐ ಸ್ಟೇಟ್ ಕೌನ್ಸಿಲ್ ಸದಸ್ಯ ನೂರ್ದೀನ್ ಮೌಲಾನಾ, ಜಿಲ್ಲಾಧ್ಯಕ್ಷ ರಫಾತುಲ್ಲಾ ಖಾನ್ ಮತ್ತಿತರರಿದ್ದರು.

ದೆಹಲಿ ಇಂಡಿಯಾ ಗೇಟ್ ಮುಂಭಾಗ ಸುಭಾಷ್ ಚಂದ್ರ ಬೋಸ್ ಪ್ರತಿಮೆ ನಿರ್ಮಾಣಕ್ಕೆ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಕಾರ್ಯಾದೇಶ

ಮೈಸೂರು,ಮೇ 31(ಜಿಎ)– ದೆಹಲಿಯ ಇಂಡಿಯಾ ಗೇಟ್ ಮುಂಭಾಗ ಸುಭಾಷ್ ಚಂದ್ರ ಬೋಸ್ ಅವರ 30 ಅಡಿ ಎತ್ತರದ ಮೂರ್ತಿ ನಿರ್ಮಾಣ ಮಾಡಲು ಮೈಸೂರಿನ ಶಿಲ್ಪಿ ಅರುಣ್ ಯೋಗಿ ರಾಜ್ ಹಾಗೂ ಅವರ ತಂಡಕ್ಕೆ ಕಾರ್ಯಾದೇಶ ದೊರೆತಿದೆ.



ಕೇದಾರನಾಥ್‌ನಲ್ಲಿ ಶಂಕರಾಚಾರ್ಯರ ಮೂರ್ತಿ ಕೆತ್ತಿ ಖ್ಯಾತಿ ಪಡೆದ ಯೋಗಿರಾಜ್‌ಗೆ ಈಗ ಮತ್ತೊಂದು ಬಹುದೊಡ್ಡ ಅವಕಾಶ ಸಿಕ್ಕಿದೆ. ದೆಹಲಿಯಲ್ಲೇ ಉಳಿದು ಈ ಮೂರ್ತಿ ಕೆತ್ತನೆಯನ್ನು ಇವರು ಮತ್ತು ತಂಡ ಮಾಡಲಿದೆ. ಈ ಹಿಂದೆ ಪ್ರಧಾನಿ ಮೋದಿ ಅವರನ್ನು ಮೈಸೂರಿನ ಶಿಲ್ಪಿ ಯೋಗಿರಾಜ್ ಅರುಣ್ ಭೇಟಿಯಾಗಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ನೀಡಿದ್ದರು.

ಇಂಡಿಯಾ ಗೇಟ್‌ಗೆ ಕಲಾಕೃತಿ ಸೇರ್ಪಡೆ ಆಗುತ್ತಿರುವುದು ಹೆಮ್ಮೆಯ ವಿಷಯ. ಗ್ರಾನೇಟ್ ಕಲ್ಲಿನಲ್ಲಿ ಸುಭಾಷ್ ಚಂದ್ರ ಬೋಸ್ ಅವರ ಮೂರ್ತಿ ಕೆತ್ತನೆ ಆಗುತ್ತದೆ. 30 ಅಡಿ ಕಲ್ಲಿನಲ್ಲಿ ಈ ಕೆತ್ತನೆ ಮಾಡಬೇಕು. ಈ ಸಂಬಂಧ ಒಂದು ವಾರದ ಹಿಂದೆ ನಮ್ಮ ತಂಡಕ್ಕೆ ಕೆತ್ತನೆ ಕಾರ್ಯ ಮಾಡಲು ಕಾರ್ಯಾದೇಶ ದೊರೆತಿದ್ದು, ತಂಡದ ಕೆಲವರು ಈಗಾಗಲೇ ದೆಹಲಿ ತಲುಪಿದ್ದಾರೆ. ನಾನು ಸಹ ಸದ್ಯದಲ್ಲೇ ತೆರಳುತ್ತಿದ್ದೇನೆ. ಶುಕ್ರವಾರದಿಂದ ಕೆಲಸ ಆರಂಭವಾಗುವ ಸಾಧ್ಯತೆ ಇದೆ ಎಂದು ಶಿಲ್ಪಿ ಅರುಣ್ ಯೋಗಿರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೇಂದ್ರ ಸಂಸ್ಕೃತಿ ಸಚಿವಾಲಯದ ವತಿಯಿಂದ ನಮ್ಮ ತಂಡಕ್ಕೆ ಸಂಪೂರ್ಣ ಸಹಕಾರ ದೊರೆತ್ತಿದ್ದು, ಈ ದೆಹಲಿಯಲ್ಲಿಯೇ ಇದ್ದುಕೊಂಡು ಈ ಕೆತ್ತನೆ ಕಾರ್ಯ ಮಾಡಬೇಕಿರುವುದರಿಂದ ಸುಭಾಷ್ ಚಂದ್ರ ಬೋಸ್ ಮೂರ್ತಿ ಕೆತ್ತನೆ ಮಾಡುವ ಸ್ಥಳದಲ್ಲಿ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಿಕೊಟ್ಟಿದ್ದಾರೆ. ಅದರಂತೆ ಮೂರ್ತಿ ಯಾವ ರೂಪದಲ್ಲಿ ಮೂಡಿ ಬರಬೇಕು ಹಾಗೂ ಅದಕ್ಕೆ ಬೇಕಿರುವ ಗ್ರಾನೈಟ್ ಎಲ್ಲವನ್ನು ಅವರೇ ಆಯ್ಕೆ ಮಾಡಿದ್ದಾರೆ ಎಂದು ಅವರು ತಿಳಿಸಿದರು.

ರೈತ ಸಂಘದ ಅಧ್ಯಕ್ಷ ಸ್ಥಾನದಿಂದ ಕೋಡಿಹಳ್ಳಿ ಉಚ್ಚಾಟನೆ

ಶಿವಮೊಗ್ಗ, ಮೇ 31– ರೈತ ಸಂಘ ಮತ್ತು ಹಸಿರು ಸೇನೆಯಿಂದ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಉಚ್ಚಾಟನೆ ಮಾಡಲಾಗಿದೆ. ಇದೇ ವೇಳೆ ರೈತ ಸಂಘದ ರಾಜ್ಯಾಧ್ಯಕ್ಷರಾಗಿ ನೂತನವಾಗಿ ಹೆಚ್.ಆರ್.ಬಸವರಾಜಪ್ಪನನ್ನು ಆಯ್ಕೆ ಮಾಡಲಾಗಿದೆ.



ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಲಂಚಕ್ಕೆ ಬೇಡಿಕೆಯಿಟ್ಟ ಗಂಭೀರ ಆರೋಪ ಕೇಳಿಬಂದಿದ್ದರಿಂದ ಶಿವಮೊಗ್ಗದಲ್ಲಿ ನಡೆದ ರೈತ ಸಂಘ, ಹಸಿರು ಸೇನೆ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ತಮ್ಮ ವಿರುದ್ಧ ಕೇಳಿಬಂದಿರುವ ಆರೋಪಗಳನ್ನು ಕೋಡಿಹಳ್ಳಿ ಚಂದ್ರಶೇಖರ್ ಅಲ್ಲಗಳೆದಿಲ್ಲ. ಅವರ ವಿರುದ್ಧ ಅದಾಗಲೇ ಸಣ್ಣ ಪುಟ್ಟ ಆರೋಪಗಳು ಕೇಳಿಬಂದಿದ್ದವು. ಆದರೆ ಇದೀಗ ಅವರ ವಿರುದ್ಧ ಗಂಭೀರ ಆರೋಪ ಕೇಳಿಬಂದಿದ್ದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ನೂತನ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಹೇಳಿದ್ದಾರೆ.

ತಮ್ಮ ವಿರುದ್ಧ ಗಂಭೀರ ಆರೋಪ ಕೇಳಿಬಂದಿದ್ದರಿಂದ ಅವರು ನೈತಿಕ ಹೊಣೆ ಹೊತ್ತು ಅಧ್ಯಕ್ಷ ಸ್ಥಾನಕ್ಕೆ ಅವರೇ ರಾಜಿನಾಮೆ ನೀಡಬೇಕಿತ್ತು. ಆದರೆ ತಾವು ರಾಜಿನಾಮೆ ನೀಡುವುದಿಲ್ಲ ಎಂದು ಹೇಳಿದ್ದರು. ಹೀಗಾಗಿ ತುರ್ತು ಸಭೆ ಸೇರಿ ಅವರನ್ನು ಅಧ್ಯಕ್ಷ ಸ್ಥಾನದಿಂದ ಉಚ್ಚಾಟನೆ ಮಾಡಲಾಗಿದೆ ಎಂದರು.

ವಿಶ್ವ ಸ್ಕಿಜೋಫ್ರೀನಿಯಾ ದಿನ ನಾಳೆ ಜಾಗೃತಿ ಜಾಥಾ

ಮೈಸೂರು, ಮೇ 31– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳ ಕಚೇರಿಯ ವತಿಯಿಂದ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ವಿಶ್ವ ಸ್ಕಿಜೋಫ್ರೀನಿಯಾ ದಿನಾಚರಣೆ–2022 ಜಾಗೃತಿ ಜಾಥಾ ಕಾರ್ಯಕ್ರಮವನ್ನು ಜೂ.2ರಂದು ಬೆಳಿಗ್ಗೆ 9.30 ಗಂಟೆಗೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಲಾಗಿದೆ. ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಪಂ ಸಿಇಓ ಪೂರ್ಣಿಮಾ, ವಿಭಾಗೀಯ ಜಂಟಿ ನಿರ್ದೇಶಕ ಉದಯಕುಮಾರ್, ಜಿಲ್ಲಾ ಶಸ್ತ್ರಚಿಕಿತ್ಸಕಿ ಡಾ.ರಾಜೇಶ್ವರಿ ಅವರ ಉಪಸ್ಥಿತರಿರುವರು ಎಂದು ಜಿಲ್ಲಾ ಮಾನಸಿಕ ಕಾರ್ಯಕ್ರಮಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಲಕ್ಷ್ಮೀ ನಾರಾಯಣ ಹೃದಯ ಹವನ ಹೋಮ

ಮೈಸೂರು, ಮೇ 31– ಮೈಸೂರಿನ ರಾಮಕೃಷ್ಣನಗರದ ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಮಂದಿರದ ಆವರಣದಲ್ಲಿರುವ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ವಾರ್ಷಿಕೋತ್ಸವವನ್ನು ಜೂ. 7ರಂದು ಆಚರಿಸಲಾಗುವುದು. ಅಂದು ಬೆಳಗ್ಗೆ 9.30ಕ್ಕೆ ಶ್ರೀ ಲಕ್ಷ್ಮೀನಾರಾಯಣ ಹೃದಯ ಹವನ ಹೋಮ ಮತ್ತು ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಗುವುದು ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ರಾಜ್ಯದ ವಿವಿಗಳಲ್ಲಿ ಅಧ್ಯಾಪಕರ ಕೊರತೆಯದ್ದೇ ಸಮಸ್ಯೆ

ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತ್‌ಕುಮಾರ್ ವಿಷಾದ

ಮೈಸೂರು, ಮೇ 31(ಎಂಟಿವೈ)– ರಾಜ್ಯದ ಹಲವು ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಾಪಕರ ಕೊರತೆಯ ಸಮಸ್ಯೆ ಕಾಡುತ್ತಿದ್ದು, ಎಷ್ಟೋ ವಿಭಾಗಗಳಲ್ಲಿ ಒಬ್ಬರೇ ಅಧ್ಯಾಪಕರಿದ್ದಾರೆ. ಮತ್ತೆ ಕೆಲವು ವಿಭಾಗಗಳಲ್ಲಿ ಕಾಯಂ ಬೋಧಕರೇ ಇಲ್ಲದಂತಾಗಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ವಿಷಾದಿಸಿದ್ದಾರೆ.



ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಅರ್ಥಶಾಸ್ತ್ರ ಹಾಗೂ ಸಹಕಾರ ವಿಭಾಗದಿಂದ ನಡೆದ ಕಾರ್ಯಕ್ರಮದಲ್ಲಿ ಅಕ್ಕ ಮಹಾದೇವಿ ವಿವಿ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲಾ ಹಾಗೂ ರಮೇಶ್ ತಿಕೋಟಿ ದಂಪತಿಗೆ ಸನ್ಮಾನಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಅರ್ಥಶಾಸ್ತ್ರ ಹಾಗೂ ಸಹಕಾರ ವಿಭಾಗದ ವತಿಯಿಂದ ನಡೆದ ಅಕ್ಕಮಹಾದೇವಿ ವಿವಿಯ ಕುಲಪತಿ ಪ್ರೊ.ಬಿ.ಕೆ.ತುಳಸಿಮಾಲಾ ಅವರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಬಹುತೇಕ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ಅಧ್ಯಾಪಕರ ಸಂಖ್ಯೆ ಕುಂಠಿತಗೊಂಡಿದೆ. ಎಷ್ಟೊ ವಿಭಾಗದಲ್ಲಿ ಒಬ್ಬ ಅಧ್ಯಾಪಕರು ಇದ್ದಾರೆ. ಮತ್ತೆ ಕೆಲವು ವಿಭಾಗದಲ್ಲಿ ಕಾಯಂ ಅಧ್ಯಾಪಕರೆ ಇಲ್ಲ. ಅಲ್ಲದೆ, ಅಗತ್ಯಕ್ಕೆ ಅನುಗುಣವಾಗಿ ವಿವಿಗಳಿಗೆ ಸರ್ಕಾರದಿಂದ ಆರ್ಥಿಕ ನೆರವು ದೊರೆಯುತ್ತಿಲ್ಲ. ಇದರಿಂದ ಕೆಲವು ಜಲ್ವಂತ ಸಮಸ್ಯೆಗಳು ಇಂದಿಗೂ ಬೇರೂರಲು ಕಾರಣ ಎಂದರು.

ಪ್ರತಿಯೊಬ್ಬರೂ ಯಾವುದಾದರೂ ಕ್ಷೇತ್ರದಲ್ಲಿ ಸಾಧನೆ ಮಾಡಬೇಕೆಂದರೆ ಸತತ ಪರಿಶ್ರಮದ ಅಗತ್ಯವಿದೆ. ಪ್ರಯತ್ನದಿಂದ ಮಾತ್ರ ಸಾಧನೆ ಸಾಧ್ಯ. ಜೀವನದಲ್ಲಿ ಶಿಸ್ತು ಬೆಳೆಸಿಕೊಳ್ಳಬೇಕು. ಯಾರಲ್ಲಿ ಶಿಸ್ತು ಇರುತ್ತದೋ ಅವರು, ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡಬಲ್ಲರು. ಜೀವನುದ್ದಕ್ಕೂ ಒಂದೊಂದು ಹಂತದಲ್ಲೂ ಒಂದೊಂದು ಬಗೆಯ ಸವಾಲು ಎದುರಾಗುತ್ತವೆ. ಅಕ್ಕಮಹಾದೇವಿ ವಿವಿಗೆ ಕುಲಪತಿಯಾಗಿರುವ ಪ್ರೊ.ಬಿ.ಕೆ.ತುಳಸಿಮಾಲಾ ಅವರು ಶೈಕ್ಷಣಿಕವಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಶೈಕ್ಷಣಿಕ ಕ್ಷೇತ್ರದಲ್ಲಿ 30 ವರ್ಷ ಸೇವೆ ಸಲ್ಲಿಸಿದ್ದಾರೆ. ಅಕ್ಕಮಹಾದೇವಿ ವಿವಿ ಚಿಕ್ಕದಾದರೂ ಅದರ ಆಡಳಿತ ವ್ಯಾಪ್ತಿ ದೊಡ್ಡದು. ಪ್ರೊ.ಬಿ.ಕೆ.ತುಳಸಿಮಾಲಾ ಅವರು ಎರಡು ವರ್ಷ ಕುಲಪತಿಗಳಾಗಿ, ಕುಲಸಚಿವರಾಗಿ ಎರಡು ವರ್ಷ ಸೇವೆ ಸಲ್ಲಿಸಿದ್ದಾರೆ. ಅವರಿಗೆ ಓದುವ ಅಭ್ಯಾಸ ಇತ್ತು. ಯಾವುದೇ ಒಬ್ಬ ಶಿಕ್ಷಕ ಸಾಧಕನಾಗಿದ್ದಾಗ ಮಾತ್ರ ಉನ್ನತ ಹುದ್ದೆ ಗಳಿಸಿಕೊಳ್ಳ ಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪ್ರೊ.ಬಿ.ಕೆ.ತುಳಸಿಮಾಲಾ ಅವರ ಬದುಕು–ಸಾಧನೆ ಬಗ್ಗೆ 17 ನಿಮಿಷಗಳ ವಿಡಿಯೋವನ್ನು ಪರದೆ ಮೇಲೆ ಬಿತ್ತರಿಸಲಾಯಿತು. ಇದೇ ವೇಳೆ ಅಕ್ಕಮಹಾದೇವಿ ವಿವಿಯ ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲಾ ಹಾಗೂ ರಮೇಶ್ ತಿಕೋಟಿ ದಂಪತಿಗೆ ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಪೂಜಾ ಭಾಗವತ್ ಮೆಮೋರಿಯಲ್ ಮಹಾಜನ ಪೋಸ್ಟ್ ಗ್ರಾಜುಯೇಟ್ ಸೆಂಟರ್‌ನ ನಿರ್ದೇಶಕ ಪ್ರೊ.ಸಿ.ಕೆ.ರೇಣುಕಾಚಾರ್ಯ, ಅರ್ಥಶಾಸ್ತ್ರ ಹಾಗೂ ಸಹಕಾರ ವಿಭಾಗದ ಮುಖ್ಯಸ್ಥ ಪ್ರೊ. ಮಹೇಶ್ ಸೇರಿದಂತೆ ಇತರರು ಇದ್ದರು.



















ಮೈಸೂರು ಮಿತ್ರ ಬುಧವಾರ 1 ಜೂನ್ 2022

ಅಡ್ಡ ಬಂದ ಜಿಂಕೆ: ಬೈಕಿನಿಂದ ಬಿದ್ದು ಪತಿ ಸಾವು, ಪತ್ನಿಗೆ ಗಾಯ



ಚಾಮರಾಜನಗರ, ಮೇ 31(ಎಸ್‌ಎಸ್)–ಚಲಿಸುತ್ತಿದ್ದ ಬೈಕ್‌ಗೆ ಅಡ್ಡಲಾಗಿ ಜಿಂಕೆಯೊಂದು ನುಗ್ಗಿದ ಪರಿಣಾಮ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಸಾವನ್ನಪ್ಪಿದ್ದು, ಹಿಂಬದಿ ಕುಳಿತಿದ್ದ ಪತ್ನಿ ತೀವ್ರ ಗಾಯಗೊಂಡಿರುವ ಘಟನೆ ಸೋಮವಾರ ಸಂಜೆ ನಡೆದಿದೆ.

ತಾಲೂಕಿನ ಬದನಗುಪ್ಪೆ ಗ್ರಾಮದ ಸ್ವಾಮಿ(52) ಮೃತಪಟ್ಟವರು. ಇವರ ಪತ್ನಿ ಪುಷ್ಪಾಗೆ ತೀವ್ರ ಪೆಟ್ಟಾಗಿದೆ. ನಂಜನಗೂಡಿನ ಸೌತ್ ಇಂಡಿಯಾ ಪೇಪರ್ ಮಿಲ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದ ಸ್ವಾಮಿ ಸ್ವಗ್ರಾಮ ಬದನಗುಪ್ಪೆಗೆ ಪತ್ನಿಯೊಂದಿಗೆ ಬೈಕ್‌ನಲ್ಲಿ ಬಂದು, ವಾಪಸ್ಸಾಗುತ್ತಿದ್ದರು. ಈ ವೇಳೆ ಬದನವಾಳು ಸಮೀಪ ಬೈಕಿಗೆ ಆಕಸ್ಮಿಕವಾಗಿ ಜಿಂಕೆಯೊಂದು ಅಡ್ಡವಾಗಿ ನುಗ್ಗಿದೆ. ಇದರಿಂದ ನಿಯಂತ್ರಣ ತಪ್ಪಿದ ಬೈಕ್ ಸಮೇತ ದಂಪತಿ ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡರು. ತಕ್ಷಣ ಗಾಯಾಳುಗಳನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತು. ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಬೆಳಗಿನಜಾವ ಸ್ವಾಮಿ ಅಸುನೀಗಿದ್ದಾರೆ. ಪತ್ನಿ ಪುಷ್ಪಾ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದು, ಕೌಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಮೃತರಿಗೆ ಇಬ್ಬರು ಪುತ್ರಿಯರು ಇದ್ದಾರೆ.

ಗೋದಾಮಿಗೆ ಬೆಂಕಿ; ಲಕ್ಷಾಂತರ ರೂ. ನಷ್ಟ

ಯಳಂದೂರು, ಮೇ 31(ವಿ.ನಾಗರಾಜು)–ಪಟ್ಟಣದ ಜನಪ್ರಿಯ ಫರ್ನಿಚರ್ಸ್‌ನ ಗೋದಾಮಿಗೆ ಮಂಗಳವಾರ ಆಕಸ್ಮಿಕವಾಗಿ ಬೆಂಕಿ ಬಿದ್ದು, ಹತ್ತಿ ಸೇರಿದಂತೆ ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಸುಟ್ಟು ಕರಕಲಾಗಿರುವ ಘಟನೆ ನಡೆದಿದೆ.



ಪಟ್ಟಣದ ರಾಷ್ಟ್ರೀಯ ಹೆದ್ದಾರಿ–209ರ ಬಳಿಯಲ್ಲಿ ಇರುವ ಗೋದಾಮಿನಲ್ಲಿ ಸುಮಾರು 9 ಟನ್‌ನಷ್ಟು ಹತ್ತಿ ಸಂಗ್ರಹಿಸಲಾಗಿತ್ತು. ಅಲ್ಲದೆ ಅಲ್ಮೆರಾ, ಡ್ರೆಸ್ಸಿಂಗ್ ಟೇಬಲ್, ಮಂಚ ಸೇರಿದಂತೆ ಅನೇಕ ವಸ್ತುಗಳ ದಾಸ್ತಾನು ಮಾಡಲಾಗಿತ್ತು. ಮಂಗಳವಾರ ಬೆಳಗ್ಗೆ ಇದ್ದಕ್ಕಿದ್ದಂತೆ ಇಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಗೋದಾಮಿನಲ್ಲಿ ಹೊಗೆ ಬರುತ್ತಿರುವುದನ್ನು ಕಂಡ ಅಕ್ಕಪಕ್ಕದವರು ಮಾಹಿತಿ ನೀಡಲಾಗಿ ಮಾಲೀಕರು ಇಲ್ಲಿದ್ದ ಅನೇಕ ವಸ್ತುಗಳನ್ನು ಹೊರಗೆ ತಂದು ಹಾಕಿದರು. ಆದರೆ ಬೆಂಕಿಯ ಕೆನ್ನಾಲಿಗೆ ಪಕ್ಕದಲ್ಲಿದ್ದ ಹತ್ತಿಯ ಬೇಲ್‌ಗಳು ಸುಟ್ಟು ಕರಕಲಾಗಿದೆ.

ಕೊಳ್ಳೇಗಾಲದಿಂದ ಅಗ್ನಿ ಶಾಮಕ ಸಿಬ್ಬಂದಿ ಧಾವಿಸಿ ಬೆಂಕಿ ನಂದಿಸಲು ಯತ್ನಿಸಿದರೂ ಬೆಂಕಿ ಹೆಚ್ಚಾಗಿದ್ದರಿಂದ ಮತ್ತೊಂದು ಅಗ್ನಿಶಾಮಕ ವಾಹನ ಬಂದ ಬಳಿಕ ಜೆಸಿಬಿ ಯಂತ್ರದಲ್ಲಿ ಗೋದಾಮಿನ ಗೋಡೆ ಹಾಗೂ ಶೀಟ್‌ಗಳನ್ನು ತೆರವುಗೊಳಿಸಿ ಬೆಂಕಿ ನಂದಿಸಲಾಯಿತು. ಈ ಸಂಬಂಧ ಯಾವುದೇ ಪ್ರಕರಣ ದಾಖಲಾಗಿಲ್ಲ.

ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು

ಯಳಂದೂರು, ಮೇ 31–ಮನೆಯ ಹಿಂಭಾಗದ ಶೀಟಿನ ಬಾಗಿಲು ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲೂಕಿನ ಕೆಸ್ತೂರು ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಶಾಂತಮ್ಮ ಎಂಬುವರು ಮೇ 25ರಂದು ರಾತ್ರಿ ಸಿದ್ದಾಪ್ಪಾಜಿ ಕಂಡಾಯ ಹಬ್ಬಕ್ಕಾಗಿ ತಮ್ಮ ಮಗಳ ಜೊತೆ ಮೆಲ್ಲಹಳ್ಳಿ ಗ್ರಾಮಕ್ಕೆ ತೆರಳಿ ಮೇ 28ರಂದು ಸಂಜೆ ಹಿಂತಿರುಗಿದಾಗ ಕಳುವು ನಡೆದಿರುವುದು ಗೊತ್ತಾಗಿದೆ. ಖದೀಮರು 15 ಗ್ರಾಂ ತೂಕದ ಚಿನ್ನದ ನೆಕ್ಲೇಸ್, 5 ಗ್ರಾಂನ ಒಂದು ಜೊತೆ ಹ್ಯಾಂಗಿಂಗ್ಸ್ ಮತ್ತು 10 ಗ್ರಾಂನ ಜುಮುಕಿ ಕಳವು ಮಾಡಿದ್ದಾರೆ. ಈ ಸಂಬಂಧ ಯಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತ ನಾಯಕ ರಾಕೇಶ್ ಟಿಕಾಯತ್ ಮೇಲಿನ ಹಲ್ಲೆ ಖಂಡಿಸಿ

ಚಾ.ನಗರದಲ್ಲಿ ರೈತಸಂಘ, ಹಸಿರುಸೇನೆ, ಎಸ್‌ಡಿಪಿಐ ಪ್ರತಿಭಟನೆ



ಚಾಮರಾಜನಗರ, ಮೇ 31(ಎಸ್‌ಎಸ್)–ರೈತ ನಾಯಕ, ಹೋರಾಟಗಾರ ರಾಕೇಶ್ ಟಿಕಾಯತ್ ಅವರ ಮೇಲೆ ಮಸಿ ಎರಚಿ, ಹಲ್ಲೆ ನಡೆಸಿರುವುದನ್ನು ಖಂಡಿಸಿ ರೈತ ಸಂಘ, ಹಸಿರುಸೇನೆ ಹಾಗೂ ಎಸ್‌ಡಿಪಿಐ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟಿಸಿದರು.

ಇಲ್ಲಿನ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಸಂಘಟನೆಗಳ ಕಾರ್ಯಕರ್ತರು, ರಾಕೇಶ್ ಟಿಕಾಯತ್ ಅವರ ಮೇಲೆ ಹಲ್ಲೆ ನಡೆಸಿರುವವರ ವಿರುದ್ಧ ಘೋಷಣೆಗಳನ್ನು ಕೂಗಿದರು. ಮಾನವ ಸರಪಳಿ ನಿರ್ಮಿಸುವ ಮೂಲಕ ರಸ್ತೆ ತಡೆ ನಡೆಸಿ ಘಟನೆಗೆ ಆಕ್ರೋಶ ವ್ಯಕ್ತಪಡಿಸಿದರು. ನಂತರ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿ ದೇವಿ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಬೆಂಗಳೂರಿಗೆ ಆಗಮಿಸಿದ್ದ ರಾಕೇಶ್ ಟಿಕಾಯತ್ ಅವರಿಗೆ ಭದ್ರತೆ ಒದಗಿಸಬೇಕಿರುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿತ್ತು. ಆದರೆ ಸರ್ಕಾರ ತನ್ನ ಕರ್ತವ್ಯ ಮರೆತ ಪರಿಣಾಮ ಟಿಕಾಯತ್ ಅವರ ಮೇಲೆ ಹಲ್ಲೆ ನಡೆದಿದೆ. ಇದು ಖಂಡನೀಯ. ಈ ಕೃತ್ಯ ಎಸಗಿರುವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಘಟನೆ ಬಗ್ಗೆ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಹಲ್ಲೆ ನಡೆಸಿದವರು ಜೈ ಮೋದಿ, ಜೈ ಮೋದಿ ಎಂದು ಕೂಗುತ್ತಿದ್ದರು. ಹೀಗಾಗಿ ಯಾರು, ಯಾವ ಸಂಘಟನೆ ಕೃತ್ಯ ಎಸಗಿದೆ ಎಂಬುದು ಗೊತ್ತಾಗುತ್ತದೆ. ಹೀಗಾಗಿ ಘಟನೆ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಬೇಕು. ಇಲ್ಲದಿದ್ದಲ್ಲಿ ಮೈಸೂರಿಗೆ ಆಗಮಿಸಲಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ವಿರುದ್ಧ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ರೈತ ಸಂಘದ ವಿಭಾಗೀಯ ಕಾರ್ಯದರ್ಶಿ ಎ.ಎಂ.ಮಹೇಶ್‌ಪ್ರಭು, ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್, ರೈತ ಸಂಘದ ಜಿಲ್ಲಾಧ್ಯಕ್ಷ ಹೆಬ್ಬಸೂರು ಬಸವಣ್ಣ, ಕಾರ್ಯದರ್ಶಿ ಗುರುಪ್ರಸಾದ್, ಮುಖಂಡರಾದ ಹೊನ್ನೂರು ಬಸವಣ್ಣ, ಮಹದೇವಸ್ವಾಮಿ, ಅಂಬಳೆ ಶಿವಕುಮಾರ್, ಮಂಜುನಾಥ್, ಮಾಡ್ರಹಳ್ಳಿ ಮಹದೇವಪ್ಪ, ಆಲೂರು ಚನ್ನಬಸಪ್ಪ, ಸಿದ್ದರಾಜು, ಬಸವಣ್ಣ, ಮಹೇಶ್, ಸಂಪತ್ತು, ಕಡಬೂರು ಮಂಜುನಾಥ್, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮದ್, ಉಪಾಧ್ಯಕ್ಷ ಸೈಯದ್ ಆರೀಫ್, ಕಾರ್ಯದರ್ಶಿ ಜಬೀನೂರ್, ನಗರಸಭಾ ಸದಸ್ಯರಾದ ಮಹಮ್ಮದ್ ಅಮೀರ್, ಅಫ್ಸರ್‌ಪಾಷ, ಖಜಾಂಚಿ ನಯಾಜ್‌ವುಲ್ಲಾ, ಸಮಾಜವಾದ ಜನತಾ ಪಕ್ಷದ ರಾಜ್ಯಾಧ್ಯಕ್ಷ ಜಿ.ಎಂ.ಗಾಡ್ಕರ್ ಇತರರು ಪ್ರತಿಭಟನೆಯಲ್ಲಿದ್ದರು.

ಹನೂರಲ್ಲೂ ರೈತರ ಆಕ್ರೋಶ



ಹನೂರು, ಮೇ 31(ಸೋಮು)–ಭಾರತೀಯ ಕಿಸಾನ್ ಯೂನಿಯನ್ ಸಂಘಟನೆಯ ರಾಷ್ಟ್ರೀಯ ವಕ್ತಾರ ರಾಕೇಶ್ ಟಿಕಾಯತ್ ಮೇಲೆ ಮಸಿ ಎರಚಿ, ಹಲ್ಲೆ ನಡೆಸಿರುವುದು ಹಾಗೂ ಈ ಘಟನೆ ಬಗ್ಗೆ ರಾಜ್ಯ ಗೃಹ ಮಂತ್ರಿಗಳ ನೀಡಿರುವ ಹೇಳಿಕೆ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ ಹನೂರು ತಾಲೂಕು ಸಮಿತಿ ಅಮಜಾತ್ ಖಾನ್ ನೇತೃತ್ವದಲ್ಲಿ ಕಣ್ಣಿಗೆ ಕಪ್ಪು ಪಟ್ಟಿ ಧರಿಸಿ ರಸ್ತೆ ತಡೆದು, ಪ್ರತಿಭಟಿಸಲಾಯಿತು.

ಪಟ್ಟಣದ ಆರ್‌ಎಂಸಿ ಆವರಣದಿಂದ ಹೊರಟ ಪ್ರತಿಭಟನಾನಿರತರು ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ಖಾಸಗಿ ಬಸ್ ನಿಲ್ದಾಣದಲ್ಲಿ ರಸ್ತೆತಡೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಈ ವೇಳೆ ಮಾತನಾಡಿದ ಅಮಜತ್ ಖಾನ್, ರೈತ ಸಂಘಟನೆ ಪ್ರತಿಭಟನೆ ಹಿಂಪಡೆಯಲು ಲಂಚ ಬೇಡಿಕೆ ಇಟ್ಟಿದ್ದಾರೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಕೊಡಲು ಮುಂದಾದ ವೇಳೆ ಕಿಡಿಗೇಡಿಗಳು ಇಂತಹ ದುಷ್ಕೃತ್ಯ ನಡೆಸಿದ್ದಾರೆ. ಇದೊಂದು ಖಂಡನೀಯ ವಿಚಾರ. ಈ ಬಗ್ಗೆ ಆರೋಪಿಗಳ ವಿರುದ್ಧ ಸರ್ಕಾರ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು. ಈ ಕೃತ್ಯದ ಹಿಂದಿನ ರಹಸ್ಯ ಹೊರಹಾಕಬೇಕು ಎಂದು ಒತ್ತಾಯಿಸಿದರಲ್ಲದೆ, ಗೃಹ ಮಂತ್ರಿ ಅವರು ಈ ಬಗ್ಗೆ ಹಗುರವಾಗಿ ಪ್ರತಿಕ್ರಿಯಿದ್ದಾರೆ. ಸರ್ಕಾರ ಮತ್ತು ಗೃಹ ಸಚಿವರ ನಡೆಗೆ ರೈತ ಸಂಘಟನೆ ತೀವ್ರವಾಗಿ ಖಂಡಿಸುತ್ತದೆ ಎಂದು ಕಿಡಿಕಾರಿದರು. ಈ ಸಂದರ್ಭದಲ್ಲಿ ವಿವಿಧ ಗ್ರಾಮಗಳ ರೈತ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜೆಡಿಎಸ್‌ನಿಂದ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು



ಚಾಮರಾಜನಗರ, ಮೇ 31–ಜೆಡಿಎಸ್ ಅಧಿಕಾರಾವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಅವರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ, 1.20 ಲಕ್ಷ ಶಿಕ್ಷಕರನ್ನು ನೇಮಕ ಮಾಡಿ ಹೊಸ ದಾಖಲೆ ನಿರ್ಮಿಸಿದರು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ದಕ್ಷಿಣ ಪದವೀಧರರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರೊಂದಿಗೆ ಆಗಮಿಸಿ ಪದವೀಧರ ಶಿಕ್ಷಕರನ್ನು ಭೇಟಿ ಮಾಡಿ ಮತಯಾಚಿಸಿದ ಅವರು, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಶೈಕ್ಷಣಿಕ ಕ್ಷೇತ್ರದ ಅಭ್ಯುದಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಕುಮಾರಸ್ವಾಮಿ ಅವಧಿಯಲ್ಲಿ ಹೆಚ್ಚು ಸರ್ಕಾರಿ ಕಾಲೇಜುಗಳನ್ನು ಆರಂಭಿಸಲಾಯಿತು. ಇದರಿಂದಾಗಿ ಸಾವಿರಾರು ಪದವೀಧರರಿಗೆ ಉದ್ಯೋಗ ಲಭಿಸಿ, ಶೈಕ್ಷಣಿಕ ಗುಣಮಟ್ಟ ಹೆಚ್ಚಳವಾಯಿತು ಎಂದರು.

ಬಿಜೆಪಿ ಸರ್ಕಾರದ ಭ್ರಷ್ಟಾಚಾರದಿಂದಾಗಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಅಲ್ಲದೆ ನಿರುದ್ಯೋಗಿಗಳಿಗೆ ಉದ್ಯೋಗ ಭತ್ಯ ನೀಡುವ ಯೋಜನೆಯನ್ನು ಜಾರಿ ಮಾಡಿಲ್ಲ. ಹೆಚ್.ಕೆ. ರಾಮು ಅವರನ್ನು ಗೆಲ್ಲಿಸಿದರೆ, ಪದವೀಧರ ನಿರುದ್ಯೋಗಿಗಳಿಗೆ ತಿಂಗಳಿಗೆ 10 ಸಾವಿರ ಸಹಾಯಧನ ನೀಡುವುದಾಗಿ ಅವರು ಹೇಳಿದರು. ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಮತಯಾಚಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಉಪ್ಪಾರ ಎಸ್ಟಿ ಹೋರಾಟ ಸಮಿತಿ ಅಧ್ಯಕ್ಷ ಬಾಗಳಿ ರೇವಣ್ಣ, ಮೈಸೂರು ಜೆಡಿಎಸ್ ಕಾರ್ಯದರ್ಶಿ ಗಂಗಾಧರ್, ಯಳಂದೂರು ತಾಲೂಕು ಅಧ್ಯಕ್ಷ ಶಾಂತರಾಜು, ಮಹಿಳಾ ಘಟಕದ ಅಧ್ಯಕ್ಷೆ ಡಿ.ಎನ್. ಉಷಾ, ಸಿ.ಎಂ. ಕೃಷ್ಣಮೂರ್ತಿ, ಶರ್ಮಾ, ಸಮೀವುಲ್ಲಾ, ಕೆಂಪರಾಜು ವೈ.ಕೆ.ಮೋಳೆ ಇತರರಿದ್ದರು.

ರೋಹಿತ್ ಚಕ್ರತೀರ್ಥ ಗಡಿಪಾರಿಗೆ ಒತ್ತಾಯ



ಚಾಮರಾಜನಗರ, ಮೇ 31(ಎಸ್‌ಎಸ್)–ರಾಷ್ಟ್ರಕವಿ ಕುವೆಂಪು ಅವರು ರಚಿಸಿರುವ ನಾಡಗೀತೆಗೆ ಅವಮಾನ ಮಾಡಿರುವ ಆರೋಪ ಹೊತ್ತಿರುವ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರನ್ನು ಗಡಿಪಾರು ಮಾಡುವಂತೆ ಒತ್ತಾಯಿಸಿ ಚಾಮರಾಜನಗರ ತಾಲೂಕು ಮತ್ತು ಟೌನ್ ಒಕ್ಕಲಿಗರ ಸಂಘದಿಂದ ನಗರದಲ್ಲಿ ಪ್ರತಿಭಟಿಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ದೇವಾಲಯದಲ್ಲಿ ಆವರಣದಲ್ಲಿ ಸಂಘದ ಟೌನ್ ಅಧ್ಯಕ್ಷ ಮಹೇಶ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಟೌನ್ ಒಕ್ಕಲಿಗರ ಸಂಘದ ಅಧ್ಯಕ್ಷ ಮಹೇಶ್ ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರ ಬರೆದಿರುವ ನಾಡಗೀತೆಗೆ ಅವಮಾನ ಮಾಡಿರುವ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥರನ್ನು ಬಂಧಿಸಿ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಸಹ ಕಾರ್ಯದರ್ಶಿ, ಪಣ್ಯದಹುಂಡಿ ರಾಜು, ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ, ಟೌನ್ ಪ್ರಧಾನ ಕಾರ್ಯದರ್ಶಿ ಅರುಣ್‌ಕುಮಾರ್ ಗೌಡ, ರಾಘವೇಂದ್ರ, ಲೋಕೇಶ್, ಮಹೇಂದ್ರ, ಯೋಗೇಶ್, ಬಸವರಾಜು, ಲೋಕೇಶ್, ಕುಮಾರ್ ಇತರರಿದ್ದರು.

ಸತ್ತೇಗಾಲ ಸೇತುವೆ ದುರಸ್ತಿ ಹಿನ್ನೆಲೆ

ಜೂ.1, 2ರಂದು ಸಂಚಾರ ಬಂದ್: ಬದಲಿ ಮಾರ್ಗ ಸೂಚನೆ

ಚಾಮರಾಜನಗರ, ಮೇ 31– ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಬಳಿಯ ಕಾವೇರಿ ನದಿಯ ಸೇತುವೆ ದುರಸ್ತಿ ಕಾರ್ಯದ ಹಿನ್ನೆಲೆಯಲ್ಲಿ ಜೂ.1ರ ಬೆಳಗ್ಗೆ 7 ಗಂಟೆಯಿಂದ ಜೂ. 2ರ ಸಂಜೆ 6 ಗಂಟೆಯವರೆಗೆ ಸೇತುವೆ ಸಂಚಾರ ಮಾರ್ಗವನ್ನು ಬಂದ್ ಮಾಡಲಾಗಿದೆ. ಈ ದಿನಗಳಲ್ಲಿ ಸೇತುವೆ ಮೇಲೆ ಸಂಚರಿಸಬೇಕಾದ ವಾಹನಗಳು ಬೆಳಕವಾಡಿ–ಕಾವೇರಿಪುರ, ಕೊಳ್ಳೇಗಾಲ ರಸ್ತೆಯಲ್ಲಿ ಸಂಚರಿಸಬೇಕೆಂದು ಲೋಕೋಪಯೋಗಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

4 ಚಿನ್ನ, 3 ಬೆಳ್ಳಿ, 3 ಕಂಚು ಗೆದ್ದ ಕೊಡಗಿನ ಕಿಕ್ ಬಾಕ್ಸಿಂಗ್ ಕ್ರೀಡಾಪಟುಗಳು



ಮಡಿಕೇರಿ, ಮೇ 31– ಮೈಸೂರಿನ ಯುವರಾಜ ಕಾಲೇಜಿನಲ್ಲಿ ನಡೆದ 14ನೇ ರಾಜ್ಯ ಕಿಕ್ ಬಾಕ್ಸಿಂಗ್ ಚಾಂಪಿಯನ್ ಶಿಪ್‌ನಲ್ಲಿ ಕೊಡಗಿನ ಕಿಕ್ ಬಾಕ್ಸಿಂಗ್ ಅಸೋಸಿಯೇಷನ್ ಕ್ರೀಡಾಪಟುಗಳು 4 ಚಿನ್ನ, 3 ಬೆಳ್ಳಿ ಮತ್ತು 3 ಕಂಚಿನ ಪದಕವನ್ನು ಗೆದ್ದುಕೊಂಡಿದ್ದಾರೆ.

ಅಸೋಸಿಯೇಷನ್‌ನ ಯಶಸ್ ಪಳಂಗೋಟು, ಎ.ಎಸ್.ಲಿವಿನ್, ಎ.ಎ.ಧನಂಜಯ ಹಾಗೂ ಎಂ.ಎ.ರಾಹುಲ್ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಆರ್.ಕೃಷಿಕರಾಜ, ಎ.ಎಸ್.ಸುದರ್ಶನ್, ಪಿ.ಲಿಶ್ರಿತ್ ಬೆಳ್ಳಿ ಪದಕ ಪಡೆದಿದ್ದು, ಬಿ.ಸಿ. ಗೌರವ್, ಪಿ.ಟಿ.ಧನುಷ್ ಹಾಗೂ ಟಿ.ಎಸ್.ವಿಶಾಲ್ ಕಂಚಿನ ಪದಕ ಪಡೆದುಕೊಂಡಿದ್ದಾರೆ.

ಇವರು ರಾಷ್ಟ್ರೀಯ ವುಶು ಕ್ರೀಡಾಪಟು ಪಳಂಗೋಟು ಆರ್.ಯಶಸ್ ಅವರಲ್ಲಿ ತರಬೇತಿ ಪಡೆದಿರುತ್ತಾರೆ.

ದುಶ್ಚಟದಿಂದ ದೂರವಿರಲು ವಿದ್ಯಾರ್ಥಿಗಳಿಗೆ ಸಲಹೆ



ವಿರಾಜಪೇಟೆ, ಮೇ.31– ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ. ವಿದ್ಯಾರ್ಥಿಗಳು ದುಶ್ಚಟಗಳನ್ನು ದೂರ ಮಾಡಿ ಶಿಕ್ಷಣದ ಕಡೆಗೆ ಹೆಚ್ಚು ಗಮನ ಹರಿಸುವುದರೊಂದಿಗೆ ಉತ್ತಮ ಪ್ರಜೆಯಾಗಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಸಂತೋಷ್ ಕೊಠಾರಿ ಹೇಳಿದರು.

'ತಂಬಾಕು ನಿಷೇಧ ದಿನಾಚರಣೆ' ಅಂಗವಾಗಿ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘದ ವತಿಯಿಂದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ ಕಾನೂನು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಂಬಾಕು ಸೇವನೆಯಿಂದ ಆರೋಗ್ಯದಲ್ಲಿ ದುಷ್ಪರಿಣಾಮಗಳು ಉಂಟಾಗುತ್ತದೆ ಇತರರು ಸೇವಿಸುವುದು ಕಂಡಲ್ಲಿ ತಂಬಾಕು ಹಾನಿಕರ ಎಂಬುದನ್ನು ತಿಳಿಸಬೇಕು. ಪೋಷಕರು ತಮ್ಮ ಮಕ್ಕಳು ಉತ್ತಮ ವಿದ್ಯಾವಂತರಾಗಲಿ ಎಂದು ಶಾಲೆಗೆ ಕಳಿಸುತ್ತಾರೆ. ಅದನ್ನು ವಿದ್ಯಾರ್ಥಿಗಳು ಅರಿತುಕೊಂಡು ಉತ್ತಮ ಸಮಾಜ ಕಟ್ಟಲು ಮುಂದಾಗಬೇಕೆಂದು ಕಿವಿಮಾತು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಬಿಳಗಿ ಮಾತನಾಡಿ, ತಂಬಾಕು ಸೇವನೆಯಿಂದ ಕ್ಯಾನ್ಸರ್ ರೋಗ ಕಾಣಿಸುವುದರಿಂದ ತಂಬಾಕು ಸೇವನೆ ಮಾಡುವುದಿಲ್ಲವೆಂದು ಯುವ ಜನಾಂಗ ದೃಢ ಸಂಕಲ್ಪ ಮಾಡಬೇಕು ಎಂದರು. ವಕೀಲರ ಸಂಘದ ಕಾರ್ಯದರ್ಶಿ ಎಂ.ಕೆ.ದಿನೇಶ್ ಮಾತನಾಡಿದರು.

ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯಿನಿ ಬಿ.ಇ.ಪ್ರತಿಕ್ ಅಧ್ಯಕ್ಷತೆ ವಹಿಸಿದ್ದರು. ವಕೀಲ ವಿ.ದರ್ಶನ್ ಕುಮಾರ್ ತಮ್ಮ ಉಪನ್ಯಾಸದಲ್ಲಿ ತಂಬಾಕು ಧೂಮಪಾನದಿಂದ ಕ್ಯಾನ್ಸರ್ ರೋಗ ಹರಡುವ ಸಾಧ್ಯತೆ ಇರುವುದರಿಂದ ತಂಬಾಕು ನಿಷೇಧ ಮಾಡಬೇಕು ಎಂದರು. ಶಿಕ್ಷಕರಾದ ಅನೀತಾ ನರೋನಾ ಸ್ವಾಗತಿಸಿದರು. ರಂಜನಿ ನಿರೂಪಿಸಿದರೆ, ನಸೀಮಾ ವಂದಿಸಿದರು.

ಮಹಡಿಯಿಂದ ಬಿದ್ದು ಕಾರ್ಮಿಕ ಸಾವು

ಮಡಿಕೇರಿ, ಮೇ 31– ಮನೆಯ ಸೆಂಟ್ರಿಂಗ್ ಬಿಚ್ಚುವ ಸಂದರ್ಭ 2ನೇ ಮಹಡಿಯಿಂದ ಬಿದ್ದು ಕಾರ್ಮಿಕ ಮೃತಪಟ್ಟ ಘಟನೆ ನಗರದ ಗಣಪತಿಬೀದಿಯಲ್ಲಿ ನಡೆದಿದೆ.

ತಮಿಳುನಾಡು ಸೇಲಂ ಮೂಲದ ಕಾರ್ಮಿಕ ರಾಜಕುಮಾರ್(40) ಮೃತಪಟ್ಟವರು. ಮತ್ತೋರ್ವ ಕಾರ್ಮಿಕ ಗಿರೀಶ್(30) ಸಣ್ಣಪುಟ್ಟಗಾಯಗೊಂಡು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಡಿಕೇರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂವೇರ ಸನ್ನಿ ಚೆಂಗಪ್ಪ ನಿಧನ



ನಾಪೋಕ್ಲು, ಮೇ 31– ಪೆರೂರು ಗ್ರಾಮದ ನಿವಾಸಿ ಮೂವೇರ ಸನ್ನಿ ಚೆಂಗಪ್ಪ (82) ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜೂ.1 ರಂದು ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಕಾಡಿಗಟ್ಟುವ ಸಂದರ್ಭ ಕಾಡಾನೆ ಸಾವು

ನಾಪೋಕ್ಲು, ಮೇ 31(ದುಗ್ಗಳ)– ಕಳೆದ ಎರಡು ದಿನಗಳಿಂದ ಚೆಯ್ಯಂಡಾಣೆ ಸಮೀಪದ ಮರಂದೋಡ ಗ್ರಾಮದಲ್ಲಿ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ಕೈಗೊಂಡಿದ್ದು ಮಂಗಳವಾರವೂ ಮುಂದುವರೆಯಿತು. ಸಾರ್ವಜನಿಕರ ಸಹಾಯದಿಂದ ನಡೆಸಿದ ಕಾರ್ಯಾಚರಣೆ ಸಂದರ್ಭ ಆನೆಯನ್ನು ಹಿಡಿಯಲು ಅರವಳಿಕೆ ಮೂಲಕ ಕಾಡಾನೆಗೆ ಗುಂಡು ಹಾರಿಸಲಾಗಿ ಆನೆಯು ಸ್ಥಳದಲ್ಲಿಯೇ ಸಾವನ್ನಪ್ಪಿದೆ.

ಅರವಳಿಕೆ ಮದ್ದು ಓವರ್‌ಡೋಸ್ ಆದಕಾರಣ ಆನೆ ಸತ್ತಿರಬಹುದು ಅಥವಾ ಹೃದಯಾಘಾತದಿಂದ ಆನೆ ಸತ್ತಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ. ಇದು ಹೆಣ್ಣಾನೆಯಾಗಿದೆ. ಸ್ಥಳಕ್ಕೆ ನಾಪೋಕ್ಲು ಠಾಣಾಧಿಕಾರಿ ಸದಾಶಿವ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸ್ಥಳದಲ್ಲಿ ಉನ್ನತ ಅರಣ್ಯಾಧಿಕಾರಿಗಳು ಬೀಡು ಬಿಟ್ಟಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅರವಳಿಕೆ ಮದ್ದು ಓವರ್‌ಡೋಸ್‌ನಿಂದ ಸಾವು ಶಂಕೆ



ಹಣದ ಕೊರತೆ ನಡುವೆಯೂ ಸಾಲುಸಾಲು ಭೂಮಿಪೂಜೆ

ನಗರಸಭೆ ವಿರುದ್ಧ ಕಾಂಗ್ರೆಸ್ ಟೀಕೆ



ಮಡಿಕೇರಿ,ಮೇ 31– ನಗರಸಭೆಯಲ್ಲಿ ಅನುದಾನದ ಕೊರತೆ ಇದ್ದರೂ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಗರದ ವಿವಿಧ ಕಾಮಗಾರಿಗಳಿಗೆ ಸಾಲುಸಾಲು ಭೂಮಿಪೂಜೆ ನೆರವೇರಿಸಲಾಗುತ್ತಿದೆ ಎಂದು ನಗರ ಕಾಂಗ್ರೆಸ್ ಉಪಾಧ್ಯಕ್ಷ ಹಾಗೂ ನಗರಸಭಾ ಮಾಜಿ ಸದಸ್ಯ ಪ್ರಕಾಶ್ ಆಚಾರ್ಯ ಟೀಕಿಸಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಅವರು ಕಳೆದ 3 ತಿಂಗಳುಗಳಿಂದ ನಗರದ ವಿವಿಧೆಡೆ ಶಾಸಕರು ಭೂಮಿ ಪೂಜೆ ಮಾಡಿದ್ದಾರೆ. ಆದರೆ ಇವುಗಳಲ್ಲಿ ಬಹುತೇಕ ಕಾಮಗಾರಿಗಳು ಆರಂಭವೇ ಆಗಿಲ್ಲವೆಂದು ಆರೋಪಿಸಿದ್ದಾರೆ.

ಆಡಳಿತ ಪಕ್ಷದ ಶಾಸಕರೇ ಜಿಲ್ಲೆಯಲ್ಲಿರುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಅನುದಾನವನ್ನು ತರಬಹುದೆನ್ನುವ ನಿರೀಕ್ಷೆಯಿಂದ ನಗರದ ಮತದಾರರು ನಗರಸಭೆಗೆ ಬಿಜೆಪಿ ಸದಸ್ಯರನ್ನು ಗೆಲ್ಲಿಸಿ ಅಧಿಕಾರ ನೀಡಿದರು. ಆದರೆ ಇಂದು ಜನರ ನಿರೀಕ್ಷೆ ಹುಸಿಯಾಗಿದೆ. ಕೇವಲ ಭೂಮಿಪೂಜೆಯಷ್ಟೇ ನಡೆಯುತ್ತಿದ್ದು, ಮಳೆಗಾಲ ಆರಂಭವಾದರೂ ಕಾಮಗಾರಿಗಳನ್ನು ಕೈಗೆತ್ತಿಕೊಂಡಿಲ್ಲ. ಇದರಿಂದ ಆಡಳಿತ ಪಕ್ಷದ ಸದಸ್ಯರಿಗೇ ಬೇಸರ ಉಂಟಾಗಿದೆ ಎಂದರು.

ಕನಿಷ್ಠ ರಸ್ತೆ ಗುಂಡಿ ಮುಚ್ಚುವ, ಚರಂಡಿ ದುರಸ್ತಿಗೊಳಿಸುವ, ರಸ್ತೆ ಬದಿಯ ಕಾಡು ಕಡಿಯುವ ಕೆಲಸ ಕೂಡ ನಡೆಯುತ್ತಿಲ್ಲ. ಪ್ರತಿ ವಾರ್ಡ್‌ನಲ್ಲಿ ಸಣ್ಣ ಪುಟ್ಟ ಕಾಮಗಾರಿಗಳಿಗೆ ಸುಮಾರು 15 ರಿಂದ 20 ಲಕ್ಷ ರೂ. ಅನುದಾನದ ಅವಶ್ಯಕತೆ ಇದೆ. ಸ್ಥಳೀಯ ಶಾಸಕರು ರೂ.5 ಕೋಟಿ ನಗರಸಭೆಗೆ ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ಯಾವ ಹಣ ಕೂಡ ಇಲ್ಲಿಯವರೆಗೆ ಬಂದಿಲ್ಲ.

ಅನುದಾನ ಇಲ್ಲದಿದ್ದರೂ ಚುನಾವಣೆ ಸಮೀಪಿಸುತ್ತಿದೆ ಎನ್ನುವ ಕಾರಣಕ್ಕೆ ಶಾಸಕರು ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸುತ್ತಿದ್ದಾರೆ. ನಗರಸಭೆಯಲ್ಲಿ ಅನುದಾನದ ಬಗ್ಗೆ ವಿಚಾರಿಸಿದರೆ ನಗರೋತ್ಥಾನದ 4ನೇ ಹಂತದ 40 ಲಕ್ಷ ರೂ. ಅನುದಾನ ಬರುತ್ತದೆ ಎಂದು ಹೇಳಿಕೊಳ್ಳುತ್ತಿದ್ದಾರೆ. 2016ರಲ್ಲಿ ಕಾಂಗ್ರೆಸ್ ಸರಕಾರ ನಗರೋತ್ಥಾನದ 3ನೇ ಹಂತದ ಹಣ 45 ಲಕ್ಷ ರೂ. ಬಿಡುಗಡೆ ಮಾಡಿತ್ತು. ಪ್ರಸ್ತುತ 60 ಲಕ್ಷ ರೂ. 4ನೇ ಹಂತದ ಅನುದಾನ ಬರಬೇಕಿತ್ತು. ಆದರೆ ಅನುದಾನ ನೀಡುವಲ್ಲಿ ಸರಕಾರ ಮೀನಾ ಮೇಷ ಎಣಿಸುತ್ತಿದೆ ಎಂದು ಪ್ರಕಾಶ್ ಆಚಾರ್ಯ ಆರೋಪಿಸಿದ್ದಾರೆ.

ಜಿಲ್ಲಾಮಟ್ಟದ ಪತ್ರಕರ್ತರ ಪ್ರೀಮಿಯರ್ ಲೀಗ್ ಪಂದ್ಯಾವಳಿ

ಮೀಡಿಯಾ ಕಿಂಗ್ಸ್ ತಂಡಕ್ಕೆ ಟ್ರೋಫಿ, ಡ್ರೀಮ್ ತಂಡ ದ್ವಿತೀಯ ಸ್ಥಾನ





ಕುಶಾಲನಗರ, ಮೇ 31– ಕುಶಾಲನಗರ ತಾಲ್ಲೂಕು ಪತ್ರಕರ್ತರ ಸಂಘದ ಆಶ್ರಯದ ಕ್ರೀಡಾ ಸಮಿತಿ ವತಿಯಿಂದ ನಡೆದ ಪ್ರಥಮ ವರ್ಷದ ಜಿಲ್ಲಾ ಮಟ್ಟದ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೆ.ಬಿ. ಶಂಶುದ್ದೀನ್ ಮಾಲೀಕತ್ವದ ಹಾಗೂ ಜಯಪ್ರಕಾಶ್ ನಾಯಕತ್ವದ ಕುಶಾಲನಗರದ ಮೀಡಿಯಾ ಕಿಂಗ್ಸ್ ತಂಡ ಟ್ರೋಫಿ ಮುಡಿಗೇರಿಸಿಕೊಂಡಿದೆ.

ಇಲ್ಲಿನ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಏರ್ಪಡಿಸಿದ್ದ ಲೀಗ್ ಪಂದ್ಯಾವಳಿಯಲ್ಲಿ ಮಡಿಕೇರಿಯ ಮಂಜು ಸುವರ್ಣ ಮಾಲೀಕತ್ವದ ಹಾಗೂ ಆದರ್ಶ್ ನಾಯಕತ್ವದ ಡ್ರೀಮ್ ತಂಡ ದ್ವಿತೀಯ ಸ್ಥಾನ ಗಳಿಸಿದೆ. ಕ್ರಿಕೆಟ್ ಪಂದ್ಯಾವಳಿಯಲ್ಲಿ ಆರು ತಂಡಗಳು ಭಾಗಿಯಾಗಿದ್ದವು. ತಲಾ ಮೂರು ತಂಡಗಳನ್ನು ಎರಡು ವಿಭಾಗವಾಗಿ ವಿಂಗಡಿಸಲಾಗಿತ್ತು.

ಪ್ರಥಮ ವರ್ಷದ ಪಿ.ಪಿ.ಎಲ್‌ನಲ್ಲಿ ಚಾಂಪಿಯನ್ ಪಟ್ಟವನ್ನು ಅಲಂಕರಿಸಿದ ಮೀಡಿಯಾ ಕಿಂಗ್ಸ್ ರೂ.50 ಸಾವಿರ ನಗದು ಹಾಗೂ ಟ್ರೋಫಿ, ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟ ಡ್ರೀಮ್ ತಂಡಕ್ಕೆ ರೂ.25 ಸಾವಿರ ನಗದು ಹಾಗೂ ಟ್ರೋಫಿ ನೀಡಲಾಯಿತು.

ತೃತೀಯ ಸ್ಥಾನ ಪಡೆದ ರಾಕ್ ಸ್ಟಾರ್ಸ್ ಹಾಗೂ ನಾಲ್ಕನೇ ಸ್ಥಾನ ಪಡೆದ ಕ್ಯಾಪ್ಟನ್ ತಂಡಕ್ಕೆ ಟ್ರೋಫಿ ವಿತರಿಸಲಾಯಿತು. ಪ್ರಥಮ ಸ್ಥಾನ ಪಡೆದ ಮೀಡಿಯಾ ಕಿಂಗ್ಸ್ ತಂಡದ ನಾಯಕನಿಗೆ ರೂ.3 ಸಾವಿರ ಹಾಗೂ ಆಟಗಾರರಿಗೆ ತಲಾ ರೂ. 2ಸಾವಿರ ನಗದು ವಿತರಿಸಲಾಯಿತು. ದ್ವಿತೀಯ ಸ್ಥಾನ ಪಡೆದ ಡ್ರೀಮ್ ತಂಡದ ನಾಯಕನಿಗೆ ರೂ.2 ಸಾವಿರ ಹಾಗೂ ಆಟಗಾರರಿಗೆ ತಲಾ ಒಂದು ಸಾವಿರ ನಗದನ್ನು ವಿತರಿಸಲಾಯಿತು.

ಪ್ರಥಮ ವರ್ಷದ ಪಿ.ಪಿ.ಎಲ್ ಲೀಗ್‌ನ ಬೆಸ್ಟ್ ಬ್ಯಾಟ್ಸ್‌ಮನ್ ಮತ್ತು ಸರಣಿ ಪುರುಷೋತ್ತಮ ಟ್ರೋಫಿಯನ್ನು ಮೀಡಿಯಾ ಕಿಂಗ್ಸ್ ತಂಡದ ಜಯಪ್ರಕಾಶ್ ಪಡೆದುಕೊಂಡರೇ ಬೆಸ್ಟ್ ಬೌಲರ್ ಆಗಿ ಕ್ಯಾಪ್ಟನ್ ತಂಡದ ಇಸ್ಮಾಯಿಲ್ ಕಂಡಕರೆ, ಬೆಸ್ಟ್ ಆಲ್ ರೌಂಡರ್ ಆಗಿ ಡ್ರೀಮ್ ತಂಡದ ಮಂಜು ಸುವರ್ಣ, ಬೆಸ್ಟ್ ಕೀಪರ್ ಆಗಿ ಡ್ರೀಮ್ ತಂಡದ ಪಾರ್ಥ ಚಿಣ್ಣಪ್ಪ, ಬೆಸ್ಟ್ ಫೀಲ್ಡರ್ ಆಗಿ ಕ್ಯಾಪ್ಟನ್ ತಂಡದ ಮುಸ್ತಫಾ ಸಿದ್ದಾಪುರ ಪಡೆದುಕೊಂಡರು.

ಬಹುಮಾನ ವಿತರಣೆ: ವಿಜೇತರಿಗೆ ಬಹುಮಾನ ವಿತರಿಸಿದ ಜೆಡಿಎಸ್ ಮುಖಂಡ ನಾಪಂಡ ಮುತ್ತಪ್ಪ ಮಾತನಾಡಿ, ಜಡ್ಡುಗಟ್ಟಿದ ಮನಸ್ಸು, ದೇಹಕ್ಕೆ ಹುರುಪು ತುಂಬಲು ಕ್ರೀಡೆಯಂತಹ ಚಟುವಟಿಕೆಗಳು ಅಗತ್ಯ ಎಂದರು.

ಕೊರೊನಾ ಲಾಕ್ ಡೌನ್ ವೇಳೆ ಸಮಾಜದ ಎಲ್ಲಾ ವರ್ಗಗಳೂ ಚಟುವಟಿಕೆ ಇಲ್ಲದೆ ಸ್ಥಗಿತವಾಗಿ ಜಡ ಹಿಡಿದ ಪರಿಸ್ಥಿತಿ ಇತ್ತು. ಆದರೆ ಪತ್ರಕರ್ತರು ಮಾತ್ರ ಕ್ರಿಯಾಶೀಲರಾಗಿಯೇ ಇದ್ದರು. ಅಪಾಯಕಾರಿ ಪರಿಸ್ಥಿತಿ ಮಧ್ಯೆಯೂ ವರದಿಗಾರಿಕೆಯಲ್ಲಿ ತೊಡಗಿಸಿಕೊಂಡು ಸುದ್ದಿಯನ್ನು ಮುಟ್ಟಿಸುತ್ತಿದ್ದರು. ಇದೀಗ ಕೊರೊನಾ ಆತಂಕ ದೂರವಾಗುತ್ತಿದ್ದಂತೆಯೇ ಎಲ್ಲಾ ರೀತಿಯ ಚಟುವಟಿಕೆಗಳು ಗರಿಗೆದರಿದೆ. ಎಲ್ಲಾ ಕಡೆಯೂ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದೆ. ಪತ್ರಕರ್ತರೂ ಕ್ರಿಕೆಟ್ ಮೂಲಕ ಒಂದಾಗುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ ಎಂದರು.

ಕುಶಾಲನಗರ ಪಟ್ಟಣ ಪಂಚಾಯಿತಿ ಅಧ್ಯಕ್ಷ ಜಯವರ್ಧನ ಮಾತನಾಡಿ, ಪತ್ರಕರ್ತರಲ್ಲಿ ಇರುವ ಪ್ರತಿಭೆ ಹೊರತರಲು ಸಂಘದ ಮೂಲಕ ಉತ್ತಮ ಅವಕಾಶ ಮಾಡಿಕೊಡಲಾಗಿದೆ. ಉತ್ತಮ ಕ್ರಿಕೆಟ್ ಪಟುಗಳು ಪತ್ರಕರ್ತರಲ್ಲೂ ಇದ್ದಾರೆ ಎಂದರು.

ಕುಶಾಲನಗರ ತಾಲೂಕು ಕ್ರೀಡಾ ಸಮಿತಿ ಅಧ್ಯಕ್ಷ ಕೆ.ಜೆ. ಶಿವರಾಜ್ ಅಧ್ಯಕ್ಷತೆಯಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಉದ್ಯಮಿ ಬಾಷಾ, ಸಂಘದ ಜಿಲ್ಲಾ ಘಟಕದ ಅಧ್ಯಕ್ಷೆ ಸವಿತಾ ರೈ, ಕುಶಾಲನಗರ ತಾಲೂಕು ಘಟಕದ ಅಧ್ಯಕ್ಷ ಚಂದ್ರಮೋಹನ್, ಉಪಾಧ್ಯಕ್ಷ ರಾಜು ರೈ, ಪ್ರಧಾನ ಕಾರ್ಯದರ್ಶಿ ವನಿತಾ ಚಂದ್ರಮೋಹನ್, ರಾಷ್ಟ್ರೀಯ ಪತ್ರಕರ್ತರ ಒಕ್ಕೂಟದ ನಿರ್ದೇಶಕ ಸುನಿಲ್ ಪೊನ್ನೇಟಿ, ಜಿಲ್ಲಾ ಸಂಘದ ಖಜಾಂಚಿ ಆನಂದ್ ಕೊಡಗು, ಜಿಲ್ಲಾ ಕ್ರೀಡಾ ಸಮಿತಿ ಸಂಚಾಲಕ ಮಂಜು ಸುವರ್ಣ, ನಿರ್ದೇಶಕರಾದ ರಘು ಹೆಬ್ಬಾಲೆ, ಶಶಿಕುಮಾರ್ ರೈ, ಪೊನ್ನಂಪೇಟೆ ತಾಲೂಕು ಘಟಕದ ಅಧ್ಯಕ್ಷ ಕಿಶೋರ್ ನಾಚಪ್ಪ ಇದ್ದರು.

ಸಿದ್ದರಾಮಯ್ಯ ಆಪರೇಷನ್ ಕಮಲಯ್ಯ!



ಬೆಂಗಳೂರು, ಮೇ 31– ರಾಜ್ಯಸಭೆ ಚುನಾವಣೆಯಲ್ಲಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ನಡೆಸುತ್ತಿರುವ ಬುಡಮೇಲು ರಾಜಕೀಯ ಬಗ್ಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಸರಣಿ ಟ್ವೀಟ್ ಮಾಡಿರುವ ಅವರು, ಸಿದ್ದರಾಮಯ್ಯ ರಾಜ್ಯಸಭೆ ಚುನಾವಣೆಯಲ್ಲಿ ಆಪರೇಷನ್ ಕಮಲದಂಥ ರಾಜಕೀಯ ಮಾಡುತ್ತಿದ್ದಾರೆ. ಅಲ್ಲದೆ, ಅವರನ್ನು ಬಿಜೆಪಿ ಬಿ ಟೀಮಿನ ಕ್ಯಾಪ್ಟನ್, ಆಪರೇಷನ್ ಕಮಲಯ್ಯ ಎಂದು ಮೂದಲಿಸಿದ್ದಾರೆ.

ಅವರ ಟ್ವೀಟ್‌ನ ಪೂರ್ಣ ಪಾಠ ಇಲ್ಲಿದೆ: ಬಿಜೆಪಿ ಸರಕಾರದ ಕಾರಣಪುರುಷ, ಆಹಿಂದ ಆದಿಪುರುಷ, ಕಾಂಗ್ರೆಸ್ ಮುಗಿಸಲು ಹೊರಟ ಸಿದ್ದಹಸ್ತ ಮಹಾಶಯ... ಏನಯ್ಯಾ ನಿಮ್ಮ ರಾಜಕೀಯ? ಮುಸ್ಲಿಂ ನಾಯಕರನ್ನು ನರಮೇಧಕ್ಕೆ ಇಟ್ಟೊಂದು ವಿನಾಶಕಾರಿ ಅಧ್ಯಾಯ ಆರಂಭಿಸಿದ್ದೀರಿ. 'ಭಾಷಣ ಒಂದು, ರಾಜಕಾರಣ ಇನ್ನೊಂದು!!', ಇದಯ್ಯಾ ಕಿಲಾಡಿರಾಮಯ್ಯನ ರಾಜನೀತಿ ಮತ್ತು ರಣನೀತಿ. ಐದು ವರ್ಷಗಳ ನಿಮ್ಮ ನೇತೃತ್ವದ ಕಾಂಗ್ರೆಸ್ ಸರಕಾರ ಬರಲು ಕಾರಣರಾದ ಅಲ್ಪಸಂಖ್ಯಾತರನ್ನೇ ಅಯ್ಯೋ ಎನ್ನುವಂತೆ ಮಾಡುತ್ತಿದೀರಲ್ಲ..? ಇದು ನ್ಯಾಯವೇ?

ಸೋಲು ಖಚಿತ ಎಂದು ಗೊತ್ತಿದ್ದರೂ ಮನ್ಸೂರ್ ಖಾನ್ ಅವರನ್ನು ಬಲಿಪೀಠದ ಮುಂದೆ ನಿಲ್ಲಿಸಿದ್ದೀರಿ. ಏನಿದರ ಹಕೀಕತ್ತು? ಮುಸ್ಲಿಂ ನಾಯಕರನ್ನು ನೀವು ಸಾಲು ಸಾಲಾಗಿ ರಾಜಕೀಯ ಗಿಲೋಟಿನ್ ಯಂತ್ರಕ್ಕೆ ತಳ್ಳುತ್ತಿರುವ ನಿಮ್ಮ 'ಮುಸ್ಲಿಂ ಮೂಲೋಚ್ಚಾಟನಾ ರಾಜಕೀಯ'ಕ್ಕೆ ರಾಜ್ಯಸಭೆ ಚುನಾವಣೆಯನ್ನೂ ಬಳಸಿಕೊಳ್ಳುತ್ತಿದ್ದೀರಲ್ಲ? ಇದೆಂಥಾ ರಾಜಕೀಯವಯ್ಯಾ? ರಾಮನ ಹೆಸರು, ರಾವಣ ರಾಜಕೀಯ, ನಿಮಗೆ ನೀವೇ ಸಾಟಿ. ಜಾತ್ಯತೀತತೆಯ ಸೋಗು ಹಾಕಿಕೊಂಡು ಪೋಸು ಕೊಡುವ ಆಸಾಮಿ, ಜಾತಿಗೊಂದು ಸಮಾವೇಶ ನಡೆಸಿಕೊಂಡು ಅಲ್ಪಸಂಖ್ಯಾತ ವ್ಯಕ್ತಿಯನ್ನು 2ನೇ ಅಭ್ಯರ್ಥಿ ಮಾಡಿದ ಒಳಗುಟ್ಟು ಏನು? ಆಪರೇಷನ್ ಕಮಲದ ಅಮಲು ಇನ್ನೂ ಇಳಿದಿಲ್ಲವೆ?

ಅಲ್ಪಸಂಖ್ಯಾತರ ಬಗ್ಗೆ ಅಷ್ಟು ಮಮಕಾರ ಇದ್ದಿದ್ದರೆ ಮನ್ಸೂರ್ ಖಾನ್ ಅವರನ್ನೇ ಮೊದಲ ಅಭ್ಯರ್ಥಿ ಮಾಡಬೇಕಿತ್ತು. ಮಾಡಲಿಲ್ಲ ಯಾಕೆ? ನಿಮಗೆ ಜೈರಾಂ ರಮೇಶ್ ಹೆಚ್ಚೋ ಅಥವಾ ಮನ್ಸೂರ್ ಖಾನ್ ಹೆಚ್ಚೋ? ಇಲ್ಲವೇ ಬಿಜೆಪಿಯ 3ನೇ ಅಭ್ಯರ್ಥಿ ಹೆಚ್ಚೋ? ಇಕ್ಬಾಲ್ ಅಹಮದ್ ಸರಡಗಿ ಆಯಿತು. ಜಾಫರ್ ಷರೀಫ್ ಮೊಮ್ಮಗ ರೆಹಮಾನ್ ಷರೀಫ್ ಆಯಿತು. ರೋಷನ್ ಬೇಗ್ ಕಥೆಯನ್ನು ಮುಗಿಸಿದಿರಿ. ತನ್ವೀರ್ ಸೇಠ್ ನಿಮ್ಮ ಹಿಟ್ ಲಿಸ್ಟಿನಲ್ಲಿ ಇದ್ದಾರೆ. ಸತ್ಯ ಹೇಳಿದ ಸಲೀಂರನ್ನು ಸಲೀಸಾಗಿ ಸೈಡಿಗಟ್ಟಿ ದಿರಿ. ಒಂದೇ ಕಲ್ಲಿನಲ್ಲಿ ಅನೇಕ ಹಕ್ಕಿಗಳನ್ನು ಹೊಡೆಯೋದು ಅಂದರೆ ಇದೇನಾ? ಬಿಜೆಪಿ ಬಾಲಂಗೋಚಿ, ಬಿಜೆಪಿ ಬಿ–ಟೀಮಿನ ಕ್ಯಾಪ್ಟನ್, ಆಪರೇಶನ್ ಕಮಲಯ್ಯ, ಸಿದ್ದಸೂತ್ರಧಾರ, ಢೋಂಗಿ ಜಾತ್ಯತೀತ, ಆಶ್ರಯ ಕೊಟ್ಟ ಪಕ್ಷದ ಕತ್ತು ಸೀಳಲು ಹೊರಟ ಕೈಚಳಕದ ಕಲಿ, ನಿಮ್ಮ ಅಸಲಿಯತ್ತು ರಾಜ್ಯಸಭೆ ಚುನಾವಣೆಯಲ್ಲೂ ನಡೆಯುತ್ತಾ? ಎಷ್ಟಾದರೂ ನೀವು ಆಪರೇಶನ್ ಕಮಲದ ಆಸಾಮಿ ಅಲ್ಲವೇ? ಎಂದು ಕುಮಾರಸ್ವಾಮಿ ಪ್ರಶ್ನೆ ಮಾಡಿದ್ದಾರೆ.

ಸೋನಿಯಾಗಾಂಧಿ ಒಪ್ಪಿಗೆ ನಂತರವೇ ಜೆಡಿಎಸ್ ಅಭ್ಯರ್ಥಿ ಕಣಕ್ಕೆ



ಬೆಂಗಳೂರು: ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತಿತರ ಪಕ್ಷಗಳ ಮುಖಂಡರಿಂದ ಬೆಂಬಲದ ಒಪ್ಪಿಗೆ ದೊರೆತ ನಂತರ ಮಾಜಿ ಸಂಸದ ಡಿ.ಕುಪೇಂದ್ರ ರೆಡ್ಡಿ ಅವರನ್ನು ರಾಜ್ಯಸಭಾ ಚುನಾವಣೆಗೆ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಸಲಾಗಿದೆ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹೇಳಿದ್ದಾರೆ. ದಿಢೀರನೆ ಕಾಂಗ್ರೆಸ್ ಪಕ್ಷದಿಂದ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದಕ್ಕೆ ಅಚ್ಚರಿ ವ್ಯಕ್ತಪಡಿಸಿದ ಎಚ್.ಡಿ.ರೇವಣ್ಣ, ರಾಜ್ಯಸಭಾ ಚುನಾವಣೆಯಲ್ಲಿ ಕೋಮುವಾದಿ ಪಕ್ಷವನ್ನು ದೂರ ವಿಡಲು ತಮ್ಮ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಕಾಂಗ್ರೆಸ್ ಶಾಸಕರ ಬಳಿ ಮನವಿ ಮಾಡಿದರು. ಹೆಚ್.ಡಿ.ದೇವೇಗೌಡ ಅವರೊಂದಿಗೆ ಸೋನಿಯಾ ಗಾಂಧಿ ಮಾತನಾಡಿದ್ದಾರೆ. ನಂತರ ಅವರ ಒಪ್ಪಿಗೆ ಮೇರೆಗೆ ನಮ್ಮ ಅಭ್ಯರ್ಥಿಯನ್ನು ಇಂದು ಕಣಕ್ಕಿಳಿಸಿದ್ದೇವೆ. ಇದೇ ರೀತಿಯಲ್ಲಿ ಹೆಚ್.ಡಿ.ಕುಮಾರಸ್ವಾಮಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ಅವರು ಒಪ್ಪಿಗೆ ನೀಡಿದ ನಂತರ ನಾವು ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ ಎಂದರು.

ಮೂರನೇ ಪುಟದಿಂದ

ಕುದುರೆ ವ್ಯಾಪಾರ?

ಮೊದಲ ಪ್ರಾಶಸ್ತ್ಯದ ಮತಗಳನ್ನು ಮೊದಲ ಅಭ್ಯರ್ಥಿಗೆ 46 ಮತ ನೀಡಿದರೆ, ಇನ್ನು 22 ಮತಗಳು ಉಳಿಯಲಿವೆ. ಜೆಡಿಎಸ್‌ಗೆ 32 ಮತಗಳಿವೆ. ಜೆಡಿಎಸ್ ಜತೆಗಿನ ಸಖ್ಯ ಬೇಡ ಎಂಬ ಕಾರಣಕ್ಕಾಗಿ ಮತ್ತು ಅದು ಬಿಜೆಪಿ ಜತೆ ಹೋಗುತ್ತದೆಯೇ ಎಂಬುದನ್ನು ನೋಡುವ ಮೂಲಕ ಅದನ್ನು ಕೋಮುವಾದಿ ಎಂದು ಹೇಳಲು ಕಾಂಗ್ರೆಸ್ ಪಕ್ಷ ಬಯಸುತ್ತಿದ್ದು ಈ ಹಿನ್ನೆಲೆಯಲ್ಲಿ ಅದು ತನ್ನ ಎರಡನೇ ಅಭ್ಯರ್ಥಿಯ ಗೆಲುವನ್ನು ನಿರೀಕ್ಷಿಸುವ ಸ್ಥಿತಿಯಲ್ಲಿಲ್ಲ. ಕಾಂಗ್ರೆಸ್ ಪಕ್ಷ ಚುನಾವಣಾ ಕಣದಲ್ಲಿ ಜೆಡಿಎಸ್‌ಗೆ ಮುಖಭಂಗ ಮಾಡುವ ಉದ್ದೇಶವಿಟ್ಟುಕೊಂಡಿದ್ದರೆ ಬಿಜೆಪಿ ತನ್ನ ಮೂರನೆಯ ಅಭ್ಯರ್ಥಿಯ ಮತ್ತು ಜೆಡಿಎಸ್ ತನ್ನ ಏಕೈಕ ಅಭ್ಯರ್ಥಿಯ ಗೆಲುವಿಗೆ ಕಾತರಿಸುತ್ತಿವೆ. ಜೆಡಿಎಸ್‌ಗೆ ಮಾಡು ಇಲ್ಲವೇ ಮಡಿ ಎಂಬ ಪಂಥಾಹ್ವಾನವಿದ್ದು, ಅದು ತನಗಿರುವ ಮೂವತ್ತೆರಡು ಶಾಸಕ ಬಲದ ಜತೆ ಇನ್ನೂ ಹೆಚ್ಚುವರಿಯಾಗಿ 8 ರಿಂದ 9 ಮತಗಳನ್ನು ಪಡೆದರೆ, ಪ್ರಯಾಸದಿಂದ ಗೆಲ್ಲಬಹುದಾಗಿದೆ.

ಈಗಿನ ಸ್ಥಿತಿಯಲ್ಲಿ ಅದು ಬಿಜೆಪಿ ಬುಟ್ಟಿಗೆ ಕೈ ಹಾಕಿ ಮತಗಳನ್ನು ಪಡೆಯುವುದು ಕಷ್ಟವಾದರೂ ಕಾಂಗ್ರೆಸ್ ಪಕ್ಷದ ಆಂತರಿಕ ಗೊಂದಲವನ್ನು ಎನ್‌ಕ್ಯಾಶ್ ಮಾಡಿಕೊಂಡು ತನ್ನ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಗೆಲುವು ಸಾಧಿಸುವಂತೆ ನೋಡಿಕೊಳ್ಳುತ್ತದೆಯೇ ಎಂದು ಕಾದು ನೋಡಬೇಕಿದೆ. ಜೆಡಿಎಸ್ ವತಿಯಿಂದ ಸ್ಪರ್ಧಿಸಿರುವ ಕುಪೇಂದ್ರ ರೆಡ್ಡಿ ಅವರು ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಆಪ್ತರಾಗಿದ್ದು, ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಬುಟ್ಟಿಯಿಂದ ಕೆಲ ಮತಗಳು ಕುಪೇಂದ್ರರೆಡ್ಡಿ ಕಡೆ ವಾಲುತ್ತವೆಯೇ ಎಂಬುದು ಸಧ್ಯದ ಕುತೂಹಲ. ಹಾಗೇನಾದರೂ ಆದರೆ ಜೆಡಿಎಸ್ ಪಕ್ಷಕ್ಕೆ ಮುಖಭಂಗ ಮಾಡುವ ಕಾಂಗ್ರೆಸ್ ಉದ್ದೇಶ ನೀರಿನಲ್ಲಿ ಹೋಮ ಮಾಡಿದಂತಾಗುತ್ತದಲ್ಲದೆ, ತನ್ನ ಮುಖಕ್ಕೆ ತಾನೇ ಕಪ್ಪು ಮಸಿ ಅಂಟಿಸಿಕೊಂಡಂತಾಗುತ್ತದೆ. ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಮೂರು ರಾಜಕೀಯ ಪಕ್ಷಗಳಿಂದ ಆರು ಮಂದಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು ಮುಂದೇನು ಎಂದು ಕಾದು ನೋಡಬೇಕಾಗಿದೆ.

ವಂದಿತಾ ಶರ್ಮಾ ಅಧಿಕಾರ ಸ್ವೀಕಾರ

ವಂದಿತಾ ಶರ್ಮಾ ಅವರ ಅಧಿಕಾರಾವಧಿ ನವೆಂಬರ್ 30, 2023ರವರೆಗೆ ಇರಲಿದೆ.

ಮಹಿಳೆಯರ ದರ್ಬಾರ್: ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹುದ್ದೆಯನ್ನು ಈ ಹಿಂದೆ 2000 ನೇ ಇಸವಿಯಲ್ಲಿ ತೆರೇಸಾ ಭಟ್ಟಾಚಾರ್ಯ, 2006ನೇ ಇಸವಿಯಲ್ಲಿ ಮಾಲತಿದಾಸ್ ಹಾಗೂ 2017ನೇ ಇಸವಿಯಲ್ಲಿ ಕೆ.ರತ್ನಪ್ರಭ ಅವರೂ ಅಲಂಕರಿಸಿದ್ದರು. ಕೆ.ರತ್ನಪ್ರಭ ಅವರ ಅಧಿಕಾರಾವಧಿಯಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಹಾಗೂ ಮಹಾ ನಿರೀಕ್ಷಕ ಹುದ್ದೆಯನ್ನು ನೀಲಮಣಿ ಎನ್ ರಾಜು ಅಲಂಕರಿಸಿದಾಗ ಎರಡು ಪ್ರಮುಖ ಹುದ್ದೆಗಳಲ್ಲಿ ಮಹಿಳೆಯರೇ ಇದ್ದಾರೆ ಎಂಬುದು ಗಮನಾರ್ಹ ಅಂಶವಾಗಿತ್ತು.

ಇದೀಗ ವಂದಿತಾ ಶರ್ಮಾ ಅವರು ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸುವುದರೊಂದಿಗೆ ರಾಜ್ಯದ ಶಕ್ತಿ ಕೇಂದ್ರ ವಿಧಾನಸೌಧದಲ್ಲಿ ಇರುವ ಮೂರೂ ಪ್ರಮುಖ ಹುದ್ದೆಗಳನ್ನು ಮಹಿಳೆಯರೇ ಅಲಂಕರಿಸಿದಂತಾಗುತ್ತದೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ರಾಜ್ಯ ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಹಾಗೂ ರಾಜ್ಯ ವಿಧಾನ ಪರಿಷತ್ ಕಾರ್ಯದರ್ಶಿ ಕೆ.ಆರ್.ಮಹಾಲಕ್ಷ್ಮಿ ಶಕ್ತಿ ಕೇಂದ್ರದ ಶಕ್ತಿಯಾಗಿ ಹೊಸ ದಾಖಲೆ ಸ್ಥಾಪಿಸಲಿದ್ದಾರೆ.

ವಂದಿತಾ ಶರ್ಮಾ ಅವರ ಪತಿಯೂ ಕೂಡಾ ಭಾರತೀಯ ಆಡಳಿತ ಸೇವೆಯ ಅಧಿಕಾರಿಯಾಗಿ, ಪ್ರಸ್ತುತ ಹಣಕಾಸು ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯಾಗಿದ್ದಾರೆ. ಅಲ್ಲದೆ, ಇದೇ ದಿನದಿಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಹುದ್ದೆಯ ಅಧಿಕ ಪ್ರಭಾರವನ್ನೂ ವಹಿಸಿಕೊಂಡಿದ್ದಾರೆ.

ಸಚಿವ ಸಂಪುಟ ಪುನಾರಚನೆ?

ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನೀಡಿಲ್ಲ. ಬಿಜೆಪಿಯ ಈ ನಡೆ ಸಾಕಷ್ಟು ಕುತೂಹಲ ಮೂಡಿಸಿದೆ. ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್, ಕೇಂದ್ರ ಅಲ್ಪಸಂಖ್ಯಾತರ ಸಚಿವ ಮುಖ್ತಾರ್ ಅಬ್ಬಾಸ್‌ನಖ್ವಿ, ಪಕ್ಷದ ಹಿರಿಯ ನಾಯಕ ಒ.ಪಿ.ಮಾಥುರ್, ಬಿಜೆಪಿಯ ಪ್ರಧಾನ ಕಾರ್ಯದರ್ಶಿ ದುಶ್ಯಂತ್ ಗೌತಮ್ ಮತ್ತು ವಿನಯ್ ಸಹಸ್ರ ಬುದ್ಧೆ, ಮಾಜಿ ಕೇಂದ್ರ ಸಚಿವ ಶಿವ್ ಪ್ರತಾಪ್ ಶುಕ್ಲಾ ಸೇರಿದಂತೆ ಅನೇಕರು ರಾಜ್ಯಸಭೆಯಿಂದ ಆಯ್ಕೆಯಾಗಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದರು. ಆದರೆ ಈ ಬಾರಿಯ ರಾಜ್ಯಸಭೆ ಚುನಾವಣೆಗೆ ಇವರ್ಯಾರಿಗೂ ಟಿಕೆಟ್ ನೀಡದೇ ಇರುವುದು ತೀವ್ರ ಕುತೂಹಲ ಮೂಡಿಸಿದ್ದು, ಸದ್ಯದಲ್ಲೇ ಕೇಂದ್ರದಲ್ಲಿ ಸಚಿವ ಸಂಪುಟ ಪುನಾರಚನೆ ನಡೆಯುವ ಸಾಧ್ಯತೆಯಿದೆ ಎಂಬ ಮಾತು ಕೇಳಿ ಬಂದಿದೆ. ಸಚಿವ ಸಂಪುಟ ಪುನಾರಾಚನೆಯಲ್ಲಿ ಬಿಜೆಪಿಯ ಸಿದ್ಧಾಂತದಂತೆ ಹೊಸ ಸಂಸದರಿಗೆ ಹೆಚ್ಚು ಮನ್ನಣೆ ನೀಡುವ ಸಾಧ್ಯತೆಯಿದೆ.

ದೆಹಲಿ ನ್ಯಾಯಾಲಯದ ಸಮನ್ಸ್

ಅಕ್ರಮ ಹಣ ವರ್ಗಾವಣೆ ಕೇಸ್‌ನಲ್ಲಿ ಈ ಹಿಂದೆ 2019, ಸೆಪ್ಟೆಂಬರ್‌ನಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಇಡಿ ಬಂಧಿಸಿತ್ತು. ನಂತರ 2019, ಅಕ್ಟೋಬರ್ 23ರಂದು ದೆಹಲಿ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಸಾವಿರಾರು ಕೋಟಿ ರೂಪಾಯಿ ಮೊತ್ತದ ಹವಾಲಾ ವ್ಯವಹಾರ ಮತ್ತು ತೆರಿಗೆ ವಂಚನೆ ಆರೋಪದ ಮೇಲೆ ಬೆಂಗಳೂರಿನ ವಿಶೇಷ ನ್ಯಾಯಾಲಯವೊಂದರಲ್ಲಿ ಕಳೆದ ವರ್ಷ ತೆರಿಗೆ ಇಲಾಖೆ ಡಿಕೆಶಿ ವಿರುದ್ಧ ದಾಖಲಿಸಿದ್ದ ಚಾರ್ಜ್ ಶೀಟ್‌ನ್ನು ಈ ಕೇಸ್ ಆಧರಿಸಿದೆ ಎಂದು ಮೂಲಗಳು ಹೇಳಿವೆ.

ಮುಕ್ತ ವಿವಿಯಲ್ಲಿ ಅಹಲ್ಯಾಬಾಯಿ ಹೋಳ್ಕರ್ ಅಧ್ಯಯನ ಪೀಠ ಸ್ಥಾಪನೆ

ಶೆಫರ್ಡ್ ಇಂಡಿಯಾ ಇಂಟರ್ ನ್ಯಾಷನಲ್ ಸಂಸ್ಥಾಪಕ ಹೆಚ್.ವಿಶ್ವನಾಥ್ ಮನವಿ

- ಸರ್ಕಾರದಿಂದ 10 ಲಕ್ಷ ರೂ. ಅನುದಾನ ಕೊಡಿಸುವ ಭರವಸೆ
- ಶೆಫರ್ಡ್ ಇಂಡಿಯಾ, ಕನಕಗಿರಿ ಟ್ರಸ್ಟ್‌ನಿಂದ ತಲಾ 5 ಲಕ್ಷ ವಂತಿಗೆ
- ವಿಶ್ವನಾಥ್ ಮನವಿಗೆ ಸ್ಪಂದಿಸಿದ ಕುಲಪತಿ, 15 ದಿನದಲ್ಲಿ ಕಾರ್ಯಗತ

ಮೈಸೂರು, ಮೇ 31(ಎಂಟಿವೈ)– ಕಾಶಿ ವಿಶ್ವನಾಥ ದೇವಾಲಯ ಸೇರಿದಂತೆ ಸಾವಿರಾರು ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿ ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಅಪ್ರತಿಮ ಹೋರಾಟಗಾರ್ತಿ ಅಹಲ್ಯಾಬಾಯಿ ಹೋಳ್ಕರ್ ಅವರ ಹೆಸರಲ್ಲಿ ಮುಕ್ತ ವಿವಿಯಲ್ಲಿ ಅಧ್ಯಯನ ಪೀಠ ಸ್ಥಾಪಿಸಬೇಕು. ಅದಕ್ಕಾಗಿ ಸರ್ಕಾರದಿಂದ 10 ಲಕ್ಷ ರೂ. ಅನುದಾನ ಕೊಡಿಸುವುದಾಗಿ ಶೆಫರ್ಡ್ಸ್ ಇಂಡಿಯಾ ಇಂಟರ್ ನ್ಯಾಷನಲ್ ಸಂಸ್ಥಾಪಕ ಅಧ್ಯಕ್ಷರೂ ಹಾಗೂ ವಿಧಾನ ಪರಿಷತ್ ಸದಸ್ಯರೂ ಆದ ಅಡಗೂರು ಹೆಚ್.ವಿಶ್ವನಾಥ್ ಭರವಸೆ ನೀಡಿದ್ದಾರೆ.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಶೆಫರ್ಡ್ ಇಂಡಿಯಾ ಇಂಟರ್ ನ್ಯಾಷನಲ್ ಸಂಸ್ಥೆ ಆಯೋಜಿಸಿದ್ದ ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ ಅವರ 297ನೇ ಜನ್ಮ ದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ವೀರಮಾತೆ ಅಹಲ್ಯಾಬಾಯಿ ಹೋಳ್ಕರ್ ಕುರುಬ ಸಮಾಜಕ್ಕೆ ಸೇರಿದವರು. ರಾಷ್ಟ್ರದ ಇತಿಹಾಸದಲ್ಲಿ ಸಾಮ್ರಾಜ್ಯವನ್ನಾಳಿದ ರಾಣಿಯರಲ್ಲಿ ಅವರು ಮುಂಚೂಣಿಯಲ್ಲಿದ್ದಾರೆ. ವೀರಮಾತೆ, ರಾಜಮಾತೆ ಬಿರುದಾಂಕಿತರಾಗಿದ್ದ ಅಹಲ್ಯಾಬಾಯಿ ಹೋಳ್ಕರ್ ಅವರ ಸಾಧನೆ ಕುರಿತಂತೆ ಹೆಚ್ಚಿನ ಪ್ರಚಾರವಾಗಿಲ್ಲ. ಈ ಹಿನ್ನೆಲೆಯಲ್ಲಿ ಅಹಲ್ಯಾಬಾಯಿ ಹೋಳ್ಕರ್ ಅವರ ಜೀವನ ಚರಿತ್ರೆ, ಹೋರಾಟ, ಸಮಾಜ ಸೇವೆ ಕುರಿತಂತೆ ಜನರಿಗೆ ಮಾಹಿತಿ ನೀಡುವ ಅವಶ್ಯಕತೆ ಇದೆ ಎಂದರು.



ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಶೆಪರ್ಡ್ಸ್ ಇಂಟರ್ ನ್ಯಾಷನಲ್ ವತಿಯಿಂದ ಆಯೋಜಿಸಿದ್ದ ರಾಣಿ ಅಹಲ್ಯಾಬಾಯಿ ಹೋಳ್ಕರ್ ಅವರ 297ನೇ ಜಯಂತಿ ಕಾರ್ಯಕ್ರಮವನ್ನು ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಉದ್ಘಾಟಿಸಿದರು. ಪರಿಷತ್ ಸದಸ್ಯ ವಿಶ್ವನಾಥ್, ಮುಕ್ತ ವಿವಿ ಕುಲಪತಿ ಪ್ರೊ.ಎಸ್.ವಿದ್ಯಾ ಶಂಕರ್ ಇನ್ನಿತರರು ಹಾಜರಿದ್ದರು.

ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಅಹಲ್ಯಾಬಾಯಿ ಹೋಳ್ಕರ್ ಅವರ ಪೀಠವನ್ನು ಸ್ಥಾಪಿಸಬೇಕು. ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು ಕೊಡಿಸಲಾಗುವುದು. ಶೆಫರ್ಡ್ಸ್ ವತಿಯಿಂದ ಐದು ಲಕ್ಷ, ಕನಕ ಗಿರಿ ಚಾರಿಟೇಬಲ್ ಟ್ರಸ್ಟ್‌ನಿಂದ ಐದು ಲಕ್ಷ ರೂ.ಗಳನ್ನು ವಂತಿಗೆ ನೀಡಲಾಗುವುದು. ಯಾವುದೇ ಜಾತಿ, ಧರ್ಮಕ್ಕೆ ಸೀಮಿತಗೊಳ್ಳದಂತೆ ಎಲ್ಲಾ ಜಾತಿ, ಜನಾಂಗ, ದರ್ಮದ ವಿದ್ಯಾರ್ಥಿಗಳು ಅಹಲ್ಯಬಾಯಿ ಅವರ ಜೀವನ ಕ್ರಮ, ಸಾಧನೆ ಕುರಿತುಂತೆ ಅಧ್ಯಯನ ಮಾಡುವಂತಾಗಬೇಕು ಎಂದರು.

15 ದಿನದಲ್ಲಿ ಪೀಠ ಸ್ಥಾಪನೆ: ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಸಲ್ಲಿಸಿದ ಮನವಿಗೆ ಪ್ರತಿಕ್ರಿಯಿಸಿದ ಮುಕ್ತ ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಮಾತನಾಡಿ, ವಿಶ್ವನಾಥ್ ಅವರ ಪ್ರಸ್ತಾಪವನ್ನು ಒಪ್ಪಿದ್ದೇವೆ. ಮುಂದಿನ 15 ದಿನದಲ್ಲಿ ಕಾರ್ಯಗತಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಈಗಾಗಲೇ ಪೀಠಸ್ಥಾಪನೆಗೆ ಹದಿನೈದು ಲಕ್ಷ ರೂ. ಠೇವಣಿ ಇಟ್ಟಿದ್ದು, ಪೀಠ ಸ್ಥಾಪನೆಯಾದ ಮೇಲೆ ನಿರ್ದೇಶಕರನ್ನು ನೇಮಕ ಮಾಡಲು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚಿಸಿ ಅಂತಿಮ ತೀರ್ಮಾನ ಮಾಡಲಾಗುವುದು ಎಂದರು.

ಕಾರ್ಯಕ್ರಮವನ್ನು ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಉದ್ಘಾಟಿಸಿ ಮಾತನಾಡಿ, ಅಹಲ್ಯಾಬಾಯಿ ಹೋಳ್ಕರ್ ಅಪ್ಪಟ ದೇಶಭಕ್ತೆ, ಅಪ್ರತಿಮ ಹೋರಾಟಗಾರ್ತಿ. ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಹೋಳ್ಕರ್ ರಾಣಿಯಾಗಿ ಆಡಳಿತ ನಡೆಸಿ ಇತರರಿಗೆ ಮಾದರಿದರು.

ಕುರುಬ ಸಮುದಾಯದ ಸಾಮಾಜಿಕ, ಸಂಸ್ಕೃತಿ ರಕ್ಷಣೆ ಮಾಡಬೇಕು. ಸ್ವಚ್ಛ ಭಾರತ ಅಭಿಯಾನದಲ್ಲಿ ಇಂದೋರ್ ಸಿಟಿ ಮೊದಲ ಸ್ಥಾನ ಪಡೆಯುವುದಕ್ಕೆ ಹೋಳ್ಕರ್ ಅವರ ಆಡಳಿತದಲ್ಲಿ ನಡೆದ ಅಭಿವೃದ್ಧಿಯೇ ಕಾರಣ. ಅದರಂತೆ ಪ್ರಧಾನಿ ಮೋದಿ ಅವರು ಭೇಟಿ ಪಡಾವೋ ಭೇಟಿ ಬಚಾವೋ ಕಾರ್ಯಕ್ರಮವನ್ನು ತಂದಿದ್ದಾರೆ ಎಂದು ತಿಳಿಸಿದರು.

ಶೆಫರ್ಡ್ಸ್ ಇಂಡಿಯಾ ಇಂಟರ್ ನ್ಯಾಷನಲ್ ಜಿಲ್ಲಾಧ್ಯಕ್ಷ ಎಚ್.ಬೀರಪ್ಪ ಮಾತನಾಡಿ, ದೇಶದುದ್ದಗಲಕ್ಕೂ ಹರಡಿರುವ 12 ಕೋಟಿ ಕುರುಬ ಸಮುದಾಯವನ್ನು ಒಂದುಗೂಡಿಸುವ ಪ್ರಯತ್ನವಾಗಿ ಅಡಗೂರು ಹೆಚ್.ವಿಶ್ವನಾಥ್ ಅವರು ಶೆಫರ್ಡ್ಸ್ ಇಂಡಿಯಾ ಇಂಟರ್ ನ್ಯಾಷನಲ್ ಸಂಸ್ಥೆಯನ್ನು ಹುಟ್ಟು ಹಾಕಿದರು. ಆಂಧ್ರ ಮೂಲಕ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ಕುರುಬ ಸಮುದಾಯ ಸಂಘಟನೆಗೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ ಎಂದರು.

ಸಾನ್ನಿಧ್ಯವನ್ನು ಕಾಗಿನೆಲೆ ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ವಹಿಸಿದ್ದರು. ಪಾಲಿಕೆ ಮಾಜಿ ಸದಸ್ಯೆ ಕಮಲಮ್ಮ ಇನ್ನಿತರರು ಪಾಲ್ಗೊಂಡಿದ್ದರು.



ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರು ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ಮನೆಗೆ ಭೇಟಿ ನೀಡಿದಾಗ ಸಮಾನತೆ ಪ್ರಕಾಶನದ ವತಿಯಿಂದ ಹೊರತಂದಿರುವ ವಿ.ಶ್ರೀನಿವಾಸ ಪ್ರಸಾದ್ ಬರೆದಿರುವ 'ನಾನು ಎದುರಿಸಿದ 14 ಚುನಾವಣೆಗಳ ಅವಲೋಕನ' ಕೃತಿಯನ್ನು ನೀಡಿದರು. ಈ ವೇಳೆ ಸಂಸದ ಪ್ರತಾಪ್‌ಸಿಂಹ, ಭರತ್ ರಾಮಸ್ವಾಮಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಿ.ಬಸವೇಗೌಡ, ಮಾಂಬಳ್ಳಿ ನಂಜುಂಡಸ್ವಾಮಿ ಮತ್ತಿತರರು ಹಾಜರಿದ್ದರು.

ಹರದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಆತ್ಮಹತ್ಯೆಗೆ ಟ್ವಿಸ್ಟ್

ಪ್ರಚೋದನೆ ಆರೋಪದಡಿ ಮಾಜಿ ಅಧ್ಯಕ್ಷ ಎಂಸಿಡಿಸಿಸಿ ಬ್ಯಾಂಕ್ ಸಿಬ್ಬಂದಿ ವಿರುದ್ಧ ಕೇಸ್

ಸಾಲಿಗ್ರಾಮ, ಮೇ 31– ಕೆ.ಆರ್.ನಗರ ತಾಲೂಕು ಹರದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಆತ್ಮಹತ್ಯೆ ಪ್ರಕರಣಕ್ಕೆ ತಿರುವು ದೊರೆತಿದ್ದು, ಇವರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇರೆಗೆ ಸಂಘದ ಮಾಜಿ ಅಧ್ಯಕ್ಷ ರಾಮೇಗೌಡ, ಎಂಸಿಡಿಸಿಸಿ ಬ್ಯಾಂಕ್‌ನ ಕೆ.ಆರ್.ನಗರ ಶಾಖೆಯ ವೇಣುಗೋಪಾಲ್ ಮತ್ತು ಎ.ಎನ್. ನಟರಾಜ್ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ಹರದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ಟಿ.ವೆಂಕಟೇಶ್ (45) ಅವರು ಮೇ 27ರಂದು ಸೊಸೈಟಿಯ ಸ್ಟೇರ್‌ಕೇಸ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸಂಬಂಧ ಅವರ ಪತ್ನಿ ದೀಪ ನೀಡಿದ ದೂರಿನ ಮೇರೆಗೆ ಸಾಲಿಗ್ರಾಮ ಠಾಣೆಯಲ್ಲಿ ಅಸ್ವಾಭಾವಿಕ ಸಾವು ಪ್ರಕರಣ ದಾಖಲಾಗಿತ್ತು. ಮೇ 28ರಂದು ಸಹಕಾರ ಸಂಘದ ಹಿರಿಯ ನಿರೀಕ್ಷಕರಾದ ಯತೀಂದ್ರ ಅವರು ಆಗಮಿಸಿ ವೆಂಕಟೇಶ್ ಅವರ ಛೇಂಬರ್ ಅನ್ನು ತೆರೆದು ಪರಿಶೀಲನೆ ಮಾಡಿದ ವೇಳೆ ವೆಂಕಟೇಶ್ ಅವರು ಬರೆದಿದ್ದ ಡೆತ್‌ನೋಟ್ ಪತ್ತೆಯಾಗಿದೆ. ಸಂಘದ ಮಾಜಿ ಅಧ್ಯಕ್ಷ ರಾಮೇಗೌಡ ತನಗೆ ಕಳೆದ 20 ವರ್ಷದಿಂದ ಹಿಂಸೆ ನೀಡಿ, 25 ಲಕ್ಷ ರೂ. ವಸೂಲಿ ಮಾಡಿದ್ದಾರೆ. ಎಂಸಿಡಿಸಿಸಿ ಬ್ಯಾಂಕ್‌ನ ವೇಣುಗೋಪಾಲ್ ಮತ್ತು ಎ.ಎನ್. ನಟರಾಜ್ ತಮಗೆ ಮಾನಸಿಕವಾಗಿ ಹಿಂಸೆ ನೀಡಿದ್ದು, ಇವರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಡೆತ್‌ನೋಟ್‌ನಲ್ಲಿ ಅವರು ಬರೆದಿದ್ದರು. ಇದರ ಆಧಾರದ ಮೇರೆಗೆ ವೆಂಕಟೇಶ್ ಪತ್ನಿ ದೀಪ ಮತ್ತೆ ನೀಡಿದ ದೂರಿನನ್ವಯ ಪೊಲೀಸರು ರಾಮೇಗೌಡ, ವೇಣುಗೋಪಾಲ್, ನಟರಾಜ್ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಲ್ಲಿ ತಂಬಾಕು ಮುಕ್ತ ಜಾಗೃತಿ ಜಾಥಾ



ಮೈಸೂರು, ಮೇ 31(ಆರ್‌ಕೆ)– ತಂಬಾಕು ಸೇವನೆಯನ್ನು ಬಿಟ್ಟು ಮಾರಕ ರೋಗಗಳಿಂದ ದೂರವಿರುವಂತೆ ಜನ ಜಾಗೃತಿಗಾಗಿ ಮೈಸೂರಲ್ಲಿ ಜಿಲ್ಲಾಡಳಿತವು ಜಾಗೃತಿ ಜಾಥಾ ನಡೆಸಿತು.

ಜಿಲ್ಲಾ ಪಂಚಾಯ್ತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಹಯೋಗದಲ್ಲಿ ಆಯೋಜಿಸಿದ್ದ ಅರಿವಿನ ಜಾಥಾಗೆ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್.ಪ್ರಸಾದ್ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಮೈಸೂರಿನ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಹಸಿರು ನಿಶಾನೆ ತೋರಿ ಚಾಲನೆ ನೀಡಿದರು.

ಈ ಸಂದರ್ಭ ಮಾತನಾಡಿದ ದೇವರಾಜ ಭೂತೆ ಅವರು, ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮದ ಬಗ್ಗೆ ಯುವಕರು, ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿ ಮಾರಕ ರೋಗ ತಡೆಯಬೇಕು. ಅದೇ ರೀತಿ ಡ್ರಗ್ಸ್ ಸೇವನೆಯಿಂದಾಗುವ ಅಪಾಯದ ಬಗ್ಗೆಯೂ ತಿಳುವಳಿಕೆ ಮೂಡಿಸುವ ಅಗತ್ಯವಿದೆ ಎಂದರು.

ಕೆ.ಆರ್.ಸರ್ಕಲ್, ಡಿ.ದೇವರಾಜ ಅರಸು ರಸ್ತೆ ಮೂಲಕ ಸಾಗಿದ ಜಾಥಾವು ಡಿಸಿ ಕಚೇರಿ ಬಳಿ ಅಂತ್ಯಗೊಂಡಿತು. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಶಾಂತವೇರಿ ಗೋಪಾಲಗೌಡ ಆಸ್ಪತ್ರೆ, ಜೆಎಸ್‌ಎಸ್ ಆಸ್ಪತ್ರೆ ನರ್ಸ್‌ಗಳು, ಮಹಾಜನ ಕಾಲೇಜು ಎನ್‌ಸಿಸಿ ಘಟಕದ ಕೆಡೆಟ್‌ಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾ ಟಿಬಿ ಅಧಿಕಾರಿ ಡಾ. ಶಿರಾಜ್, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ಪಿ.ರವಿ, ಜಿಲ್ಲಾ ಕಾಲರಾ ನಿಯಂತ್ರಾಧಿಕಾರಿ ಡಾ.ಉಮೇಶ, ತಾಲೂಕು ವೈದ್ಯಾಧಿಕರಿ ಡಾ.ರಾಜೇಶ್ವರಿ ಸೇರಿದಂತೆ ಹಲವರಿದ್ದರು.

ಬೈಕ್-ಸ್ಕೂಟರ್ ಮುಖಾಮುಖಿ ಡಿಕ್ಕಿ: ಓರ್ವ ಸವಾರ ಸಾವು

ಮೈಸೂರು, ಮೇ 31– ಬೈಕ್ ಮತ್ತು ಸ್ಕೂಟರ್ ನಡುವೆ ಡಿಕ್ಕಿ ಸಂಭವಿಸಿ ಓರ್ವ ಸವಾರ ಮೃತಪಟ್ಟು, ಮತ್ತೋರ್ವ ತೀವ್ರವಾಗಿ ಗಾಯಗೊಂಡ ಘಟನೆ ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿ ನಡೆದಿದೆ. ಟಿವಿಎಸ್ ಜ್ಯುಪಿಟರ್ ಸ್ಕೂಟರ್ (ಕೆಎ09 ಹೆಚ್‌ಎಲ್4180)ನಲ್ಲಿ ಮಂಜುನಾಥ (22) ಎಂಬುವರು ಮೇ 29ರಂದು ಮುಂಜಾನೆ 5.10ರ ಸುಮಾರಿನಲ್ಲಿ ಹೆಚ್.ಡಿ.ಕೋಟೆ ಕಡೆಯಿಂದ ಮೈಸೂರಿಗೆ ಬರುತ್ತಿದ್ದ ವೇಳೆ ದುಷ್ಯಂತ್ (22) ಎಂಬಾತ ಪಲ್ಸರ್ ಬೈಕ್ (ಕೆಎ09 ಜೆಎಫ್4140)ನಲ್ಲಿ ಅಶೋಕಪುರಂ ಕಡೆಯಿಂದ ಬಂದಿದ್ದು ಅಂಬೇಡ್ಕರ್ ರಸ್ತೆ ಜಂಕ್ಷನ್‌ನಲ್ಲಿ ವಾಹನಗಳ ನಡುವೆ ಡಿಕ್ಕಿ ಸಂಭವಿಸಿದೆ. ಅಪಘಾತದಿಂದ ಇಬ್ಬರೂ ಸವಾರರು ತೀವ್ರವಾಗಿ ಗಾಯಗೊಂಡಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಪಲ್ಸರ್ ಸವಾರ ದುಷ್ಯಂತ್ ಅಂದೇ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ. ಈ ಸಂಬಂಧ ಕೆ.ಆರ್.ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಕೃತ್ತಿನ ರಕ್ತನಾಳ ಹೆಪ್ಪುಗಟ್ಟುವ ಕ್ರಾನಿಕ್ ಬಡ್ ಚಿಯಾರಿ ರೋಗದಿಂದ ಬಳಲುತ್ತಿದ್ದ ಮೈಸೂರಿನ ಯುವತಿ

ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವೈದ್ಯರ ಯಶಸ್ವಿ ಚಿಕಿತ್ಸೆ

ಮೈಸೂರು, ಮೇ 31(ಆರ್‌ಕೆಬಿ)– ಯಕೃತ್ತಿನ ರಕ್ತನಾಳಗಳು ಹೆಪ್ಪುಗಟ್ಟುವ ಕ್ರಾನಿಕ್ ಬಡ್ ಚಿಯಾರಿ ಎಂಬ ಅನಾರೋಗ್ಯದಿಂದ ಬಳಲುತ್ತಿದ್ದ ಮಹಿಳೆಯೊಬ್ಬರಿಗೆ ಮೈಸೂರಲ್ಲಿ ಇದೇ ಮೊದಲ ಬಾರಿ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿ ಗುಣಪಡಿಸಲಾಗಿದೆ ಎಂದು ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎಂ.ಎನ್.ರವಿ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋಂಕು ಮೊದಲಾದ ಕಾರಣಗಳಿಂದಾಗಿ ಈ ರೀತಿಯ ಸಮಸ್ಯೆಯುಂಟಾಗುತ್ತದೆ. ಯಕೃತ್ತಿನ ರಕ್ತನಾಳಗಳಲ್ಲಿ ರಕ್ತ ಚಲನೆಗೆ ಅಡ್ಡಿಯಾಗಿ, ಹೊಟ್ಟೆ ಮೊದಲಾದ ಕಡೆ ನೀರು ತುಂಬಿಕೊಳ್ಳುತ್ತದೆ. ಹೀಗಾಗಿ ರೋಗಿ ಪದೇ ಪದೆ ನೀರನ್ನು ತೆಗೆಸಬೇಕಾದ ಪ್ರಕ್ರಿಯೆಗೆ ಒಳಗಾಗ ಬೇಕಾಗುತ್ತದೆ. ಇದು ನೋವುಂಟು ಮಾಡುವ ಕ್ರಿಯೆಯಾಗಿದೆ ಎಂದು ಹೇಳಿದರು. ಈ ರೀತಿ ಬಳಲುತ್ತಿದ್ದ ಮೈಸೂರಿನ 25 ವರ್ಷದ ಯುವತಿ ಚಿಕಿತ್ಸೆ ಪಡೆದರೂ ಗುಣಮುಖರಾಗದಿದ್ದಾಗ ತಮ್ಮ ಆಸ್ಪತ್ರೆಗೆ ಬಂದರು. ಬಳಿಕ ಪರೀಕ್ಷಿಸಿದಾಗ ಅವರ ಯಕೃತ್ತಿನಲ್ಲಿ ರಕ್ತನಾಳದಲ್ಲಿ ರಕ್ತ ಚಲನೆಗೆ ಅಡ್ಡಿಯುಂಟಾಗಿದ್ದುದು ಪತ್ತೆಯಾಯಿತು. ಈ ಬಳಿಕ ಅವರಿಗೆ ಕುತ್ತಿಗೆ ಭಾಗದ ಮೂಲಕ ಸಾಧನ ಯಕೃತ್ ಬಳಿಗೆ ಹೋಗುವಂತೆ ಮಾಡಿ ಬೇರೊಂದು ರಕ್ತನಾಳದ ಮೂಲಕ ರಕ್ತ ಯಕೃತ್ತಿಗೆ ಸರಾಗವಾಗಿ ಹರಿಯುವಂತೆ ಮಾಡಲಾಗಿದೆ. ಈಗ ರೋಗಿ ಗುಣಮುಖರಾಗಿದ್ದಾರೆ. ಇದುವರೆಗೂ ಈ ರೀತಿಯ ಶಸ್ತ್ರಚಿಕಿತ್ಸೆಗೆ ಬೆಂಗಳೂರು, ಇಲ್ಲವೇ ವೆಲ್ಲೂರಿಗೆ ಹೋಗಬೇಕಾಗಿತ್ತು. ಈಗ ಮೈಸೂರಿನ ನಮ್ಮ ಆಸ್ಪತ್ರೆಯಲ್ಲೂ ಚಿಕಿತ್ಸೆ ನಡೆಸಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಡಾ.ಸತೀಶ್‌ರಾವ್, ಡಾ.ಶೈಲೇಶ್ ಪೇಣೆ ಹಾಗೂ ರೋಗಿ ಇದ್ದರು.

ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಿಂದ 215 ಹಜ್ ಯಾತ್ರಿಕರು

ಯಾತ್ರೆ ಸಂದರ್ಭದಲ್ಲಿ ಕೈಗೊಳ್ಳಬೇಕಾದ ನಿಯಮಗಳ ಕುರಿತು ಯಾತ್ರಿಕರಿಗೆ ಹಜ್ ಸಮಿತಿಯಿಂದ ತರಬೇತಿ

ಮೈಸೂರು, ಮೇ 31(ಆರ್‌ಕೆಬಿ)– ಸೌದಿ ಅರೇಬಿಯಾದ ಮದೀನಾಕ್ಕೆ ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಿಂದ ತೆರಳಲಿರುವ ಹಜ್ ಯಾತ್ರಿಕರಿಗೆ ಮಂಗಳವಾರ ರಾಜ್ಯ ಹಜ್ ಸಮಿತಿ ಮತ್ತು ಜಿಲ್ಲಾ ಹಜ್ ಸಮಿತಿಯಿಂದ ಮೈಸೂರಿನ ಆರ್.ಕೆ. ಪ್ಯಾಲೇಸ್‌ನಲ್ಲಿ ತರಬೇತಿ ನೀಡಲಾಯಿತು.

ಹಜ್ ಯಾತ್ರಿಕರು ಪ್ರಯಾಣದ ಸಂದರ್ಭದಲ್ಲಿ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ತೆಗೆದುಕೊಂಡು ಹೋಗಬೇಕಾದ ವಸ್ತುಗಳು ಇನ್ನಿತರ ಹಜ್ ನಿಯಮಗಳ ಕುರಿತು ಯಾತ್ರಿಕರಿಗೆ ಮಾಹಿತಿ ನೀಡಲಾಯಿತು.

ಕೋವಿಡ್ ಕಾರಣದಿಂದಾಗಿ ಈ ಬಾರಿ ಹಜ್ ಯಾತ್ರಿಕರ ಸಂಖ್ಯೆಯನ್ನು ಸೌದಿ ಅರೇಬಿಯಾ ಸರ್ಕಾರ ಕಡಿತಗೊಳಿಸಿರುವ ಹಿನ್ನೆಲೆಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಿಂದ ಒಟ್ಟು 215 ಮಂದಿ ಯಾತ್ರಿಕರಿಗೆ ಮಾತ್ರ ಹಜ್ ಯಾತ್ರೆಗೆ ಅವಕಾಶ ದೊರೆತಿದೆ.

ಮೈಸೂರಿನ ಸರ್‌ಖಾಜಿ ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಜ್ಯ ಹಜ್ ಸಮಿತಿ ಸದಸ್ಯರಾದ ಖುಸ್ರೋ ಖುರೇಷಿ, ಮೊಹಮ್ಮದ್ ಮೋಯಿನುದ್ದೀನ್, ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಮೈಸೂರು ಘಟಕದ ಅಧ್ಯಕ್ಷ ಹಜರತ್ ಮೌಲಾನಾ ಮೊಹಮದ್ ಜಕಾಉಲ್ಲಾ ಸಿದ್ಧಿಖಿ, ಮುಸ್ಲಿಂ ಗರ್ಲ್ಸ್ ಆರ್ಫನೇಜ್ ಕಾರ್ಯದರ್ಶಿ ಅಬ್ದುಲ್ ಅಜೀಜ್ ಚಾಂದ್, ಹಜ್ ಸಮಿತಿಯ ವೈದ್ಯಾಧಿಕಾರಿ ಡಾ.ಮೊಹಮ್ಮದ್ ಅಮೀನ್,



ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಿಂದ ಹಜ್ ಯಾತ್ರೆಗೆ ತೆರಳುತ್ತಿರುವ ಯಾತ್ರಿಕರಿಗೆ ಹಜ್ ಸಮಿತಿ ವತಿಯಿಂದ ಮೈಸೂರಿನಲ್ಲಿ ಸರ್‌ಖಾಜಿ ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಅಧ್ಯಕ್ಷತೆಯಲ್ಲಿ ನೀಡಲಾದ ತರಬೇತಿ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯ ಹಜ್ ಸಮಿತಿ ಸದಸ್ಯರಾದ ಖುಸ್ರೋ ಖುರೇಷಿ, ಮೊಹಮ್ಮದ್ ಮೋಯಿನುದ್ದೀನ್ ಇನ್ನಿತರರು ಉಪಸ್ಥಿತರಿದ್ದರು.

ಅಮಾನ್, ಅಲ್ ಖಲಿದ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮೊಹಮ್ಮದ್ ಮುಮ್ತಾಜ್ ಅಹಮದ್, ಜಾಮಿಯಾ ಟಿಪ್ಪು ಕಾರ್ಯದರ್ಶಿ ಸೈಯ್ಯದ್ ಯುನೂಸ್, ತಹಫಾಜ್ ಖಬ್ರಸ್ತಾನ್ ಸಮಿತಿ ಸದಸ್ಯ ರಫೀಕ್ ಅಹಮದ್, ಹಂಗಾಮಿ ಉಪಮೇಯರ್ ಅನ್ವರ್ ಬೇಗ್, ಜಮೀಲ್ ಅಹಮದ್ ಅಶ್ರಫಿ, ಮೌಲಾನಾ ಸಯ್ಯದ್ ತಾಜುದ್ದೀನ್, ಮೌಲಾನಾ ಷಾವಲಿ ಉಲ್ಲಾ ಇನ್ನಿತರರು ಹಜ್ ಯಾತ್ರಿಕರಿಗೆ ಸಲಹೆ, ಸೂಚನೆ ಮತ್ತು ಯಾತ್ರೆ ಸಂದರ್ಭದಲ್ಲಿ ಪಾಲಿಸಬೇಕಾದ ನಿಯಮಗಳ ಕುರಿತು ಮಾಹಿತಿ ನೀಡಿದರು.

ರಾಜ್ಯ ಹಜ್ ಸಮಿತಿ ಸದಸ್ಯ ಖುಸ್ರೋ ಖುರೇಷಿ ಮಾತನಾಡಿ, ಈಗಾಗಲೇ ಹಜ್‌ಗೆ ತೆರಳುವ ರಾಜ್ಯದ ಯಾತ್ರಿಕರಿಗೆ ತರಬೇತಿ ನೀಡಲಾಗಿದೆ. ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಿಂದ 215 ಮಂದಿ ಯಾತ್ರೆಗೆ ತೆರಳುತ್ತಿದ್ದು, ಈ ಬಾರಿ ಎಲ್ಲಾ ಯಾತ್ರಿಕರು ಬೆಂಗಳೂರಿಂದಲೇ ವಿಮಾನದ ಮೂಲಕ ತೆರಳುವಂತೆ ಏರ್ಪಾಡು ಮಾಡಲಾಗಿದೆ. ಹಜ್ ಯಾತ್ರಿಕರ ಉಸ್ತುವಾರಿಯನ್ನು ಕೇಂದ್ರ ಮತ್ತು ರಾಜ್ಯ ಹಜ್ ಸಮಿತಿ ತೆಗೆದುಕೊಂಡು, ಎಲ್ಲಾ ವ್ಯವಸ್ಥೆ ಮಾಡಲಾಗಿದೆ ಎಂದರು.

ರಾಜ್ಯ ಹಜ್ ಸಮಿತಿ ವೈದ್ಯಾಧಿಕಾರಿ ಡಾ. ಮಹಮ್ಮದ್ ಅಮೀನ್ ಮಾತನಾಡಿ, ಕೋವಿಡ್ ಮುನ್ನೆಚ್ಚರಿಕೆ ಹಿನ್ನೆಲೆಯಲ್ಲಿ ಹಜ್‌ಗೆ ತೆರಳಲಿರುವ ಯಾತ್ರಿಕರಿಗೆ ಮಾಸ್ಕ್ ಕಡ್ಡಾಯವಿದೆ. ಜೊತೆಗೆ ಯಾತ್ರಿಕರು ತಮ್ಮ ಆರೋಗ್ಯಕ್ಕೆ ಸಂಬಂಧಿಸಿದ ಮಾತ್ರೆಗಳು ಇನ್ನಿತರೆ ಔಷಧಿಗಳನ್ನು ಜೊತೆಯಲ್ಲಿ ಕೊಂಡೊಯ್ಯಬೇಕು. ಸಕ್ಕರೆ ಕಾಯಿಲೆ, ರಕ್ತದೊತ್ತಡ ಸೇರಿದಂತೆ ವಿವಿಧ ಕಾಯಿಲೆ ಇರುವವರು ತಮ್ಮ ಔಷಧಿಗಳನ್ನು ಜೊತೆಯಲ್ಲಿಯೇ ಕೊಂಡೊಯ್ಯಬೇಕು ಎಂದು ಸಲಹೆ ನೀಡಿದರು. ಮಧುಮೇಹ ಕಾಯಿಲೆ ಉಳ್ಳವರಿಗೆ ಪ್ರಯಾಣದ ವೇಳೆ ಸಕ್ಕರೆ ಪ್ರಮಾಣ ಕಡಿಮೆಯಾದರೆ ನಿಮ್ಮನ್ನು ನೀವು ಹೇಗೆ ಸರಿಪಡಿಸಿಕೊಳ್ಳಬೇಕು. ಬಿಸಿಲ ಬೇಗೆಯಿಂದ ದೇಹದಲ್ಲಿ ನಿರ್ಜಲೀಕರಣ ಉಂಟಾದರೆ ಅದನ್ನು ಸಹ ಬಗೆಹರಿಸಿಕೊಳ್ಳಬೇಕು. ಯಾವ ಯಾವ ಔಷಧಿಗಳನ್ನು ಕೊಂಡೊಯ್ಯಬೇಕು. ಆರೋಗ್ಯದ ನಿಯಮಗಳನ್ನು ಹೇಗೆ ಪಾಲಿಸಬೇಕು ಎಂಬಿತ್ಯಾದಿ ಮಾಹಿತಿಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ಬಾಬು ಸೇಠ್, ಇರ್ಫಾನ್, ಫಾಜಿಲ್ ಇನ್ನಿತರರು ಉಪಸ್ಥಿತರಿದ್ದರು.

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಶಿಬಿರ ಸಮಾರೋಪ

ಪರೀಕ್ಷೆ ಸಿದ್ಧತೆ ಬಗ್ಗೆ ಐಪಿಎಸ್ ಅಧಿಕಾರಿ ರವಿ ಡಿ.ಚನ್ನಣ್ಣನವರ್ ಮಾರ್ಗದರ್ಶನ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ನಡೆದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಐಪಿಎಸ್ ಅಧಿಕಾರಿ ರವಿ ಡಿ.ಚೆನ್ನಣ್ಣನವರ್ ಶಿಬಿರದ ಹೊತ್ತಿಗೆ ಬಿಡುಗಡೆ ಮಾಡಿದರು.

ಮೈಸೂರು, ಮೇ 31(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಕಳೆದ 50 ದಿನಗಳಿಂದ ನಡೆಯುತ್ತಿದ್ದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಶಿಬಿರ (ಮಂಗಳವಾರ) ಸಮಾರೋಪಗೊಂಡಿತು.

ಮುಕ್ತ ವಿಶ್ವವಿದ್ಯಾನಿಲಯದ ಗಂಗಾ ಸಭಾಂಗಣದಲ್ಲಿ ನಡೆದ ಐಎಎಸ್, ಕೆಎಎಸ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಐಪಿಎಸ್ ಅಧಿಕಾರಿ ರವಿ ಡಿ.ಚನ್ನಣ್ಣನವರ್ ಉದ್ಘಾಟಿಸಿ ಸ್ಪರ್ಧಾತ್ಮಕ ಪರೀಕ್ಷೆಗೆ ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ನೀಡಿದರು.

ಪ್ರತಿ ವ್ಯಕ್ತಿಯ ಬದುಕಿನಲ್ಲಿ ಎರಡು ರೀತಿಯ ಸೋಂಕುಗಳಿರುತ್ತವೆ. ಒಂದು ನಕರಾತ್ಮಕ ಸೋಂಕು, ಮತ್ತೊಂದು ಸಕಾರಾತ್ಮಕ ಸೋಂಕು. ದುಶ್ಚಟ, ಸಮಯ ವ್ಯರ್ಥ ಇವು ನಕರಾತ್ಮಕ ಸೋಂಕಾಗಿದ್ದರೆ, ಪುಸ್ತಕ ಹಿಡಿಯುವುದು, ಒಳ್ಳೆಯ ಸ್ನೇಹಿತರ ಒಡನಾಟ ಹೊಂದುವುದು ಸಕಾರಾತ್ಮಕ ಅಂಶವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಅಭ್ಯರ್ಥಿಗಳಿಗೆ ವೇಳಾಪಟ್ಟಿ ಅತ್ಯಗತ್ಯ. ವೇಳಾಪಟ್ಟಿ ಇಲ್ಲದಿದ್ದರೆ ಯಶಸ್ಸು ಅಸಾಧ್ಯ. ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗದೇ ಬದುಕೇ ಇಲ್ಲ ಎಂದು ಗಟ್ಟಿ ಮನಸ್ಸು ಮಾಡಿದವರು ಒಂದೇ ವರ್ಷದಲ್ಲೇ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾರೆ. ಅದಕ್ಕೆ ಚಿರತೆಯಿಂದ ತಪ್ಪಿಸಿಕೊಳ್ಳಲು ಓಡುವ ಜಿಂಕೆಯಂತೆ ಶ್ರಮ ಪಡಬೇಕಾಗಿದೆ ಎಂದು ರವಿ ಡಿ.ಚನ್ನಣ್ಣನವರ್ ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಬಯಸಿರುವ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಆದ್ಯತೆ ನೀಡಬೇಕು. ತದನಂತರ 10 ವರ್ಷಗಳ ಪ್ರಶ್ನೆ ಪತ್ರಿಕೆ ಅಭ್ಯಾಸ ಮಾಡಬೇಕು. ಅನಂತರ ಸಾಮಾನ್ಯ ಜ್ಞಾನ ಪತ್ರಿಕೆ ಬಗ್ಗೆ ಗಮನ ಹರಿಸಬೇಕು. ಆಗಿದಾಂಗ ಪುನರ್ ಮನನ ಹಾಗೂ ಅಧ್ಯಯನ ಮಾಡಬೇಕು. ಎಲ್ಲ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವವರಿಗೆ ಈ ಸೂತ್ರ ಅವಶ್ಯ. ಸ್ವಾಮಿ ವಿವೇಕಾನಂದರು ಸ್ವರ್ಗಕ್ಕೆ ದಾರಿಯಿದ್ದರೆ ನರಕದ ಮೂಲಕವೇ ಎಂದು ಹೇಳಿದ್ದಾರೆ. ಸಣ್ಣ ಹುದ್ದೆಗೆ ಸಣ್ಣ ಸಿದ್ಧತೆ, ದೊಡ್ಡ ಹುದ್ದೆಗೆ ದೊಡ್ಡಮಟ್ಟದ ಸಿದ್ಧತೆ ಮಾಡಿಕೊಳ್ಳಬೇಕು. ಉತ್ತಮ ಸಮಾಜ ನಿರ್ಮಿಸುವ ಕನಸು ಹೊಂದಿದ ಮಾ ಉನ್ನತ ಹುದ್ದೆ ಪಡೆಯುವ ಗುರಿ ಹೊಂದಿರಬೇಕು ಎಂದು ಸಲಹೆ ನೀಡಿದರು.

ಮುಕ್ತ ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಮಾತನಾಡಿ, ಸಾಧನೆ ಯಾರೊಬ್ಬರ ಸ್ವತ್ತಲ್ಲ. ಸಾಧನೆಗೆ ಅನೇಕ ಏಳುಬೀಳು ಇರುತ್ತವೆ. ಅವುಗಳನ್ನು ಧೈರ್ಯದಿಂದ ಎದುರಿಸಿದರೆ ಗುರಿ ಸಾಧಿಸಬಹುದು. ಸೋಮವಾರ ಪ್ರಕಟವಾದ ಯುಪಿಎಸ್ ಸಿ ಪರೀಕ್ಷೆಯಲ್ಲಿ ಜಟಕಾವಾಲನ ಮಗ ಉತ್ತೀರ್ಣನಾಗಿದ್ದಾನೆ. ಹಾಗಾಗಿ ಯಾರು ಬೇಕಾದರೂ ಸಾಧಿಸ ಬಹುದು. ನಿರಂತರ ಪ್ರಯತ್ನ, ಗಟ್ಟಿ ಮನಸ್ಸು ಮಾಡಿ ಅಧ್ಯಯನ ನಡೆಸಿದರೆ ಶ್ರಮಕ್ಕೆ ತಕ್ಕ ಫಲಿತಾಂಶ ಲಭಿಸುತ್ತದೆ. ಪೂರ್ವ ತಯಾರಿ ಆಧಾರದ ಮೇಲೆ ತಮ್ಮ ಅಧಿಕಾರ, ಸ್ಥಾನಮಾನಗಳು ದೊರೆಯುತ್ತದೆ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುಲಸಚಿವ ಪ್ರೊ.ಆರ್.ರಾಜಣ್ಣ, ಹಣಕಾಸು ಅಧಿಕಾರಿ ಡಾ.ಎ.ಖಾದರ್ ಪಾಷ, ಕೇಂದ್ರದ ಸಂಯೋಜನಾಧಿಕಾರಿ ಸತ್ಯನಾರಾಯಣಗೌಡ ಉಪಸ್ಥಿತರಿದ್ದರು.

ಜೇಷ್ಠತೆ, ಮೀಸಲು ಆಧಾರಿತ ಪ್ರವೇಶಗಳಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 31– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ವತಿಯಿಂದ ಎಸ್.ಎಸ್.ಎಲ್.ಸಿ ಪಾಸಾದ ಅಭ್ಯರ್ಥಿಗಳ ಆಗಸ್ಟ್ 2022ನೇ ಸಾಲಿಗೆ CTS ವಿಭಾಗದಲ್ಲಿ ಜೇಷ್ಠತೆ ಹಾಗೂ ಮೀಸಲು (ಮೆರಿಟ್ ಕಮ್ ರಿಸರ್ವೇಶನ್) ಆಧಾರಿತ ಪ್ರವೇಶಗಳಿಗಾಗಿ ಆಫ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು 6 ಕೊನೆಯ ದಿನಾಂಕ. ಆಸಕ್ತ ಅಭ್ಯರ್ಥಿಗಳು ಕಚೇರಿಯನ್ನು ಸಂಪರ್ಕಿಸಿ ಅರ್ಜಿ ಪಡೆದು ಸಲ್ಲಿಸಲು ಕೋರಿದೆ. ಸಂಸ್ಥೆಯಲ್ಲಿ CTS ವಿಭಾಗದಲ್ಲಿ ಫಿಟ್ಟರ್ 16+4 ಸ್ಥಾನಗಳು ಟರ್ನರ್ 16+4 ಸ್ಥಾನಗಳು ಕೊಪ 20+4, ಸ್ಟೆನೋಗ್ರಾಫಿ 20+4 ಸ್ಥಾನಗಳನ್ನು ಮೀಸಲಿಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಪ್ರಾಚಾರ್ಯರನ್ನು ಸಂಪರ್ಕಿಸಬಹುದು ಅಥವಾ ದೂ. ಸಂ. 0821–2950951 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಗವದ್ಗೀತೆಯ ಸಂದೇಶ ಸಾರುತ್ತಿರುವ ಗಣಪತಿ ಸಚ್ಚಿದಾನಂದ ಶ್ರೀಗಳ ಕಾರ್ಯ ಶ್ಲಾಘನೀಯ

●ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅಭಿಮತ ●ಶ್ರೀಗಳ ವರ್ಧಂತಿ ಸೇರಿ ವಿವಿಧ ಕಾರ್ಯಕ್ರಮಗಳಿಗೆ ತೆರೆ ●ಸಾಧಕರಿಗೆ ದತ್ತಪೀಠದಿಂದ ಪ್ರಶಸ್ತಿ ಪ್ರದಾನ



ಮೈಸೂರಿನ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ದತ್ತಪೀಠದ ವತಿಯಿಂದ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. (ಎಡದಿಂದ) ಆಸ್ಥಾನ ವಿದ್ವಾನ್ ಪ್ರಶಸ್ತಿ ಪುರಸ್ಕೃತರಾದ ವಿಜಯವಾಡದ ಚಿಂತಪಲ್ಲಿ ಆಂಜನೇಯ ಘನಪಾಠಿ, ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್, ಹಿಮಾಚಲ ಪ್ರದೇಶದ ಜ್ವಾಲಾಮುಖಿ ದೇವಸ್ಥಾನದ ಹಿಮಾಂಶು ಭೂಷಣ್ ದತ್, ಪ್ರವಚನ ನಿಧಿ ಪ್ರಶಸ್ತಿ ಪುರಸ್ಕೃತ ತಿರುಮಲ ತಿರುಪತಿ ದೇವಸ್ಥಾನದ ಅಖಂಡ ವಿಭೂಷಣ ಶರ್ಮ, ಸನ್ಮಾನಿತರಾದ ತಿರುಪತಿ ದೇವಸ್ಥಾನದ ಜಂಟಿ ಕಾರ್ಯನಿರ್ವಾಹಕ ಅಧಿಕಾರಿ ವಿ.ವೀರಬ್ರಹ್ಮಯ್ಯ, ದೇವಸ್ಥಾನದ ಅಧ್ಯಕ್ಷ ವೈ.ವಿ.ಸುಬ್ಬಾರೆಡ್ಡಿ ಅವರ ಪತ್ನಿ ಸ್ವರ್ಣಲತಾ ರೆಡ್ಡಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ, ಮಿಜೋರಾಂ ಮಾಜಿ ರಾಜ್ಯಪಾಲ ಕುಮ್ಮನಂ ರಾಜಶೇಖರನ್, ಆಸ್ಥಾನ ವಿದುಷಿ ಪ್ರಶಸ್ತಿ ಪುರಸ್ಕೃತರಾದ ಚೆನ್ನೈನ ಪುಣ್ಯಾ ಶ್ರೀನಿವಾಸ್, ಶುಕವನ ಪ್ರಶಸ್ತಿ ಪುರಸ್ಕೃತ ಚೆನ್ನೈನ ಶರಣವನ್ ಕೃಷ್ಣಸ್ವಾಮಿ ಚಿತ್ರದಲ್ಲಿದ್ದಾರೆ.

ಮೈಸೂರು,ಮೇ 31(ಪಿಎಂ)– ಭಗವದ್ಗೀತೆ ಕೇವಲ ಒಂದು ಧರ್ಮಕ್ಕೆ ಸೀಮಿತವಲ್ಲ. ಮನುಷ್ಯರಾದ ನಾವೆಲ್ಲರೂ ಗೀತೆಯ ಸಾರವನ್ನು ತಿಳಿದು ಅನುಸರಿಸಬೇಕೆಂದು ಕರೆ ನೀಡಿದ ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಇಂತಹ ಮಹತ್ವ ಹೊಂದಿರುವ ಭಗವದ್ಗೀತೆಯ ಸಂದೇಶಗಳನ್ನು ಪ್ರಚಾರ ಮಾಡುತ್ತಿದ್ದು, ಇದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ದತ್ತಪೀಠದ ಸಂಸ್ಥಾಪಕರಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತಿ (ಜನ್ಮದಿನ), ಶ್ರೀಗಳ ಮಾತೃಶ್ರೀ ಜಯಲಕ್ಷ್ಮೀ ಮಾತೆಯವರ ಜನ್ಮ ಶತಮಾನೋತ್ಸವ, ನಾದಮಂಟಪದ 24ನೇ ವಾರ್ಷಿಕೋತ್ಸವದ ಸಮಾರೋಪ ಮತ್ತು ವಿವಿಧ ಕ್ಷೇತ್ರಗಳ ಗಣ್ಯರ ಸನ್ಮಾನ (ಪ್ರಶಸ್ತಿ) ಕಾರ್ಯಕ್ರಮ 'ಚೈತನ್ಯಾರ್ಚನೆ'ಯಲ್ಲಿ ಪಾಲ್ಗೊಂಡು ಶ್ರೀಗಳಿಗೆ ಜನ್ಮದಿನದ ಶುಭಾಶಯ ಕೋರಿ, ಅವರ ಆಶೀರ್ವಾದ ಪಡೆದು ಮಾತನಾಡಿದರು.

ಇಡೀ ವಿಶ್ವದಲ್ಲಿ ಗಣಪತಿ ಸಚ್ಚಿದಾನಂದ ಶ್ರೀಗಳು ಭಾರತೀಯ ಸಂಸ್ಕೃತಿ ಹಾಗೂ ಧರ್ಮ ಪ್ರಚಾರ ಮಾಡುತ್ತಿದ್ದಾರೆ. ವಿವಿಧ ದೇಶಗಳಲ್ಲಿ ಶ್ರೀಗಳು ದೇವಾಲಯಗಳನ್ನೂ ನಿರ್ಮಿಸಿದ್ದಾರೆ. ಆಧ್ಯಾತ್ಮಿಕ ಪರಂಪರೆಯನ್ನು ಅವರು ಬಿಂಬಿಸುತ್ತಿದ್ದಾರೆ. ಶ್ರೀಗಳು ಅದ್ಭುತವಾದ ಸೇವಾ ಕಾರ್ಯಗಳನ್ನು ಮಾಡುತ್ತಿದ್ದಾರೆ. ಆರೋಗ್ಯ ಶಿಬಿರ ಏರ್ಪಡಿಸಿ, ಸಾವಿರಾರು ಮಂದಿಗೆ ನೆರವಾಗಿದ್ದಾರೆ. ನಾದಮಂಟಪದಲ್ಲಿ ಕಲಾವಿದರು, ವಿದ್ವಾಂಸರು, ಸಂಗೀತಗಾರರು ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸಿದ್ದಾರೆ. ಇದು ಅತ್ಯಂತ ಒಳ್ಳೆಯ ಕಾರ್ಯ. ಶ್ರೀಗಳು ಧರ್ಮ ಪ್ರಚಾರಕರಷ್ಟೇ ಸೀಮಿತವಾಗಿಲ್ಲ. ಸಮಾಜ ಸೇವೆ ಮೂಲಕ ಸಮಾಜೋದ್ಧಾರಕರಾಗಿದ್ದಾರೆ ಎಂದು ನುಡಿದರು.

ಆಶ್ರಮದಲ್ಲಿ ಶುಕವನ, ಬೋನ್ಸಾಯ್ ಗಾರ್ಡನ್, ಅಶ್ವಶಾಲ, ವೇದಪಾಠ ಶಾಲೆ ಮತ್ತು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಇದನ್ನೆಲ್ಲ ನೋಡಿದರೆ ಈ ಆಶ್ರಮ ಭಾರತೀಯ ಆಧ್ಯಾತ್ಮಿಕ ಶಕ್ತಿ ಕೇಂದ್ರವಾಗಿ ಕಾಣಲಿದೆ ಎಂದು ಬಣ್ಣಿಸಿದರು.

ಇದಕ್ಕೂ ಮುನ್ನ ವಿವಿಧ ಕ್ಷೇತ್ರಗಳ ಸಾಧಕರಿಗೆ ಅವಧೂತ ದತ್ತಪೀಠದ ವತಿಯಿಂದ ಆಸ್ಥಾನ ವಿದ್ವಾನ್, ಪ್ರವಚನ ನಿಧಿ ಮತ್ತು ಶುಕವನ ಪ್ರಶಸ್ತಿಗಳನ್ನು ನೀಡಿ ಶ್ರೀಗಳು ಸನ್ಮಾನಿಸಿದರು. ಹಿಮಾಚಲ ಪ್ರದೇಶದ ಜ್ವಾಲಾಮುಖಿ ದೇವಸ್ಥಾನದ ಹಿಮಾಂಶು ಭೂಷಣ್ ದತ್, ಮೈಸೂರಿನ ಎನ್.ಶಶಿಶೇಖರ ದೀಕ್ಷಿತ್ (ಶೈವಾಗಮ–ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕರು), ವಿಜಯವಾಡದ ಚಿಂತಪಲ್ಲಿ ಆಂಜನೇಯ ಘನಪಾಠಿ (ವೇದ) ಅವರಿಗೆ 'ಆಸ್ಥಾನ ವಿದ್ವಾನ್', ಚೆನ್ನೈನ ಪುಣ್ಯಾ ಶ್ರೀನಿವಾಸ್ (ವೀಣೆ) ಅವರಿಗೆ 'ಆಸ್ಥಾನ ವಿದುಷಿ', ತಿರುಮಲ ತಿರುಪತಿ ದೇವಸ್ಥಾನದ ಅಖಂಡ ವಿಭೂಷಣಶರ್ಮ ಅವರಿಗೆ 'ಪ್ರವಚನ ನಿಧಿ' ಮತ್ತು ಚೆನ್ನೈನ ಶರಣ ವನ್ ಕೃಷ್ಣಸ್ವಾಮಿ ಅವರಿಗೆ 'ಶುಕವನ' ಪ್ರಶಸ್ತಿಗಳನ್ನು ನೀಡಿ, ಗೌರವಿಸಲಾಯಿತು.

ಅಲ್ಲದೆ, ಮಿಜೋರಾಂ ಮಾಜಿ ರಾಜ್ಯಪಾಲ ಕುಮ್ಮನಂ ರಾಜಶೇಖರನ್, ತಿರುಮಲ ತಿರುಪತಿ ದೇವಸ್ಥಾನದ ಅಧ್ಯಕ್ಷ ವೈ.ವಿ.ಸುಬ್ಬಾರೆಡ್ಡಿ ಅವರ ಪತ್ನಿ ಸ್ವರ್ಣಲತಾ ರೆಡ್ಡಿ ಮತ್ತು ತಿರುಮಲ ತಿರುಪತಿ ದೇವಸ್ಥಾನದ ಜಂಟಿ ಕಾರ್ಯನಿರ್ವಾಹಕ ಅಧಿಕಾರಿ ವಿ.ವೀರಬ್ರಹ್ಮಯ್ಯ ಅವರನ್ನು ಸನ್ಮಾನಿಸಲಾಯಿತು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಅನುಗ್ರಹ ಆಶೀರ್ವಚನ ನೀಡಿದರು. ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಸೇವಾ–ಸನ್ಮಾನ, ಧಾರ್ಮಿಕ ಕೈಂಕರ್ಯದ ವೈವಿಧ್ಯಮಯ ಕಾರ್ಯಕ್ರಮಗಳ 10 ದಿನಗಳ

ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ವರ್ಧಂತಿ ಉತ್ಸವಕ್ಕೆ ತೆರೆ

ಮೈಸೂರು, ಮೇ 31(ಪಿಎಂ)– ಸೇವಾ–ಸನ್ಮಾನ, ಧಾರ್ಮಿಕ ಕೈಂಕರ್ಯ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ 10 ದಿನಗಳ ಕಾಲ ಜರುಗಿದ ಮೈಸೂರಿನ ಅವಧೂತ ದತ್ತಪೀಠದ ಶ್ರೀಗಣಪತಿ ಸಚ್ಚಿದಾನಂದ ಆಶ್ರಮದ ಸಂಸ್ಥಾಪಕರಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ವರ್ಧಂತಿ ಉತ್ಸವಕ್ಕೆ ಮಂಗಳವಾರ ತೆರೆ ಬಿದ್ದಿತು.

ಆಶ್ರಮದ ನಾದ ಮಂಟಪದಲ್ಲಿ ಮೇ 22ರಂದು ಶ್ರೀಗಳ 80ನೇ ವರ್ಧಂತಿ (ಜನ್ಮದಿನ), ಶ್ರೀಗಳ ಮಾತೃಶ್ರೀ ಜಯಲಕ್ಷ್ಮೀ ಮಾತೆಯವರ ಜನ್ಮ ಶತಮಾನೋತ್ಸವ ಹಾಗೂ ನಾದ ಮಂಟಪದ 24ನೇ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳಿಗೆ ಅಧಿಕೃತ ಚಾಲನೆ ನೀಡಲಾಯಿತು. ಅಂದು ಪ್ರಧಾನಿ ನರೇಂದ್ರ ಮೋದಿಯವರು ವರ್ಚ್ಯುವಲ್ ಮೂಲಕ ಶ್ರೀಗಳಿಗೆ ಶುಭಕಾಮನೆ ಸಲ್ಲಿಸಿ, ಮಾತನಾಡಿದ್ದರು. ಆಶ್ರಮ ಆವರಣದಲ್ಲಿ 63 ಅಡಿ ಎತ್ತರದಲ್ಲಿ ಭವ್ಯವಾಗಿ ನಿರ್ಮಿಸಿರುವ ನೂತನ ಹನುಮ ದ್ವಾರ (ಮುಖ್ಯದ್ವಾರ) ಅಂದೇ ಉದ್ಘಾಟನೆಗೊಂಡಿತು.

ಮೇ 31ರವರೆಗೂ ಆಶ್ರಮದ ನಾದಮಂಟಪದಲ್ಲಿ ಬೆಳಗಿನಿಂದ ಸಂಜೆಯವರೆಗೆ ವಿಶೇಷ ಕಾರ್ಯಕ್ರಮಗಳು ಜರುಗಿದವು. ಬಹುತೇಕ ಉತ್ಸವದ ಎಲ್ಲಾ ದಿನಗಳಲ್ಲಿ ನಡೆದ ಚೈತನ್ಯಾರ್ಚನೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರು, ವಿದ್ವಾಂಸರಿಗೆ ಅವಧೂತ ದತ್ತಪೀಠದಿಂದ ವಿವಿಧ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಯಿತು. ಮೈಸೂರು ಮಾತ್ರವಲ್ಲದೆ, ದೇಶ–ವಿದೇಶಗಳ ಸಾಧಕರು ಪೀಠದ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾದರು. ಪ್ರತಿದಿನ ಸಂಜೆ ಸಂಗೀತ, ನೃತ್ಯ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ನಾದ ಮಂಟಪ ಸಾಕ್ಷಿಯಾಯಿತು. ಮೇ 22ರಿಂದ ಇಂದಿನವರೆಗೂ ಆಶ್ರಮದ ಆವರಣದಲ್ಲಿರುವ ಆಯುರ್ವೇದ ಮತ್ತು ಅಲೋಪತಿ ಆಸ್ಪತ್ರೆ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ, ಸಹಸ್ರಾರು ಜನರಿಗೆ ನೆರವಾಗ ಲಾಯಿತು. ನೇತ್ರ ತಪಾಸಣಾ ಶಿಬಿರ ಏರ್ಪಡಿಸಿ ಅರ್ಹರಿಗೆ ಶಸ್ತ್ರಚಿಕಿತ್ಸೆಗೂ ವ್ಯವಸ್ಥೆ ಮಾಡಿ, ಅಗತ್ಯ ಇದ್ದವರಿಗೆ ಕನ್ನಡಕಗಳನ್ನು ವಿತರಿಸಲಾಯಿತು. ಅಲ್ಲದೆ, ಸಾವಿರಾರು ಮಂದಿಗೆ ವಸ್ತ್ರ ದಾನ ಮಾಡಲಾಯಿತು.

ಆಶ್ರಮದಲ್ಲಿ ಪ್ರತಿದಿನವೂ ಅನ್ನದಾನ ಸೇವೆ ನಡೆಯಿತು. ಅಲ್ಲದೆ, 12 ಲಕ್ಷ ರೂ. ಅಧಿಕ ಮೊತ್ತದ ವಿವಿಧ ಉಪಕರಣಗಳನ್ನು ವಿಶೇಷ ಚೇತರು ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತವಾಗಿ ವಿತರಣೆ ಮಾಡಲಾಯಿತು. ದೇಶ–ವಿದೇಶಗಳಿಂದ ಸಾವಿರಾರು ಭಕ್ತರು ಆಗಮಿಸಿ, ಶ್ರೀಗಳಿಗೆ ಶುಭಾಶಯ ತಿಳಿಸಿ, ಆಶೀರ್ವಾದ ಪಡೆದರು. ಅಲ್ಲದೆ ದೇಶದ ವಿವಿಧ ಮಠಾಧಿಪತಿಗಳು ಆಗಮಿಸಿ, ಧರ್ಮ ಸಭೆಯಲ್ಲಿ ಪಾಲ್ಗೊಂಡಿದ್ದರಲ್ಲದೆ, ಶ್ರೀಗಳಿಗೆ ಜನ್ಮದಿನದ ಶುಭ ಕೋರಿದರು.

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿಬೇನ್ ಪಟೇಲ್, ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ, ಕರ್ನಾಟಕ ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸೇರಿದಂತೆ ರಾಜಕೀಯ ಮುಖಂಡರು, ವಿವಿಧ ಸಮುದಾಯದ ಮುಖಂಡರು, ಆಶ್ರಮಕ್ಕೆ ಆಗಮಿಸಿ ಶ್ರೀಗಳಿಗೆ ಶುಭಾಶಯ ಕೋರಿ ಆಶೀರ್ವಾದ ಪಡೆದರು.

ಭಕ್ತರ ಇಚ್ಛೆಯಂತೆ 750 ಕೆಜಿ ತೂಕದ ಪಂಚ ಲೋಹದ ಪಲ್ಲಕ್ಕಿಯಲ್ಲಿ ಶ್ರೀಗಳ ಮೆರವಣಿಗೆ ವೈಭವದಿಂದ ಜರುಗಿತು. ಅಲ್ಲದೆ ಮೇ 13ರಿಂದ 18ರವರೆಗೆ ದತ್ತಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಶ್ರೀಗಳ ಜನ್ಮದಿನೋತ್ಸವದ ಪ್ರಯುಕ್ತ ಸ್ವಾಮೀಜಿಯವರ ಜನ್ಮಸ್ಥಳವಾದ ಮೇಕೆದಾಟಿನಿಂದ ಮೈಸೂರು ಆಶ್ರಮದವರೆಗೆ ವಿಶ್ವಶಾಂತಿ ಪಾದಯಾತ್ರೆ ನಡೆಸಿದರು. ಒಟ್ಟಾರೆ ಉತ್ಸವವು ಸಾರ್ಥಕ ಸೇವಾ ಕಾರ್ಯಗಳೊಂದಿಗೆ ಅಪೂರ್ವ ಕಾರ್ಯಕ್ರಮಗಳಿಗೆ ಸಾಕ್ಷಿಯಾಯಿತು.

ಸ್ವಾಮಿ ವಿವೇಕಾನಂದರ ಧ್ಯೇಯದಂತೆ ಗಣಪತಿ ಸಚ್ಚಿದಾನಂದ ಶ್ರೀಗಳಿಂದ ಭಾರತದ ಸಂಸ್ಕೃತಿ–ಪರಂಪರೆ ಪ್ರಸಾರ

ಮಿಜೋರಾಂ ಮಾಜಿ ರಾಜ್ಯಪಾಲ ಕುಮ್ಮನಂ ರಾಜಶೇಖರನ್

ಮೈಸೂರು, ಮೇ 31(ಪಿಎಂ)– ಅತ್ಯುತ್ತಮ ಆಧ್ಯಾತ್ಮಿಕ ಗುರುಗಳಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಭಕ್ತರಲ್ಲಿ ಆಧ್ಯಾತ್ಮದ ಜೊತೆಗೆ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಅಲ್ಲದೆ, ಸ್ವಾಮಿ ವಿವೇಕಾನಂದರ ಧ್ಯೇಯದಂತೆ ಜಗತ್ತಿನಾದ್ಯಂತ ಭಾರತದ ಸಂಸ್ಕೃತಿ ಮತ್ತು ಪರಂಪರೆಯನ್ನು ಆಶ್ರಮದ ಮೂಲಕ ಪಸರಿಸುತ್ತಿದ್ದಾರೆ ಎಂದು ಮಿಜೋರಾಂ ಮಾಜಿ ರಾಜ್ಯಪಾಲ ಕುಮ್ಮನಂ ರಾಜಶೇಖರನ್ ಹೇಳಿದರು.

ಆಶ್ರಮದ ನಾದ ಮಂಟಪದಲ್ಲಿ ಮಂಗಳವಾರ ನಡೆದ 'ಚೈತನ್ಯಾರ್ಚನೆ' ಕಾರ್ಯಕ್ರಮದಲ್ಲಿ ಶ್ರೀಗಳಿಗೆ ಜನ್ಮದಿನದ ಶುಭಾಶಯ ಕೋರಿ, ಅವರ ಆಶೀರ್ವಾದ ಪಡೆದು ಅವರು ಮಾತನಾಡಿದರು. ಶ್ರೀಗಳದ್ದು ಹೋಲಿಕೆಗೆ ಮೀರಿದ ವ್ಯಕ್ತಿತ್ವ ಅವರು ತಮ್ಮ ಜೀವನವನ್ನು ಮಾನವರ ಸೇವೆಗೆ ಮಾತ್ರವಲ್ಲದೆ, ಸಕಲ ಜೀವಿಗಳಿಗೂ ಮುಡಿಪಾಗಿಟ್ಟಿದ್ದಾರೆ. ಪರಿಸರ ಸಂರಕ್ಷಣೆಯಲ್ಲಿ ಅವರ ಬದ್ಧತೆ ಅನುಕರಣೀಯ. ವರ್ಷದ ಹಿಂದೆ ಕೇರಳದ ಜಟಾಯು ಬಂಡೆಯಲ್ಲಿರುವ ರಾಮ ಮಂದಿರಕ್ಕೆ ಶ್ರೀಗಳು ಭೇಟಿ ನೀಡಿದ್ದರು. ಅಲ್ಲಿನ 11 ಅಡಿ ಎತ್ತರದ ರಾಮನ ವಿಗ್ರಹಕ್ಕೆ ಸ್ವಾಮೀಜಿಯವರು ಚಿನ್ನದ ಫಲಕಗಳನ್ನು ಅಳವಡಿಸಿದ್ದರು. ಅಲ್ಲಿನ ಪರಿಸರ ಸಂರಕ್ಷಣೆಗೆ ಶ್ರೀಗಳ ಸಂಪೂರ್ಣ ಬೆಂಬಲ ಮತ್ತು ಮಾರ್ಗದರ್ಶನ ಕೋರುತ್ತೇನೆ ಎಂದು ತಿಳಿಸಿದರು.

ಎಮ್ಮೆ ಮೇಯಿಸುತ್ತಿದ್ದ ಮಹಿಳೆಯಿಂದ ಸರ ಕದ್ದು ಪರಾರಿ

ನಾಗಮಂಗಲ, ಮೇ 31– ಜಮೀನಿನಲ್ಲಿ ಎಮ್ಮೆ ಮೇಯಿಸುತ್ತಿದ್ದ ರೈತ ಮಹಿಳೆಯಿಂದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಬಗ್ಗೆ ತಾಲೂಕಿನ ಶಿಖರನಹಳ್ಳಿ ಗ್ರಾಮದಿಂದ ವರದಿಯಾಗಿದೆ.




ಗ್ರಾಮದ ರೈತ ಮಹಿಳೆ ಕವಿತಾ (44) ಅವರು ಶಿಖರನಹಳ್ಳಿಯ ಅಡಿಕೆ ತೋಟದಲ್ಲಿ ಮೇ 28ರಂದು ಮಧ್ಯಾಹ್ನ ಎಮ್ಮೆ ಮೇಯಿಸುತ್ತಿದ್ದರು. ಆ ಸಂದರ್ಭದಲ್ಲಿ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು, ಇಲ್ಲಿ ಮರ ಕುಯ್ಯುವವರು ಎಲ್ಲಿದ್ದಾರೆ ಎಂದು ಕೇಳಿದ್ದಾರೆ.

ತಮಗೆ ಗೊತ್ತಿಲ್ಲ ಎಂದು ಕವಿತಾ ಹೇಳುತ್ತಿದ್ದಂತೆಯೇ ಮರ ಕುಯ್ಯುವ ಶಬ್ದ ಬರುತ್ತಿದೆ. ನೀವು ನಿಶ್ಯಬ್ಧವಾಗಿರಿ, ಅವರಿಗೆ ನಾವು ಫೋನ್ ಮಾಡುತ್ತೇವೆ. ಫೋನ್ ಇದ್ದರೆ ಕೊಡಿ ಎಂದು ಕೇಳಿದ್ದಾರೆ. ತಮ್ಮ ಬಳಿ ಫೋನ್ ಇಲ್ಲ ಎಂದು ಹೇಳಿದಾಗ ಅವರಲ್ಲಿ ಒಬ್ಬ ಕವಿತಾ ಅವರ ಕತ್ತಿನಲ್ಲಿದ್ದ 70 ಗ್ರಾಂ ತೂಕದ ಎರಡೆಳೆ ಚಿನ್ನದ ಸರವನ್ನು ಕಿತ್ತು ಬೈಕ್‌ನಲ್ಲಿ ಇಬ್ಬರೂ ಪರಾರಿಯಾಗಿದ್ದಾರೆ. ಈ ಸಂಬಂಧ ಬಿಂಡಿಗನವಿಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯದಲ್ಲಿ 197 ಮಂದಿಗೆ ಕೋವಿಡ್; 1 ಸಾವು

ಬೆಂಗಳೂರು: ರಾಜ್ಯದಲ್ಲಿ ಕೋವಿಡ್–19 ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಗಳ ಅವಧಿಯಲ್ಲಿ 197 ಹೊಸ ಪ್ರಕರಣ ಪತ್ತೆಯಾಗಿದೆ. ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 39,52,102ಕ್ಕೆ ಏರಿಕೆಯಾಗಿದೆ.



273 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ರಾಜ್ಯದಲ್ಲಿ ಸದ್ಯ 2,029 ಸಕ್ರಿಯ ಪ್ರಕರಣಗಳಿರುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿ ನೀಡಿದೆ.

ಬೆಂಗಳೂರಿನಲ್ಲಿ 178 ಹೊಸ ಪ್ರಕರಣ ಪತ್ತೆಯಾಗಿದ್ದು, 250 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಬೆಳಗಾವಿಯಲ್ಲಿ 1, ಚಿಕ್ಕಬಳ್ಳಾಪುರದಲ್ಲಿ 1, ಬೆಂಗಳೂರು ಗ್ರಾಮಾಂತರದಲ್ಲಿ 4, ದಕ್ಷಿಣ ಕನ್ನಡದಲ್ಲಿ 4, ಹಾಸನದಲ್ಲಿ 1 ಮೈಸೂರಿನಲ್ಲಿ 4, ರಾಯಚೂರು, 1, ರಾಮನಗರ 1, ಉತ್ತರ ಕನ್ನಡ 1, ವಿಜಯಪುರದಲ್ಲಿ 1 ಪ್ರಕರಣ ದೃಢಪಟ್ಟಿದೆ.

ಬಾಗಲಕೋಟೆಯಲ್ಲಿಂದು ಸೋಂಕಿನಿಂದ ಒಬ್ಬರು ಮೃತಪಟ್ಟಿದ್ದಾರೆ. ಇಂದು 17,716 ಟೆಸ್ಟ್ ನಡೆಸಲಾಗಿದೆ. ಸೋಂಕಿನ ಪ್ರಮಾಣ ಶೇಕಡಾ 1.11 ರಷ್ಟಿದ್ದು, ಮರಣ ಪ್ರಮಾಣ ಶೇ. 0.50 ರಷ್ಟಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿಯಲ್ಲಿ ತಿಳಿಸಿದೆ.

ನೇಪಾಳದ ತಾರಾ ನಾಗರಿಕ ವಿಮಾನ ಪತನ

ದುರಂತ ಸ್ಥಳದಿಂದ ಎಲ್ಲಾ 22 ಮೃತದೇಹ ವಶ

ಕಠ್ಮಂಡು, ಮೇ 31– ನಾಲ್ವರು ಭಾರತೀಯರು ಸೇರಿದಂತೆ 22 ಮಂದಿಯನ್ನು ಹೊತ್ತು ಸಾಗುತ್ತಿದ್ದ ತಾರಾ ವಿಮಾನ ನೇಪಾಳದ ಪರ್ವತ ಪ್ರದೇಶವಾದ ಮುಸ್ತಾಂಗ್ ಜಿಲ್ಲೆಯಲ್ಲಿ ಪತನಗೊಂಡಿದ್ದು, ಅದರ ಅವಶೇಷಗಳು ಪತ್ತೆಯಾದ ಸ್ಥಳದಿಂದ ಕೊನೆಯ ಮೃತದೇಹವನ್ನು ಹೊರತೆಗೆಯುವ ಮೂಲಕ ಎಲ್ಲ ಪ್ರಯಾಣಿಕರ ಮೃತದೇಹ ಸಿಕ್ಕಿದೆ ಎಂದು ನೇಪಾಳ ಸೇನೆ ಮಂಗಳವಾರ ತಿಳಿಸಿದೆ.

ಭಾನುವಾರ ಪರ್ವತಮಯ ಮುಸ್ತಾಂಗ್ ಜಿಲ್ಲೆಯಲ್ಲಿ ಪತನಗೊಂಡ ತಾರಾ ಏರ್ ವಿಮಾನದ ಅವಶೇಷಗಳ ಸ್ಥಳದಿಂದ ರಕ್ಷಕರು 21 ಶವಗಳನ್ನು ವಶಪಡಿಸಿಕೊಂಡ ಒಂದು ದಿನದ ನಂತರ, ಕೊನೆಯ ದೇಹವನ್ನು ಪಡೆಯಲು ನೇಪಾಳದ ಅಧಿಕಾರಿಗಳು ಶೋಧಕಾರ್ಯ ಪುನರಾರಂಭಿಸಿದರು. ಕೊನೆಯ ಮೃತದೇಹ ಪತ್ತೆಯಾಗಿದೆ. ಅಪಘಾತದ ಸ್ಥಳದಿಂದ ಉಳಿದ 12 ಮೃತ ದೇಹಗಳನ್ನು ಕಠ್ಮಂಡುವಿಗೆ ತರಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ನೇಪಾಳ ಸೇನಾ ವಕ್ತಾರ ಬ್ರಿಗೇಡಿಯರ್ ಜನರಲ್ ನಾರಾಯಣ್ ಸಿಲ್ವಾಲ್ ಟ್ವೀಟ್ ಮಾಡಿದ್ದಾರೆ. ಸೋಮವಾರ ರಾತ್ರಿಯ ವೇಳೆಗೆ, ರಕ್ಷಕರು ಅಪಘಾತದ ಸ್ಥಳದಿಂದ 21 ಶವಗಳನ್ನು ಹೊರತೆಗೆದಿದ್ದಾರೆ ಎಂದು ನೇಪಾಳದ ನಾಗರಿಕ ವಿಮಾನಯಾನ ಪ್ರಾಧಿಕಾರ (ಸಿಎಎಎನ್) ಬಿಡುಗಡೆ ಮಾಡಿದ ಹೇಳಿಕೆ ತಿಳಿಸಿದೆ.

ಮೈಸೂರಲ್ಲಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ, ಆಕ್ರೋಶ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿ ಒಕ್ಕೂಟದ ಜಂಟಿ ಆಶ್ರಯದಲ್ಲಿ ನಡೆದ ಪ್ರತಿಭಟನೆ.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಕರವೇ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ಗೋವಿಂದರಾವ್ ಸ್ಮಾರಕ ಭವನದ ಎದುರು ಎಐಟಿಯುಸಿ ವತಿಯಿಂದ ಪ್ರತಿಭಟನೆ ನಡೆಸುತ್ತಿರುವುದು.

ಮೈಸೂರು, ಮೇ 31(ಪಿಎಂ)– ಪಠ್ಯ ಪುಸ್ತಕ ಪರಿಷ್ಕರಣೆ ವಿರೋಧಿಸಿ, ರೈತ ಮುಖಂಡ ರಾಕೇಶ್ ಟಿಕಾಯತ್ ಮೇಲಿನ ಹಲ್ಲೆ ಖಂಡಿಸಿ ಹಾಗೂ ವಿವಿಧ ಕಾರಣಗಳ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿ ಮಂಗಳವಾರ ಸರಣಿ ಪ್ರತಿಭಟನೆಗಳು ನಡೆದವು.

ರೈತ ಸಂಘ, ದಸಂಸ ಒಕ್ಕೂಟ: ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ವಜಾಗೊಳಿಸಲು ಆಗ್ರಹಿಸಿ ಹಾಗೂ ರೈತ ಮುಖಂಡ ರಾಕೇಶ್ ಟಿಕಾಯತ್ ಮೇಲಿನ ಹಲ್ಲೆ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿ ಒಕ್ಕೂಟದ ಜಂಟಿ ಆಶ್ರಯದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯು ಶೂದ್ರ, ಹಿಂದುಳಿದ, ದಲಿತ–ದಮನಿತ, ಆದಿವಾಸಿ–ಬುಡಕಟ್ಟು ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ವಿರೋಧಿಯಾಗಿದೆ. ಈ ಸಮಿತಿಯು ಮಾನವೀತೆ, ಶಾಂತಿ–ಪ್ರೀತಿ ಮತ್ತು ಮೈತ್ರಿ ಸಾರಿದ ಗೌತಮ ಬುದ್ಧರ ಕುರಿತ ಪಠ್ಯ ಕೈಬಿಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಲ್ಲದೆ, ರೈತ ಮುಖಂಡ ರಾಕೇಶ್ ಟಿಕಾಯತ್ ಮೇಲಿನ ಹಲ್ಲೆಯನ್ನು ಖಂಡಿಸಿದರು. ಹಲ್ಲೆ ಹಿಂದಿರುವ ವ್ಯಕ್ತಿ ಮತ್ತು ಶಕ್ತಿಗಳು ಯಾರೆಂಬುದರ ಸಂಬಂಧ ಪಾರದರ್ಶಕ ತನಿಖೆ ನಡೆಸಬೇಕು. ಅಲ್ಲದೆ, ಕೃತ್ಯ ನಡೆಸಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲಾಧಿಕಾರಿಗಳೇ ಮನವಿ ಸ್ವೀಕರಿಸಬೇಕು ಎಂದು ಪಟ್ಟು ಹಿಡಿದ ಪ್ರತಿಭಟನಾಕಾರರು, ಜಿಲ್ಲಾಧಿಕಾರಿ ಕಚೇರಿ ಗೇಟ್ ಬಳಿ ಜಮಾಯಿಸಿದರು. ಈ ವೇಳೆ ಹೆಚ್ಚುವರಿ ಜಿಲ್ಲಾಧಿಕಾರಿ ಮಂಜುನಾಥಸ್ವಾಮಿ, ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿ ಜಿಲ್ಲಾಧಿಕಾರಿಗಳು ಕಚೇರಿಯಲ್ಲಿ ಇಲ್ಲ ಎಂದು ಹೇಳುವ ಮೂಲಕ ಪ್ರತಿಭಟನಾಕಾರರ ಮನವೊಲಿಸಿದರು. ಬಳಿಕ ಪ್ರತಿಭಟನೆ ಕೈಬಿಡಲಾಯಿತು.

ಮುಖಂಡರಾದ ಬೆಟ್ಟಯ್ಯ ಕೋಟೆ, ಪ್ರೊ.ಕೆ.ಎಸ್.ಭಗವಾನ್, ಪ್ರೊ.ಕಾಳೇಗೌಡ ನಾಗವಾರ, ಜಿ.ಪಿ.ಬಸವರಾಜು, ಪುನೀತ್, ಕಲ್ಲಹಳ್ಳಿ ಕುಮಾರ್, ಹೊಸಕೋಟೆ ಬಸವರಾಜು ಸೇರಿದಂತೆ ನೂರಾರು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ದಾಸಪ್ಪ ವೃತ್ತದಲ್ಲಿ ಎನ್‌ಎಸ್‌ಯುಐ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಕರವೇ: ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪರಿಷ್ಕರಣೆ ಸಮಿತಿ ರದ್ದುಪಡಿಸಿ, ಹಿಂದಿನ ವರ್ಷದ ಪಠ್ಯವನ್ನೇ ಮುಂದುವರೆಸಬೇಕೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಸಂಘಟನೆಯ ಜಿಲ್ಲಾಧ್ಯಕ್ಷ ಪ್ರವೀಣ್‌ಕುಮಾರ್ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತ್ಯೇಕ ಪ್ರತಿಭಟನೆ ನಡೆಸಲಾಯಿತು.

ಎಐಟಿಯುಸಿ: ಗೋವಿಂದರಾವ್ ಸ್ಮಾರಕ ಭವನದಲ್ಲಿ ನಡೆಯುತ್ತಿರುವ ಎಐಟಿಯುಸಿಯ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ರಾಕೇಶ್ ಟಿಕಾಯತ್ ಮೇಲಿನ ದಾಳಿ ಖಂಡಿಸಿ ಭವನದ ಮುಂಭಾಗ ಕಪ್ಪು ಬಾವುಟ ಹಿಡಿದು ಪ್ರತಿಭಟನೆ ನಡೆಸಿದರು. ಇದೊಂದು ಅಮಾನುಷವಾದ ದಾಳಿ. ಸರ್ಕಾರವು ಸಂಘ ಪರಿವಾರದ ಸಂಘಟನೆಗಳನ್ನು ಬಳಸಿಕೊಂಡು ಪ್ರಜಾಪ್ರಭುತ್ವವನ್ನು ನಾಶಗೊಳಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಶೇಷಾದ್ರಿ, ಸಿಪಿಐ ಕರ್ನಾಟಕ ರಾಜ್ಯ ಮಂಡಲಿ ಕಾರ್ಯದರ್ಶಿ ಸಾತಿ ಸುಂದರೇಶ್ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಿಪಿಐ(ಎಂ): ಅಗತ್ಯ ವಸ್ತುಗಳು, ಪೆಟ್ರೋಲ್– ಡೀಸೆಲ್ ಬೆಲೆ ಏರಿಕೆ ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವತಿಯಿಂದ ಗಾಂಧಿ ಚೌಕದಲ್ಲಿ ಪ್ರತಿಭಟನೆ ನಡೆಸಲಾಯಿತು. ಪತ್ರಕರ್ತ ಟಿ.ಗುರುರಾಜ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಸಮಿತಿ ಸದಸ್ಯರಾದ ಕೆ.ಬಸವರಾಜ್, ಜಿ. ಜಯರಾಂ, ಲ.ಜಗನ್ನಾಥ್, ಮುಖಂಡ ರಾದ ಅಣ್ಣಪ್ಪ, ರಾಮದಾಸ್ ಭಂಡಾರಿ, ಸುಬ್ರಹ್ಮಣ್ಯ, ಸಿದ್ದಯ್ಯ, ಶಾಕುಂತಲ, ಈಶ್ವರ್, ಚಂದ್ರಶೇಖರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಗಾಂಧಿ ಚೌಕದಲ್ಲಿ ಸಿಪಿಐ(ಎಂ) ವತಿಯಿಂದ ನಡೆದ ಪ್ರತಿಭಟನೆ.

ಎನ್‌ಎಸ್‌ಯುಐ: ಕಾಂಗ್ರೆಸ್ ಪಕ್ಷ ಮತ್ತು ಕಾಂಗ್ರೆಸ್ ನಾಯಕರ ಕುರಿತು ಸಂಸದ ಪ್ರತಾಪ್ ಸಿಂಹ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಎನ್‌ಎಸ್‌ಯುಐ (ಕಾಂಗ್ರೆಸ್ ವಿದ್ಯಾರ್ಥಿ ಘಟಕ) ವತಿಯಿಂದ ದಾಸಪ್ಪ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಾಪಸಿಂಹ ತಮ್ಮ ಉದ್ಧಟತನದ ಹೇಳಿಕೆಗಳನ್ನು ನಿಲ್ಲಿಸಬೇಕು. ಒಂದು ವೇಳೆ ಇದೇ ರೀತಿಯ ಮಾತುಗಳನ್ನಾಡಿದರೆ ಅವರ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು. ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ರಫೀಕ್ ಅಲಿ, ಮುಖಂಡರಾದ ರೋಹಿತ್ ಸಿಂಗ್, ಪ್ರಶಾಂತ್, ಬಾಲರಾಜ್, ಸಾಗರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಶೀಘ್ರದಲ್ಲೇ ಕಾಂಗ್ರೆಸ್, ಜೆಡಿಎಸ್ ಶಾಸಕರು ಬಿಜೆಪಿ ಸೇರ್ಪಡೆ

ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಕಾರ್ಯದರ್ಶಿ ಸಿದ್ದರಾಜು ವಿಶ್ವಾಸ



ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಮತ್ತಷ್ಟು ಮುಖಂಡರು ಬಿಜೆಪಿ ಸೇರ್ಪಡೆಗೊಳ್ಳಲಿದ್ದಾರೆ. ಪಕ್ಷದಲ್ಲಿ ಗೊಂದಲ ಸೃಷ್ಟಿ ಮಾಡುವ ಯಾವ ವ್ಯಕ್ತಿಗಳಾದರೂ ಅಂಥವರ ವಿರುದ್ಧ ಪಕ್ಷ ಕಠಿಣ ಕ್ರಮ ಕೈಗೊಳ್ಳಲಿದೆ. ರಾಜ್ಯ ಸರ್ಕಾರದಿಂದ ಹಿಂದುಳಿದ ತಾಲೂಕಿಗೆ ಕೊಟ್ಟಿರುವ ಅನುದಾನ ಯೋಜನೆಗಳು ಬಹಳಷ್ಟಿದೆ. ಇದರಿಂದ ಅಭಿವೃದ್ಧಿಯತ್ತ ಹೆಚ್.ಡಿ.ಕೋಟೆ ಸಾಗುತ್ತಿದ್ದು, ಸಮಗ್ರ ಮಾಹಿತಿಗಳನ್ನು ಸಾರ್ವಜನಿಕರ ಮುಂದೆ ನೀಡಲಾಗುವುದು.
– ಎಂ.ಅಪ್ಪಣ್ಣ, ರಾಜ್ಯ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆಯ ಅಧ್ಯಕ್ಷರು

ಹೆಚ್.ಡಿ.ಕೋಟೆ, ಮೇ 31(ಮಂಜು)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಪ್ರಾಂತ್ಯದಿಂದ ಹೆಚ್ಚು ಬಿಜೆಪಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು, ಪಕ್ಷ ಪ್ರಬಲವಾಗಿರುವುದರಿಂದ ಈ ಭಾಗದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ಶಾಸಕರು ಬಿಜೆಪಿಗೆ ಶೀಘ್ರದಲ್ಲೇ ಸೇರ್ಪಡೆಗೊಳ್ಳುತ್ತಿದ್ದಾರೆ ಎಂದು ರಾಜ್ಯ ಬಿಜೆಪಿ ಕಾರ್ಯದರ್ಶಿ ಸಿದ್ದರಾಜು ಹೇಳಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ತಾಲೂಕಿನ ಅನೇಕ ಭಾಗಗಳಿಂದ ನೂರಾರು ಕಾರ್ಯಕರ್ತರು ಕಾಂಗ್ರೆಸ್ ಮತ್ತು ಜೆಡಿಎಸ್ ತೊರೆದು ಬಿಜೆಪಿ ಸೇರ್ಪಡೆ ಮಾಡಿಕೊಂಡು ಮಾತನಾಡಿದ ಅವರು, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಅಧಿಕಾರ ಹಿಡಿಯುವುದು ಬಹುತೇಕ ಖಚಿತವಾಗಿದ್ದು, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮತ್ತು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಿಂದ ರಾಜ್ಯ ಮತ್ತು ದೇಶ ಅಭಿವೃದ್ಧಿಯತ್ತ ಸಾಗಿದೆ ಎಂದರು.

ಕರ್ನಾಟಕದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಪಕ್ಷವನ್ನು ಬಲಿಷ್ಠಗೊಳಿಸಲು ಪಕ್ಷ ಮತ್ತು ಸಂಘದವರು ಸಕ್ರಿಯವಾಗಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದ ಅವರು, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದಲ್ಲಿ ನಡೆಯುತ್ತಿರುವ ಒಳಜಗಳ ಮತ್ತು ಧೋರಣೆಯಿಂದಾಗಿ ಬೇಸತ್ತಿರುವ ಈ ಪಕ್ಷಗಳ ಶಾಸಕರು ಬಿಜೆಪಿ ಪಕ್ಷಕ್ಕೆ ಶೀಘ್ರದಲ್ಲೇ ಸೇರ್ಪಡೆಗೊಳ್ಳುತ್ತಿದ್ದಾರೆ. ಮೈಸೂರು ಭಾಗದಲ್ಲಿ ಪಕ್ಷದ ರಾಜ್ಯ ಉಪಾಧ್ಯಕ್ಷರಾಗಿರುವ ವಿಜಯೇಂದ್ರ ಅವರು ಸ್ಪರ್ಧಿಸುವ ವಿಚಾರವಾಗಿ ಪಕ್ಷ ಮತ್ತು ಸಂಘಟನೆಯವರು ಶೀಘ್ರದಲ್ಲಿ ತೀರ್ಮಾನ ಮಾಡಲಿದ್ದಾರೆ ಎಂದು ತಿಳಿಸಿದರು.

ಹೆಚ್.ಡಿ.ಕೋಟೆ ಕ್ಷೇತ್ರ ಬಿಜೆಪಿ ಗೆಲುವಿಗೆ ಪೂರಕವಾಗಿದ್ದು, ತಾಲೂಕು ಉಸ್ತುವಾರಿ ಪಡೆದಿರುವ ಎಂ.ಅಪ್ಪಣ್ಣ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವುದ ರಿಂದ ಅನೇಕರು ಪಕ್ಷ ಸೇರ್ಪಡೆಗೊಳ್ಳುತ್ತಿದ್ದಾರೆ. ಪಕ್ಷದ ಸಂಘಟನೆಯಲ್ಲಿ ಹೆಚ್ಚಾಗಿ ಸಕ್ರಿಯವಾಗಿ ತೊಡಗಿಕೊಂಡಿರುವರನ್ನು ಹಾಗೂ ನಿಷ್ಠರಾಗಿರುವರನ್ನು ಕ್ಷೇತ್ರದ ಅಭ್ಯರ್ಥಿಯನ್ನು ಮಾಡುವಲ್ಲಿ ಪಕ್ಷ ಮುಂದಾಗಿದೆ. ನಲ್ಲೂರು ಶಂಕರೇಗೌಡ ಅವರು ಪ್ರಭಾವಿ ಮುಖಂಡರಾಗಿದ್ದು, ಇವರ ಸೇರ್ಪಡೆಯಿಂದ ಪಕ್ಷಕ್ಕೆ ಶಕ್ತಿ ಬಂದಂತಾಗಿದೆ ಎಂದರು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಗುರುಸ್ವಾಮಿ, ತಾಲೂಕು ಸಂಘಟನೆ ಉಸ್ತುವಾರಿ ಎಂ.ಅಪ್ಪಣ್ಣ, ಮುಖಂಡರಾದ ನಲ್ಲೂರು ಶಂಕರೇಗೌಡ, ಪ್ರಭಾಕರ, ರವೀಶ್, ಮಂಜುನಾಥ್, ಮಹೇಶ್‌ಗೌಡ ಸೇರಿದಂತೆ ಇತರರಿದ್ದರು.

ಸರಗೂರು: ಶಿಕ್ಷಕ ಶ್ರೀನಿವಾಸ್ ನಾಗರಾಜುಗೆ ಬೀಳ್ಕೊಡುಗೆ



ಸರಗೂರು, ಮೇ 31(ನಾಗೇಶ್)– ಪಟ್ಟಣದ ಜೆಎಸ್‌ಎಸ್ ಶಾಲೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ವಿಜ್ಞಾನ ವಿಭಾಗದ ಶಿಕ್ಷಕ ಶ್ರೀನಿವಾಸ್‌ನಾಗರಾಜು ಅವರಿಗೆ ಶಾಲೆಯಿಂದ ಬೀಳ್ಕೊಡುಗೆ ನೀಡಲಾಯಿತು. ಈ ವೇಳೆ ಶಿಕ್ಷಕ ಶ್ರೀನಿವಾಸ್‌ನಾಗರಾಜು ಮಾತನಾಡಿ, ವಿದ್ಯಾರ್ಥಿಗಳೊಂದಿಗೆ ಒಡನಾಟ ನನಗೆ ತೃಪ್ತಿ ತಂದಿದೆ. ಎಲ್ಲರೂ ಓದಿನ ಬಗ್ಗೆ ಹೆಚ್ಚು ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಮುಖ್ಯಶಿಕ್ಷಕ ಮಹಮದ್ ಅಂಜುಮ್‌ಪಾಷ ಮಾತನಾಡಿ, ಶಿಕ್ಷಕ ಶ್ರೀನಿವಾಸ್ ನಾಗರಾಜು ಅವರು ವಿದ್ಯಾರ್ಥಿ ಪಾಲಿಗೆ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದರು. ಇವರ ಸೇವಾ ಮನೋಭಾವನೆಯಿಂದ ಶಾಲೆಗೆ ಉತ್ತಮ ಫಲಿತಾಂಶ ಬಂದಿದೆ ಎಂದು ತಿಳಿಸಿದರು. ಈ ವೇಳೆ ಶಿಕ್ಷಕರಾದ ಗಂಗಾಧರಯ್ಯ, ಮನೋಜ್, ಬಸವಣ್ಣ, ಸಿದ್ದಲಿಂಗಸ್ವಾಮಿ, ಕಲಾವತಿ, ಶಾಂತಲಾ, ಜ್ಯೋತಿರಾಣಿ, ಜಯಲಕ್ಷ್ಮಿ, ಶೀಲಾ, ಶೋಭಾರಾಣಿ, ಅಂತೋಣಿಮೇರಿ, ಜಯಣ್ಣ, ನಂದಿನಿ, ಶಂಕರ್, ಮಹದೇವಸ್ವಾಮಿ, ಕೃಷ್ಣಮೂರ್ತಿ, ಸಿಬ್ಬಂದಿ ಇದ್ದರು.

ಪದವೀಧರ ಕ್ಷೇತ್ರದ ಚುನಾವಣೆ: ಜೆಡಿಎಸ್ ಅಭ್ಯರ್ಥಿ ಬೆಂಬಲಿಸಲು ಮನವಿ



ಜೂ. 13ರಂದು ನಡೆಯಲಿರುವ ಚಿಂತಕರ ಚಾವಡಿ ಎಂದೇ ಕರೆಯಲ್ಪಡುವ ವಿಧಾನಪರಿಷತ್ ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ದೇವೇಗೌಡರ ವರ್ಚಸ್ಸು ಪಕ್ಷದ ಅಭ್ಯರ್ಥಿ ಪರವಾಗಿ ಕೆಲಸ ಮಾಡಲಿದ್ದು, ಪದವೀಧರ ಮತದಾರರು ಮೊದಲ ಪ್ರಾಶಸ್ತ್ಯದ ಮತ ನೀಡುವ ಮೂಲಕ ನಮ್ಮ ಅಭ್ಯರ್ಥಿಗೆ ಗೆಲುವಿನ ಮಾಲೆ ತೊಡಿಸಲಿದ್ದಾರೆ.
– ಬಾಲಕೃಷ್ಣ, ಜೆಡಿಎಸ್ ಅಧ್ಯಕ್ಷರು, ವರುಣಾ ವಿಧಾನಸಭಾ ಕ್ಷೇತ್ರ

ತಿ.ನರಸೀಪುರ, ಮೇ 31(ಎಸ್‌ಕೆ)– ಶಿಕ್ಷಣ ಕ್ಷೇತ್ರದಲ್ಲಿ ಪದವೀಧರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಕಂಕಣಬದ್ಧರಾಗಿರುವ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಅವರಿಗೆ ಪದವೀಧರ ಮತದಾರರು ಪ್ರಥಮ ಪ್ರಾಶಸ್ತ್ಯದ ಮತ ನೀಡಬೇಕು ಎಂದು ವರುಣಾ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಕೆಂಪಯ್ಯನ ಹುಂಡಿ ಬಾಲಕೃಷ್ಣ ಮನವಿ ಮಾಡಿದರು.

ತಿರುಮಕೂಡಲಿನ ಆದಿ ಚುಂಚನಗಿರಿ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪದವೀಧರರು, ಶಿಕ್ಷಕರು, ವಿವಿಧ ಇಲಾಖೆಯ ಸರ್ಕಾರಿ ನೌಕರರ ಹಲವು ಸಮಸ್ಯೆಗಳ ಬಗ್ಗೆ ಮಾಹಿತಿ ಹೊಂದಿರುವ ರಾಮು ಅವರ ಪರವಾಗಿ ವರುಣಾ ಕ್ಷೇತ್ರದಲ್ಲಿ ಪ್ರತಿಯೊಂದು ಶಿಕ್ಷಣ ಸಂಸ್ಥೆ, ಆಸ್ಪತ್ರೆ, ನ್ಯಾಯಾಲಯ ಸೇರಿದಂತೆ ಪದವೀಧರರ ಪಟ್ಟಿ ಹಿಡಿದು ಕಾರ್ಯಕರ್ತರ ಸಹಕಾರದೊಂದಿಗೆ ಮನೆ ಮನೆಗೆ ತೆರಳಿ ಪ್ರಚಾರ ಮಾಡಲಾಗುತ್ತಿದೆ. ಹೋದೆಡೆಯಲ್ಲೆಲ್ಲ ಉತ್ತಮ ಪ್ರತಿಕ್ರಿಯೆ ದೊರಕುತ್ತಿದೆ. ಹಾಗಾಗಿ ಈ ಬಾರಿ ಪಕ್ಷದ ಕಾರ್ಯಕರ್ತರ ಸಂಘಟಿತ ಸಹಕಾರದೊಂದಿಗೆ ಕಾರ್ಯತಂತ್ರ ರೂಪಿಸುತ್ತಿದ್ದು, ಮೊದಲ ಸುತ್ತಿನಲ್ಲೇ ಅಭ್ಯರ್ಥಿ ಹೆಚ್.ಕೆ.ರಾಮು ಹೆಚ್ಚಿನ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಕ್ಷದ ಹಿರಿಯ ಮುಖಂಡ ಚನ್ನೇಗೌಡ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಎಂ.ಶಿವಪ್ರಸಾದ್, ಆಲಗೂಡು ಸತೀಶ್, ಕೆಂಪಯ್ಯನಹುಂಡಿ ಬಸವರಾಜು, ಶೇಖರ್, ಮಹೇಶ್, ಪಾಪು, ಯಡದೊರೆ ಸತೀಶ್, ಸಿದ್ದರಾಮನಹುಂಡಿ ಮಹೇಶ್ ಹಾಜರಿದ್ದರು.

ಮಗು ಸಮೇತ ಬೆಂಕಿ ಹಚ್ಚಿಕೊಂಡು ತಾಯಿ ಆತ್ಮಹತ್ಯೆ

ನಂಜನಗೂಡು, ಮೇ 31– ಮಾನಸಿಕ ಖಿನ್ನತೆಗೆ ಒಳಗಾದ ತಾಯಿ ತನ್ನ 8 ತಿಂಗಳ ಮಗು ಸಮೇತ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ದಾಸನೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಹದೇವಸ್ವಾಮಿ ಅವರ ಪತ್ನಿ ಸಿಂಧು(24) ಹಾಗೂ 8 ತಿಂಗಳ ಮಗು ಮುದ್ದು ಮೃತ ದುರ್ದೈವಿಗಳು.

ಚಾಮರಾಜನಗರ ಜಿಲ್ಲೆಯ ಸಿಂಧು ದಾಸನೂರಿನ ಮಹದೇವಸ್ವಾಮಿ ಜೊತೆ 9 ವರ್ಷಗಳ ಹಿಂದೆ ವಿವಾಹವಾಗಿತ್ತು. ಇವರಿಗೆ ನಾಲ್ಕಾರು ಬಾರಿ ಗರ್ಭಪಾತವಾಗಿದ್ದು, ಕಳೆದ ವರ್ಷ ಗಂಡು ಮಗುವಿಗೆ ಜನ್ಮ ನೀಡಿದ್ದ ಸಿಂಧು ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದರು. ನಿನ್ನೆ ರಾತ್ರಿ ಮನೆಯಲ್ಲಿ ಯಾರೂ ಇಲ್ಲದ ವೇಳೆ ಮಗು ಸಮೇತ ಬೆಂಕಿ ಹಚ್ಚಿಕೊಂಡಿದ್ದಾರೆ. ಕೂಡಲೇ ತಾಯಿ, ಮಗುವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ತಾಯಿ ಮಗು ಇಬ್ಬರೂ ಮೃತಪಟ್ಟಿದ್ದಾರೆ. ಈ ಸಂಬಂಧ ದೊಡ್ಡ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೀವಿಂಗ್ ಟುಗೆದರ್‌ನಲ್ಲಿದ್ದ ಮಹಿಳೆ ಅನುಮಾನಾಸ್ಪದ ಸಾವು: ಪ್ರಿಯಕರ ಎಸ್ಕೇಪ್

ಹೆಚ್.ಡಿ.ಕೋಟೆ, ಮೇ 31– ಲಿವಿಂಗ್ ಟುಗೆದರ್‌ನಲ್ಲಿದ್ದ ಮಹಿಳೆಯೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಪಟ್ಟಣದಲ್ಲಿ ನಡೆದಿದ್ದು, ನಂತರ ಆಕೆಯ ಪ್ರಿಯಕರ ನಾಪತ್ತೆಯಾಗಿದ್ದಾನೆ.

ಪಟ್ಟಣದ ಶಿವಾಜಿ ರಸ್ತೆಯ ನಿವಾಸಿ ಶೋಭಾ(40) ಮೃತಪಟ್ಟ ಮಹಿಳೆ. ಈಕೆ ಕೆಲವು ವರ್ಷಗಳ ಹಿಂದೆ ಪತಿಯನ್ನು ಕಳೆದುಕೊಂಡು ಮಗಳೊಂದಿಗೆ ವಾಸವಾಗಿದ್ದರು. ಇತ್ತೀಚೆಗೆ ಮಂಜುನಾಥ್ ಎಂಬಾತನೊಂದಿಗೆ ಒಡನಾಟ ಬೆಳೆಸಿಕೊಂಡಿದ್ದ ಶೋಭಾ, ಆತನೊಂದಿಗೆ ಲಿವಿಂಗ್ ಟುಗೆದರ್‌ನಲ್ಲಿದ್ದಳು ಎನ್ನಲಾಗಿದೆ.

ಆದರೆ, ಸೋಮವಾರ ಶೋಭಾ ಶವ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಈಕೆಯ ಸಾವಿಗೆ ಮಂಜುನಾಥ್ ಕಾರಣ ಎಂದು ಪುತ್ರಿ ಪೂಜಾ ದೂರು ನೀಡಿದ್ದಾರೆ.

ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನಾಪತ್ತೆಯಾದ ಮಂಜುನಾಥ್ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ವಿಜಯೇಂದ್ರ ಭವಿಷ್ಯದ ನಾಯಕ: ಶಾಸಕ ಬಿ.ಹರ್ಷವರ್ಧನ್



ಮಲ್ಕುಂಡಿ, ಮೇ 31(ಚನ್ನಪ್ಪ)– ರಾಜ್ಯದಲ್ಲಿ ಬಿಜೆಪಿ ಸರ್ಕಾರವಿರುವುದಕ್ಕೆ 2019ರ ವಿಧಾನಸಭಾ ಉಪಚುನಾವಣೆಯಲ್ಲಿ ಬಿ.ವೈ.ವಿಜಯೇಂದ್ರ ಅವರ ಪಾತ್ರವೇ ಕಾರಣ ಎಂದು ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ನಂಜನಗೂಡಿನಲ್ಲಿ ಸುದ್ದಿಗಾರರು ಎಂಎಲ್‌ಸಿ ಚುನಾವಣೆಯಲ್ಲಿ ಸ್ಪರ್ಧಿಸಲು ವಿಜಯೇಂದ್ರ ಅವರಿಗೆ ಅವಕಾಶ ಸಿಗದಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮುಂದಿನ ದಿನಗಳಲ್ಲಿ ವಿಜಯೇಂದ್ರ ದೊಡ್ಡ ಪಾತ್ರ ನಿರ್ವಹಿಸಬೇಕಾಗಿದೆ. ವಿಧಾನಪರಿಷತ್‌ಗೆ ಅವಕಾಶ ಸಿಗಬಹುದೆಂಬ ನಿರೀಕ್ಷೆ ಇಟ್ಟುಕೊಂಡಿದ್ದೆವು. ಆದರೆ, ಅವರಿಗೆ ಅವಕಾಶ ನೀಡದಿರುವುದು ನಮಗೆ ನಿರಾಶೆಯಾಗಿದೆ ಎಂದರು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ವಿಜಯೇಂದ್ರ ಅವರಿಗೆ ಹಾದಿ ಸುಗಮವಾಗಿದ್ದು, ವರುಣಾ ಕ್ಷೇತ್ರದಿಂದಲೇ ಕಣಕ್ಕಿಳಿಯಬೇಕೆಂಬುದೇ ನಮ್ಮ ಆಸೆ. ಅವರು ಅಭ್ಯರ್ಥಿಯಾಗುತ್ತಾರೆ ಎಂದು ಈ ಭಾಗದ ಜನರು ಕಾಯುತ್ತಿದ್ದಾರೆ ಎಂದು ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ಈ ಬೆಳವಣಿಗೆಯಿಂದ ಅವರಿಗೆ ಪ್ರಸ್ತುತ ಹಿನ್ನಡೆಯಾಗಿರಬಹುದು. ಆದರೆ ಅವರು, ನಮ್ಮ ಭವಿಷ್ಯದ ನಾಯಕ. ಪಕ್ಷ ಅವರಿಗೆ ಅವಕಾಶ ನೀಡಲಿದೆ. ವಿಜಯೇಂದ್ರ ಇನ್ನೂ ಯುವಕರಾಗಿದ್ದು, ನಾವು ಅವರೊಂದಿಗಿದ್ದೇವೆ ಎಂದು ತಿಳಿಸಿದರು.

ರಾಕೇಶ್ ಟಿಕಾಯಿತ್ ಮೇಲೆ ಹಲ್ಲೆ: ನಂ.ಗೂಡು, ತಿ.ನರಸೀಪುರದಲ್ಲಿ ಪ್ರತಿಭಟನೆ



ನಂಜನಗೂಡಿನ ತಾಲೂಕು ಆಡಳಿತ ಕಚೇರಿ ಮುಂಭಾಗ ರೈತರ ಪ್ರತಿಭಟನೆ.



ತಿ.ನರಸೀಪುರದ ಟೋಲ್ ಬಳಿ ರಸ್ತೆ ತಡೆ ನಡೆಸಿ ರೈತರ ಪ್ರತಿಭಟನೆ.

ನಂಜನಗೂಡು/ತಿ.ನರಸೀಪುರ, ಮೇ 31(ಸುದರ್ಶನ್/ಎಸ್‌ಕೆ)– ರೈತ ಮುಖಂಡ ರಾಕೇಶ್ ಟಿಕಾಯಿತ್ ಮೇಲೆ ಹಲ್ಲೆ ನಡೆಸಿದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ ನಂಜನಗೂಡು ಹಾಗೂ ತಿ.ನರಸೀಪುರದಲ್ಲಿ ರೈತ ಸಂಘಟನೆ ಹಾಗೂ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಂಜನಗೂಡು ವರದಿ: ನಗರದ ತಾಲೂಕು ಆಡಳಿತ ಕಚೇರಿ ಮುಂದೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಸಮಾವೇಶಗೊಂಡು ಕೈಗೆ ಕಪ್ಪುಪಟ್ಟಿ ಧರಿಸಿಕೊಂಡು ಪ್ರತಿಭಟಿಸಿದರು. ಮಸಿ ಬಳಿದ ಆರೋಪಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಮ್ಮಾವು ರಘು ಮಾತನಾಡಿ, ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಆತ್ಮಾವಲೋಕನ ಸಭೆಯಲ್ಲಿ ರಾಕೇಶ್ ಟಿಕಾಯತ್ ಅವರ ಮೇಲೆ ಹಲ್ಲೆ ನಡೆಸಿದ್ದು ಖಂಡನೀಯ ಎಂದರು. ಪ್ರತಿಭಟನೆಯಲ್ಲಿ ಮಹಿಳಾ ಅಧ್ಯಕ್ಷೆ ದೇವಮ್ಮ, ಗೌರವಾಧ್ಯಕ್ಷ ವೆಂಕಟೇಶ್, ಮುಖಂಡರಾದ ನಾಗರಾಜು, ಶಿವಣ್ಣ, ನೂರಾರು ರೈತ ಮುಖಂಡರು ಪಾಲ್ಗೊಂಡಿದ್ದರು.

ತಿ.ನರಸೀಪುರ ವರದಿ: ತಾಲೂಕಿನ ಯಡದೊರೆ ಬಳಿ ರಾಷ್ಟ್ರೀಯ ಹೆದ್ದಾರಿ 212ರ ಟೋಲ್ ಹತ್ತಿರ ಸಮಾವೇಶಗೊಂಡ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು 4 ಗಂಟೆಗೂ ಹೆಚ್ಚು ಕಾಲ ರಸ್ತೆತಡೆ ನಡೆಸಿ ಟಿಕಾಯಿತ್ ಮೇಲಿನ ಹಲ್ಲೆಯನ್ನು ಖಂಡಿಸಿದರು.

ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್ ಮಾತನಾಡಿ, ರೈತ ನಾಯಕ ಟಿಕಾಯತ್ ಮೇಲಿನ ಹಲ್ಲೆಯನ್ನು ರೈತರ ಮೇಲಿನ ಹಲ್ಲೆ ಎಂದು ಪರಿಗಣಿಸಬೇಕು. ದೇಶಕ್ಕೆ ಅನ್ನ ನೀಡುವ ರೈತನನ್ನು ಅವಮಾನ ಮಾಡುವುದು ಅತ್ಯಂತ ವಿಕೃತ ಮನಸ್ಥಿತಿ. ಒಬ್ಬ ರೈತನಾಯಕನಿಗೆ ಅಪಮಾನ ಮಾಡಿದ ವ್ಯಕ್ತಿಗಳನ್ನು ಗೂಂಡಾ ಕಾಯ್ದೆಯಡಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡ ಪರಶಿವಮೂರ್ತಿ ಮಾತನಾಡಿ, ಕಿಡಿಗೇಡಿಗಳು ಪತ್ರಕರ್ತರ ಸೋಗಿನಲ್ಲಿ ಬಂದು ಟಿಕಾಯತ್ ಮೇಲೆ ಹಲ್ಲೆ ನಡೆಸಿ, ಮುಖಕ್ಕೆ ಮಸಿ ಬಳಿದಿರುವುದು ಖಂಡನೀಯ. ಹಾಗಾಗಿ, ದುಷ್ಕೃತ್ಯವೆಸಗಿದ ಕಿಡಿಗೇಡಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಬನ್ನಹಳ್ಳಿ ರಾಜೇಂದ್ರ, ಟೌನ್ ಅಧ್ಯಕ್ಷ ಸಿಸ್ಟಮ್ ಸಿದ್ದು, ನಂಜನಗೂಡು ತಾಲೂಕು ಅಧ್ಯಕ್ಷ ಹಾಡ್ಯ ರವಿ, ಕುರುಬೂರು ಪ್ರದೀಪ್, ವಾಚ್ ಕುಮಾರ್, ನಿಂಗರಾಜು, ಯೋಗೇಶ್, ರವೀಶ್, ರಂಗರಾಜು, ಲೋಕೇಶ್, ಸುರೇಶ, ನಾಗರಾಜು, ಸಂತೋಷ್, ಮಹದೇವ್, ಮಹಾಲಿಂಗನಾಯಕ, ಕಿರಗಸೂರು ಕುಮಾರ್, ಬಸವ, ಸುಬ್ರಮಣ್ಯ ಇತರರಿದ್ದರು.

ವಿ.ಜಿ. ಅಪ್ಪಾಜಿಗೌಡ ನಿಧನ



ಪಿರಿಯಾಪಟ್ಟಣ, ಮೇ 31(ವೀರೇಶ್)– ಜಿಲ್ಲಾ ಪರಿಷತ್ ಮಾಜಿ ಉಪಾಧ್ಯಕ್ಷ ಹಾಗೂ ಪಿರಿಯಾಪಟ್ಟಣ ತಾಲೂಕು ಕುರುಬ ಸಮಾಜದ ಅಧ್ಯಕ್ಷ ವಿ.ಜಿ.ಅಪ್ಪಾಜಿಗೌಡ (74) ತಾಲೂಕಿನ ವಡ್ಡರಹಳ್ಳಿಯ ಸ್ವಗೃಹದಲ್ಲಿ ಮಂಗಳವಾರ ನಿಧನರಾದರು.

ಈ ಹಿಂದೆ ಜೆಡಿಎಸ್ ಪಕ್ಷದಿಂದ ಜಿಲ್ಲಾ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದ ಇವರು ಜಿಲ್ಲಾ ಪರಿಷತ್ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ನಂತರ ನಡೆದ ರಾಜಕೀಯ ಬೆಳವಣಿಗೆಯಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷರಾಗಿ, ಬಿಜೆಪಿ ತಾಲೂಕು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಇವರು ಹಾಲಿ ತಾಲೂಕು ಕುರುಬ ಸಮಾಜದ ಅಧ್ಯಕ್ಷರಾಗಿ ತಾಲೂಕಿನಾದ್ಯಂತ ಅಪಾರ ಜನಮನ್ನಣೆ ಗಳಿಸಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ವಡ್ಡರಹಳ್ಳಿಯ ಅವರ ಜಮೀನಿನಲ್ಲಿ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಾಸಕ ಕೆ.ಮಹದೇವ್, ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಮಾಜಿ ಶಾಸಕ ಕೆ.ವೆಂಕಟೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಖಂಡರಾದ ಹೆಚ್.ಡಿ.ಗಣೇಶ್, ನೀಲಂಗಾಲ ಜಯಣ್ಣ, ದೊಡ್ಡಸ್ವಾಮೇಗೌಡ, ಜಗದೀಶ್, ಜವರಪ್ಪ, ಲೋಹಿತ್, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಕೋಟೆ ಶಿವಪ್ಪ, ರಾಜ್ಯ ಪ್ರಾದೇಶಿಕ ಕುರುಬ ಸಮಾಜದ ಅಧ್ಯಕ್ಷ ವಿ.ಸುಬ್ರಹ್ಮಣ್ಯ, ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ, ತಾಲೂಕು ಕುರುಬ ಸಮಾಜದ ಮುಖಂಡರು ಸೇರಿದಂತೆ ಇತರೆ ಗಣ್ಯರು ಮೃತರ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ಸಿಎಂ ಗಾದಿಗಾಗಿ ಸಿದ್ದರಾಮಯ್ಯ, ಡಿಕೆಶಿ ನಡುವೆ ಪೈಪೋಟಿ: ಎಸ್‌ಟಿಎಸ್



ಕೆಆರ್.ನಗರ ಮೇ31(ಕೆಟಿಆರ್)–ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ನಡೆಸುತ್ತಿದ್ದು, ಇಬ್ಬರು ಒಂದೇ ವೇದಿಕೆಯಲ್ಲಿ ಸಭೆಯನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಇನ್ನು ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಲು ಹೇಗೆ ಸಾಧ್ಯ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ವ್ಯಂಗ್ಯವಾಡಿದರು.

ಹೊಸಹಳ್ಳಿ ಗ್ರಾಮದಲ್ಲಿ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ ಪರ ಮತಯಾಚಿಸಿ ಮಾತನಾಡಿದ ಅವರು, ಶಿಕ್ಷಕರು, ಪದವೀಧರರ ಸಮಸ್ಯೆಗಳ ಬಗ್ಗೆ ಕಾಳಜಿ ಇರುವ ಮೈ.ವಿ. ರವಿಶಂಕರ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ನಗರ ಮತ್ತು ಜಿಲ್ಲೆಯ ಅಭಿವೃದ್ಧಿಗೆ ಹಲವು ಕೊಡುಗೆ ನೀಡಲಾಗಿದೆ. ಮೈಸೂರು–ಬೆಂಗಳೂರು ನಡುವೆ ದಶಪಥ ರಸ್ತೆ, ಮೈಸೂರು ವಿಮಾನ ನಿಲ್ದಾಣ ನಿರ್ಮಾಣದ ಜೊತೆಗೆ ಮೈಸೂರಿನಲ್ಲಿ ಚಿತ್ರನಗರಿ ಆರಂಭಿಸಲೂ ರಾಜ್ಯ ಸರ್ಕಾರ ನಿರ್ಧರಿಸಿದೆ. ಆದರೆ, ಕಾಂಗ್ರೆಸ್ ಏನು ಮಾಡಿದೆ? ಎಂದು ಪ್ರಶ್ನಿಸಿದರು.

ರಾಜ್ಯ ಬಿಜೆಪಿ ಮುಖ್ಯ ವಕ್ತಾರ ಎಂ.ಜಿ.ಮಹೇಶ್ ಮಾತನಾಡಿ, ದೇಶದಲ್ಲಿ ಬದಲಾವಣೆಯಾಗಿದೆ. ಆದರೆ ಇಲ್ಲಿ ಏಕೆ ಆಗಿಲ್ಲ. ದೇಶವನ್ನು ಕಟ್ಟಲು, ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸಲು ತಾಲೂಕಿನಿಂದ ಅರಳಿದ ಕಮಲ ಕಳುಹಿಸಲು ತೀರ್ಮಾನಿಸಿ, ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ಕೈಜೋಡಿಸಿ ಎಂದು ಮನವಿ ಮಾಡಿದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಜಿಲ್ಲಾ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್, ಖಾದಿ ನಿಗಮ ಮಂಡಳಿ ಅಧ್ಯಕ್ಷ ಕೃಷ್ಣಪ್ಪಗೌಡ, ಜಿಲ್ಲಾ ಸಹ ವಕ್ತಾರ ಡಾ.ವಸಂತಕುಮಾರ್, ತಾಲೂಕು ಬಿಜೆಪಿ ಅಧ್ಯಕ್ಷ ಕೆ.ವೈ.ಮಂಜುನಾಥ್, ಮಹಿಳಾ ಅಧ್ಯಕ್ಷೆ ದಾಕ್ಷಾಯಿಣಿ, ಜಿಪಂ ಮಾಜಿ ಸದಸ್ಯೆ ನಳಿನಾಕ್ಷಿ ವೆಂಕಟೇಶ್, ಮುಖಂಡರಾದ ಮಲ್ಲಿಕಾರ್ಜುನಪ್ಪ, ಹೆಚ್.ವಿ.ಗೋಪಾಲ್, ನಾಗೇಶ್, ಉಮಾಶಂಕರ್, ಗೋಪಾಲ್‌ರಾಜ್, ಮಾರ್ಕಂಡಯ್ಯ ಸೇರಿದಂತೆ ಇನ್ನಿತರರು ಹಾಜರಿದ್ದರು.

ಮೈಸೂರು ಬೇಸಿಗೆ ರೇಸುಗಳು

3 ನೇ ದಿನ, ಬುಧವಾರ 01-06-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಅಡ್ಜುಡಿಕೇಟ್ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. **ಮ.2.00ಕ್ಕೆ**
1. ಮ್ಯಾಜಿಕ್ ಸರ್ಕಲ್ 2. ಥಿಯಾಮಾರಿಯ 3. ಕಮ್ ಅಲೈವ್

II. ಚೈತನ್ಯ ಚಕ್ರಮ್ ಪ್ಲೇಟ್– 1200 ಮೀ. ರೇಟೆಡ್ 00 ರಿಂದ 25.–**ಮ.2.30ಕ್ಕೆ**
1. ಕಂಟ್ರೇಸ್ ಡಿಲೈಟ್ 2. ಸ್ಕಾರ್ಲೆಟ್ ಪ್ರಿನ್ಸಸ್ 3. ಏರ್ ವೆಲೊಸಿಟಿ

III. ಮಳವಳ್ಳಿ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. **ಮ.3.00ಕ್ಕೆ**
1. ಫ್ಲೈಯಿಂಗ್ ಪಾಲ್ಕನ್ 2. ಮಿಸ್ ಚೀನಾ 3. ಕಂಟ್ರೇಸ್ ಫ್ಲಾಷ್

IV. ಅರಕಲ್‌ಗೂಡು ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. **ಮ.3.30ಕ್ಕೆ**
1. ಮಾರ್ಗನೈಟ್ 2. ಸ್ವಿಸ್ ಟೈಗರ್ಸ್ 3. ರಾಯಲ್ ಡಿಸೈನ್

V. ಮೈಸೂರ್ ಸಿಟಿ ಕಾರ್ಪೋರೇಷನ್ ಟ್ರೋಫಿ–1200 ಮೀ. **ಸಂ.4.00ಕ್ಕೆ**
1. ಲಪರ್ಡ್ 2. ಟ್ರಾಸರ್ ಬುಲ್ಲೆಟ್ 3. ಹಿರೋಹಿಸಮ್

VI. ಗೋವಾ ಪ್ಲೇಟ್ –1600 ಮೀ. ರೇಟೆಡ್ 60 ರಿಂದ 85 **ಸಂ.4.30ಕ್ಕೆ**
1. ಟ್ರಸ್ಟ್ ಬಾಂಡ್ 2. ಚಾಶಿನಿ

VII. ಕೊಳ್ಳೇಗಾಲ ಪ್ಲೇಟ್ –1400 ಮೀ. ರೇಟೆಡ್ 40 ರಿಂದ 65. **ಸಂ.5.00ಕ್ಕೆ**
1. ಆಲ್ ಗ್ರೇಟ್ ಫ್ರೆಂಡ್ಸ್ 2. ವಿಂಡ್ ವಿಸ್ಲರ್ 3. ವೈಲ್ಡ್ ಸ್ಪೆಲ್

ದಿನದ ಅತ್ಯುತ್ತಮ..............	: ಮ್ಯಾಜಿಕ್ ಸರ್ಕಲ್
ಡಬ್ಬಲ್..............	: ಫ್ಲೈಯಿಂಗ್ ಪಾಲ್ಕನ್, ಲಪರ್ಡ್
ಜಾಕ್‌ಪಾಟ್..............	: 3, 4, 5, 6 ಮತ್ತು 7
I ಟ್ರಿಬಲ್..............	: 2, 3 ಮತ್ತು 4
II ಟ್ರಿಬಲ್..............	: 5, 6 ಮತ್ತು 7
ಎಕ್ಸ್‌ಆಕ್ಟ್..............	: 6 ಮತ್ತು 7

ಟಿಪ್‌ಸ್ಟರ್ ಪಿಜಿಸಿ


ಖ್ಯಾತ ಉದ್ಯಮಿಗಳಾದ
ಎಸ್.ರಮೇಶ್‌ಗೌಡ
ರವರಿಗೆ
50
ಹುಟ್ಟು ಹಬ್ಬದ
ಶುಭಾಶಯಗಳು
VISMAYA
ADVERTISERS
ಶುಭಕೋರುವವರು
ಯತೀಶ್ ಮತ್ತು ಚಿರಂತನ್